ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 10 ಭಾನುವಾರ 2023

ಸಂಪುಟ: 44 | ಸಂಚಿಕೆ: 146 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜಿ–20 ಶೃಂಗಸಭೆ: ದೆಹಲಿ ಘೋಷಣೆಗೆ ವಿಶ್ವ ನಾಯಕರ ಒಕ್ಕೊರಲ ಸಹಮತ

ಜಾಗತಿಕ ವಿಶ್ವಾಸದ ಕೊರತೆ ನೀಗಲು ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ

ನವದೆಹಲಿ, ಸೆ. 9–ಮಹತ್ವದ ಬೆಳವಣಿಗೆಯಲ್ಲಿ ಜಿ–20 ಶೃಂಗಸಭೆಯಲ್ಲಿ 'ದೆಹಲಿ ಘೋಷಣೆ' ಕುರಿತು ಸದಸ್ಯ ರಾಷ್ಟ್ರಗಳಲ್ಲಿ ಒಮ್ಮತ ಮೂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ.

ದೆಹಲಿ ಪ್ರಗತಿ ಮೈದಾನದ ಜಾಗತಿಕ ವೇದಿಕೆ ಭಾರತ ಮಂಟಪದಲ್ಲಿ ನಡೆದ ಶೃಂಗಸಭೆಯ ಎರಡನೇ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಮೋದಿ, ಒಂದು ಒಳ್ಳೆಯ ಸುದ್ದಿ ಸಿಕ್ಕಿದೆ. ನಮ್ಮ ತಂಡಗಳ ಕಠಿಣ ಪರಿಶ್ರಮ ಮತ್ತು ನಿಮ್ಮಗಳ ಸಹಕಾರದಿಂದ ನವದೆಹಲಿ ಘೋಷಣೆಯಲ್ಲಿ ಒಮ್ಮತ ಮೂಡಿದೆ ಎಂದರು. ಜಿ–20 ಭಾರತ ನಾಯಕರ ಶೃಂಗಸಭೆಯಲ್ಲಿ ದೆಹಲಿ ಘೋಷಣೆಯನ್ನು ●9ನೇ ಪುಟಕ್ಕೆ



ಆಫ್ರಿಕನ್ ಒಕ್ಕೂಟಕ್ಕೆ ಜಿ–20 ಕಾಯಂ ಸದಸ್ಯತ್ವ

ಪ್ರಧಾನಿ ಮೋದಿ ತಮ್ಮ ಸ್ವಾಗತ ಭಾಷಣದ ಆರಂಭದಲ್ಲಿ ಆಫ್ರಿಕನ್ ಒಕ್ಕೂಟಕ್ಕೆ ಜಿ–20 ಕಾಯಂ ಸದಸ್ಯತ್ವ ನೀಡಲಾಗಿದೆ ಎಂದು ಘೋಷಿಸಿದರು. ಅಲ್ಲದೇ ಆಫ್ರಿಕನ್ ಒಕ್ಕೂಟದ ಅಧ್ಯಕ್ಷ ಅಜಾಲಿ ಅಸ್ಸೌಮಾನಿ ಅವರನ್ನು ಆಹ್ವಾನಿಸಿ, ಜಿ–20 ಕಾಯಂ ಸದಸ್ಯರ ಆಸನದಲ್ಲಿ ಕುಳಿತುಕೊಳ್ಳುವಂತೆ ಹೇಳಿದರು.

ಭಾರತವು ಕಳೆದ ಡಿ.1ರಂದು ಜಿ–20 ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿದ್ದು, ಜಿ–20ಕ್ಕೆ ಸಂಬಂಧಪಟ್ಟಂತೆ ಸುಮಾರು 200 ಸಭೆಗಳನ್ನು ದೇಶಾದ್ಯಂತ 60 ನಗರಗಳಲ್ಲಿ ಆಯೋಜಿಸಿತ್ತು.

ಪಂಚೆ ಹಾಕಿಕೊಂಡು, ಹ್ಯೂಬ್ಲೋಟ್ ವಾಚ್ ಕಟ್ಟಿಕೊಂಡರೆ 'ಸಮಾಜವಾದಿ' ಆಗೋಲ್ಲ!

ದೇವರಾಜ ಅರಸು ಕಾರಲ್ಲಿ ಕೂತರೆ ಅರಸು ಆಗೋಕ್ಕಾಗಲ್ಲ...!

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್ ಪರೋಕ್ಷ ವಾಗ್ದಾಳಿ ● ಈಡಿಗ, ಬಿಲ್ಲವ, ನಾಮಧಾರಿ, ದೀವರು ಸೇರಿದಂತೆ ಅತೀ ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಸಿಎಂಗೆ ನಿರಂತರ ಟಾಂಗ್



" ಅವರು (ಬಿ.ಕೆ. ಹರಿಪ್ರಸಾದ್) ನನ್ನ ಹೆಸರು ಹೇಳಿದ್ದಾರಾ? ಸುಮ್ಮನೇ ಜನರಲ್ಲಾಗಿ ಮಾತನಾಡುವ ಮಾತುಗಳಿಗೆಲ್ಲಾ ಉತ್ತರ ಕೊಡುವುದಕ್ಕೆ ಆಗಲ್ಲ.
– ಮುಖ್ಯಮಂತ್ರಿ ಸಿದ್ದರಾಮಯ್ಯ

" ನನ್ನ ಬಗ್ಗೆ ಅಭಿಮಾನ ಇಟ್ಟುಕೊಂಡು ಅವರು (ಬಿ.ಕೆ.ಹರಿಪ್ರಸಾದ್) ಮಾತನಾಡಿರುವುದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ.
–ಸಚಿವ ಡಾ.ಜಿ.ಪರಮೇಶ್ವರ್

ಬೆಂಗಳೂರು, ಸೆ.9(ಕೆಎಂಶಿ)– ಪಂಚೆ ಹಾಕಿಕೊಂಡು, ಹ್ಯೂಬ್ಲೋಟ್ ವಾಚ್ ಕಟ್ಟಿಕೊಂಡು, ಒಳಗಡೆ ಖಾಕಿ ಚಡ್ಡಿ ಹಾಕಿಕೊಂಡು ಸಮಾಜವಾದಿ ಎಂದು ಹೇಳಿದರೆ ಆಗೋದಿಲ್ಲ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರು ಪ್ರಸ್ತಾಪಿಸದೇ ಅವರ ವಿರುದ್ಧ ಇಂದಿಲ್ಲಿ ವಾಗ್ದಾಳಿ ಮಾಡಿದ್ದಾರೆ.

ಹಿಂದಿನ ಯಾವ ಮುಖ್ಯಮಂತ್ರಿಗಳು ಜಾತಿ ರಾಜಕಾರಣ ಮಾಡಲಿಲ್ಲ. ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಸೇರಿದಂತೆ ಯಾರೂ ಜಾತೀಯತೆ ಮಾಡಲಿಲ್ಲ. ಆದರೆ ಈಗ ಸಮಾಜವಾದಿ ಮುಖವಾಡ ಇಟ್ಟುಕೊಂಡು ಜಾತಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಜರಿದರು. ದೇವರಾಜ ಅರಸು ಕಾರಿನಲ್ಲಿ ಕುಳಿತರೆ ನೀವು ದೇವರಾಜ ಅರಸು ಆಗುವುದಿಲ್ಲ. ಅರಸು ಚಿಂತನೆ ಇರಬೇಕು ಎಂದು ಸಿದ್ದರಾಮಯ್ಯ ಹೆಸರೇಳದೆ ಟಾಂಗ್ ಕೊಟ್ಟರು. ನಗರದಲ್ಲಿ ಇಂದು ನಡೆದ ಈಡಿಗ, ಬಿಲ್ಲವ, ನಾಮಧಾರಿ, ದೀವರು ಮತ್ತು ಅತೀ ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಮಾತನಾಡಿದ ಅವರು, ನಾನು ಮೂರು ಸಾರಿ ಸೋತಿರಬಹುದು. ಆದರೆ ಇನ್ನೂ ಸತ್ತಿಲ್ಲ ಎಂದು ಕಿಡಿಕಾರಿದರು.

ಪರಿಶಿಷ್ಟ ಜಾತಿಯ ಡಾ. ಜಿ.ಪರಮೇಶ್ವರ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಸುದೀರ್ಘ ಸೇವೆ ಸಲ್ಲಿಸಿದರು. ಅಂತಹವರಿಗೆ ದಕ್ಕಬೇಕಾದ ಹುದ್ದೆಯನ್ನು ತಪ್ಪಿಸಿದ್ದೀರಿ. ಪಕ್ಷ ಸಂಘಟನೆಗಾಗಿ ದುಡಿದವರಿಗೆ ಉಪಮುಖ್ಯಮಂತ್ರಿ ಸ್ಥಾನ ಕೊಡಲು ಮೀನಾಮೇಷ ಎಣಿಸಿದಿರಿ. ಇದೀಗ ಅವರಿಗೆ ಕೇವಲ ಮಂತ್ರಿ ಮಾಡಿದ್ದೀರಿ.

ಸರ್ಕಾರದಲ್ಲಿ ಡಾ. ಜಿ. ಪರಮೇಶ್ವರ್, ಸತೀಶ್ ಜಾರಕಿಹೊಳಿ ಹಾಗೂ ಅಲ್ಪಸಂಖ್ಯಾತರೊಬ್ಬರನ್ನು ಉಪಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಬಹುದಿತ್ತು. ಅದನ್ನು ಮಾಡದೇ ನಾನೇ ಹಿಂದುಳಿದ ನಾಯಕ ಎಂದು ಬಿಂಬಿಸಿಕೊಳ್ಳಲು ಹೊರಟಿದ್ದೀರಿ ಎಂದು ಜರಿದರು.


ರಾಜ್ಯದಲ್ಲಿ ನಮ್ಮ ಸಮುದಾಯ ಅತಂತ್ರವಾಗಿದೆ. ಇದು ಅತಂತ್ರ ಸಮುದಾಯದ ವೇದಿಕೆ. ಚುನಾವಣೆ ಬರುವಾಗ ಘೋಷಣೆ ಮಾಡಿದ್ದೇ ಮಾಡಿದ್ದು. ಅಧಿಕಾರಕ್ಕೆ ಬರುವಾಗ ಏನೇನೂ ಭರವಸೆ ಕೊಡಲಾಗುತ್ತದೆ. ಅಧಿಕಾರಕ್ಕೆ ಬಂದ ಮೇಲೆ ಅತೀ ಹಿಂದುಳಿದ ವರ್ಗಗಳು ನೆನಪೇ ಆಗುವುದಿಲ್ಲ ಎಂದರು. ಅಧಿಕಾರ ಸಿಕ್ಕ ತಕ್ಷಣವೇ ಸಮುದಾಯಕ್ಕೆ ಕೊಡಬೇಕಾಗಿರುವುದು ಇನ್ನೂ ಸಿಕ್ಕಿಲ್ಲ. ನಮ್ಮ ಸಮುದಾಯಕ್ಕೆ ಶಕ್ತಿ ಏನು ಎಂಬುದು ನಾವೇ ಇನ್ನು ತಿಳಿದುಕೊಳ್ಳುವ ಪರಿಸ್ಥಿತಿ ಬಂದಿದೆ ಎಂದರು. ರಾಜ್ಯ ಸರ್ಕಾರ ಸಾರಾಯಿ, ಹೆಂಡ ಮಾರಿ ಬದುಕುತ್ತಿರುವವರ ●9ನೇ ಪುಟಕ್ಕೆ

ಆಂಧ್ರದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಬಂಧನ

ರಾಜ್ಯಾದ್ಯಂತ ಟಿಡಿಪಿ ಕಾರ್ಯಕರ್ತರ ಭಾರಿ ಪ್ರತಿಭಟನೆ

ಅಮರಾವತಿ: ಸ್ಕಿಲ್ ಡೆವಲಪ್‌ಮೆಂಟ್ ಯೋಜನೆ ಹಗರಣ ಸಂಬಂಧ ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ಶನಿವಾರ ಮುಂಜಾನೆ ಆಂಧ್ರ ಪ್ರದೇಶ ನಂದ್ಯಾಲ ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ಆಂಧ್ರದ ಕೌಶಲ್ಯಾಭಿವೃದ್ಧಿ ನಿಗಮದಲ್ಲಿ 371 ಕೋಟಿ ಭ್ರಷ್ಟಾಚಾರ ನಡೆಸಿರುವ ಆರೋಪದಡಿ ನಾಯ್ಡು ಅವರನ್ನು ಬಂಧಿಸಲಾಗಿದ್ದು, 2014ರಲ್ಲಿ ಅವರು ಸಿಎಂ ಆಗಿದ್ದ ಅವಧಿಯಲ್ಲಿ ನಡೆದಿರುವ ಹಗರಣ ಇದಾಗಿದೆ. ಈ ಪ್ರಕರಣದಲ್ಲಿ ಚಂದ್ರಬಾಬು ನಾಯ್ಡು ಮೊದಲನೇ ಆರೋಪಿಯಾಗಿದ್ದಾರೆ. ಹೈಕೋರ್ಟ್ ಸೂಚನೆ ಮೇರೆಗೆ ಉಂದು ಬೆಳಗಿನ ಜಾವ 6 ಗಂಟೆಗೆ ಸಿಐಡಿ ಪೊಲೀಸರು ನಾಯ್ಡು ಅವರನ್ನು ಬಂಧಿಸಿದರು.



ತೀವ್ರ ಪ್ರತಿರೋಧ: ಸಿಐಡಿ ಪೊಲೀಸರು ಬಂಧಿಸಲು ತೆರಳಿದ್ದಾಗ ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ ಟಿಡಿಪಿ ಕಾರ್ಯಕರ್ತರಿಂದ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಈ ವೇಳೆ ಎಸ್‌ಪಿಜಿ ಪಡೆಗಳು ಸಹ ಪೊಲೀಸರಿಗೆ ನಾಯ್ಡು ವಶಕ್ಕೆ ಪಡೆಯಲು ಅನುಮತಿ ನೀಡಲಿಲ್ಲ. ನಿಯಮಗಳ ಪ್ರಕಾರ ಬೆಳಗ್ಗೆ 5.30 ರವರೆಗೆ ನಾಯ್ಡುರನ್ನು ಭೇಟಿಯಾಗಲು ಯಾರಿಗೂ ಅವಕಾಶ ನೀಡಲಾಗುವುದಿಲ್ಲ ಎಂದು ಎಸ್‌ಪಿಜಿ ಪಡೆಗಳು ತಿಳಿಸಿದವು. ಹೀಗಾಗಿ ಬೆಳಗ್ಗೆ 6 ಗಂಟೆಯವರೆಗೆ ಕಾದು ನಾಯ್ಡು ಅವರ ವಾಹನದಿಂದ ಕೆಳಗಿಳಿಸಿ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಮಿತ್ರ ಭಾನುವಾರ 10 ಸೆಪ್ಟೆಂಬರ್ 2023

ಐಟಿ ಕಂಪನಿಯಲ್ಲಿ ಕೆಲಸ ನೀಡುವುದಾಗಿ ನಂಬಿಸಿ ವಿದ್ಯಾರ್ಥಿಗೆ 1.09 ಲಕ್ಷ ವಂಚನೆ

ಮೈಸೂರು, ಸೆ. 9– ಐಟಿ ಕಂಪನಿಯಲ್ಲಿ ಕೆಲಸ ನೀಡುವುದಾಗಿ ನಂಬಿಸಿ ವಿದ್ಯಾರ್ಥಿಯಿಂದ 1.09 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮೈಸೂರಿನ ಜೆ.ಪಿ.ನಗರದ ಓಂಕಾರ್ ಲೇಔಟ್ ನಿವಾಸಿಯಾಗಿರುವ ವಿದ್ಯಾರ್ಥಿ ಎಸ್. ಆಕಾಶ್(23) ವಂಚನೆಗೊಳಗಾದವರಾಗಿದ್ದು, ಇವರಿಗೆ 8596813328 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತಾನು ಶೈನ್ ಕಂಪನಿಯಿಂದ ಕರೆ ಮಾಡುತ್ತಿರುವುದಾಗಿ ತಿಳಿಸಿದ್ದಲ್ಲದೇ, ಆಕಾಶ್‌ಗೆ ಆ ಕಂಪನಿಯಲ್ಲಿ ಕೆಲಸ ನೀಡುವುದಾಗಿ ಹೇಳಿದ್ದಾನೆ. ನಂತರ ರಿಜಿಸ್ಟ್ರೇಷನ್ ಮತ್ತು ಲ್ಯಾಪ್‌ಟಾಪ್ ಶುಲ್ಕವೆಂದು ಆನ್‌ಲೈನ್ ಮೂಲಕ 1.09 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಟೆಲಿಗ್ರಾಂ ಆ್ಯಪ್‌ನಲ್ಲಿ ಬಿಸಿನೆಸ್ ಟಾಸ್ಕ್ ಪೂರೈಸಿದ ಕಮಿಷನ್ ನೀಡುವುದಾಗಿ ನಂಬಿಸಿ ಮೈಸೂರಿನ ಜೆ.ಪಿ. ನಗರ ನಿವಾಸಿ ಸ್ಫೂರ್ತಿರಾಜ್ ವಿವೇಕ್(44) ಎಂಬ ಗೃಹಿಣಿಯಿಂದ 12.38 ಲಕ್ಷ ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಸಿಬಿಐ ಅಧಿಕಾರಿಗಳೆಂದು ಬೆದರಿಸಿ ವ್ಯಕ್ತಿಯಿಂದ 2.95 ಲಕ್ಷ ಸುಲಿಗೆ

ಚಾಮರಾಜನಗರ,ಸೆ.9–ಹಳೇ ನೋಟು ಮತ್ತು ಕಾಯಿನ್‌ಗಳನ್ನು ಹೆಚ್ಚಿನ ಬೆಲೆಗೆ ಖರೀದಿಸುವುದಾಗಿ ನಂಬಿಸಿ, ನಂತರ ಸಿಬಿಐ ಅಧಿಕಾರಿಗಳ ಹೆಸರಿನಲ್ಲಿ ಬೆದರಿಸಿ ವರ್ತಕರೊಬ್ಬರಿಂದ 2.95 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಚಾಮರಾಜನಗರ ಟೌನ್ ನಾಯಕರ ಬೀದಿಯ ನಿವಾಸಿ ರವಿಕುಮಾರ್ ರಾವ್ (48) ವಂಚನೆಗೊಳಗಾದವರಾಗಿದ್ದು, ಇವರು ತಮ್ಮ ಮೊಬೈಲ್‌ನಲ್ಲಿ ಯೂಟ್ಯೂಬ್ ಚಾನಲ್ ನೋಡುತ್ತಿದ್ದಾಗ ಹಳೇ ನೋಟು ಮತ್ತು ಕಾಯಿನ್‌ಗಳನ್ನು ಹೆಚ್ಚಿನ ಬೆಲೆಗೆ ಖರೀದಿಸುವ ಜಾಹೀರಾತು ಬಂದಿದೆ. ಅದರಲ್ಲಿದ್ದ ಮೊಬೈಲ್ ಸಂಖ್ಯೆ 9957491251 ಅನ್ನು ಅವರು ಸಂಪರ್ಕಿಸಿದಾಗ ಅವರ ಬಳಿ ಇರುವ ಹಳೆಯ ನೋಟು ಮತ್ತು ಕಾಯಿನ್‌ಗಳನ್ನು ಫೋಟೋ ತೆಗೆದು ವಾಟ್ಸಾಪ್ ಮೂಲಕ ಸೆಂಡ್ ಮಾಡುವಂತೆ ತಿಳಿಸಲಾಗಿದೆ. ಅದರಂತೆ ಅವರು ಮಾಡಿದಾಗ ಅವರ ಹಳೇ ನೋಟು ಮತ್ತು ಕಾಯಿನ್‌ಗಳಿಗೆ ಇಂತಿಷ್ಟು ಬೆಲೆ ಎಂದು ನಿಗದಿಪಡಿಸಿ ಅವುಗಳನ್ನು ಬ್ಯಾಡ್ಜ್ ಮಾಡಬೇಕಾಗಿದೆ ಎಂದು ತಿಳಿಸಿ ಶುಲ್ಕವಾಗಿ 650 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ನಂತರದ ದಿನಗಳಲ್ಲಿ ಇತರೆ ಶುಲ್ಕ ಎಂದು ಸ್ವಲ್ಪ ಹಣವನ್ನು ವರ್ಗಾವಣೆ ಮಾಡಿಸಿಕೊಂಡ ಬಳಿಕ ವಿವಿಧ ಮೊಬೈಲ್ ಸಂಖ್ಯೆಗಳಿಂದ ರವಿಕುಮಾರ್ ರಾವ್ ಅವರಿಗೆ ಕರೆ ಮಾಡಿರುವ ವಂಚಕರು, ತಾವು ಸಿಬಿಐ ಅಧಿಕಾರಿಗಳು ಎಂದು ಬೆದರಿಸಿ ಒಟ್ಟು 2,95, 200 ರೂ. ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಹೆದರಿಕೆಯಿಂದ ವಂಚಕರು ಹೇಳಿದಂತೆ ಹಣ ವರ್ಗಾವಣೆ ಮಾಡುತ್ತಿದ್ದ ರವಿಕುಮಾರ್ ರಾವ್, ತಾವು ವಂಚನೆಗೊಳಗಾಗಿರುವುದು ಮನವರಿಕೆಯಾದ ನಂತರ ಚಾಮರಾಜನಗರ ಜಿಲ್ಲಾ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಶಾಲಾ ಸಿಬ್ಬಂದಿಯಿಂದ 78 ಸಾವಿರ ದುರುಪಯೋಗ: ಪ್ರಕರಣ ದಾಖಲು

ಮೈಸೂರು, ಸೆ. 9– ಖಾಸಗಿ ಶಾಲೆಯ ಹಿಂದಿನ ಸಿಬ್ಬಂದಿ ಶಾಲೆಯ ಕಾರ್ಯದರ್ಶಿ ಸಹಿ ಇರುವ ಚೆಕ್ ಅನ್ನು ಅವರ ಗಮನಕ್ಕೆ ಬಾರದೇ ತೆಗೆದುಕೊಂಡು ಬೇರೊಬ್ಬರ ಹೆಸರಿನಲ್ಲಿ 78 ಸಾವಿರ ರೂ. ಡ್ರಾ ಮಾಡಿಕೊಂಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಎಲ್. ಸುನೀತಾ ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ಮೈಸೂರಿನ ಯಾದವಗಿರಿಯಲ್ಲಿರುವ ಸುನಂದ ಅಕಾಡೆಮಿ ಶಾಲೆಯ ಸಿಬ್ಬಂದಿ. ಶಿಕ್ಷಕರಿಗೆ ಸಂಬಳ ಪಾವತಿ ಮತ್ತು ಶಾಲೆಯ ಇತರ ವೆಚ್ಚಗಳನ್ನು ಅವರೇ ನಿರ್ವಹಿಸುತ್ತಿದ್ದು, ಅವರ ಕೆಲಸದ ಬಗ್ಗೆ ಅನುಮಾನ ಕಂಡುಬಂದಿದ್ದರಿಂದ ಶಾಲಾ ಆಡಳಿತ ಮಂಡಳಿ ಕಳೆದ ಏಪ್ರಿಲ್‌ನಲ್ಲಿ ಅವರನ್ನು ವಜಾ ಮಾಡಿತ್ತು. ಸುನೀತಾ ಅವರು ಶಾಲೆಯ ಕಾರ್ಯದರ್ಶಿ ಸಹಿ ಇರುವ ಚೆಕ್ ಅನ್ನು ತೆಗೆದುಕೊಂಡು ಹೋಗಿದ್ದು, ವಿ.ತೇಜಸ್ವಿನಿ ಎಂಬುವರ ಹೆಸರಿನಲ್ಲಿ 78 ಸಾವಿರ ರೂ. ಡ್ರಾ ಮಾಡಿಕೊಂಡಿದ್ದಾರೆ ಎಂದು ಶಾಲೆ ಶಿಕ್ಷಕ ಕೆಅಶ್ವಥ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿವಿ ಪುರಂ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಬೈಕ್ ಡಿಕ್ಕಿ: ಪಾದಚಾರಿ ಸಾವು

ಮೈಸೂರು, ಸೆ. 9– ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸಾವನ್ನಪ್ಪಿದ ಘಟನೆ ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಸಂಭವಿಸಿದೆ.

ಮೂಲತಃ ಮಂಡ್ಯದವರಾಗಿದ್ದು, ಮೇಟಗಳ್ಳಿ ಕೈಗಾರಿಕಾ ಪ್ರದೇಶದ ಶ್ರೀರಾಮ್ ಟೆಕ್ ಕಾರ್ಖಾನೆಯಲ್ಲಿ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದ ನಾಗರಾಜು(57) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಸೆಪ್ಟೆಂಬರ್ 7ರಂದು ಸಂಜೆ ಅಲ್ಲಿನ ಕಾವೇರಿ ಫೋರ್ಡ್ ಕಾರ್ ಶೋರೂಂ ಮುಂಭಾಗ ನಡೆದುಕೊಂಡು ಹೋಗುತ್ತಿದ್ದಾಗ ವೇಗವಾಗಿ ಬಂದ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕ್ (ಕೆಎ 09–ಎಕ್ಸ್ 4137) ಇವರಿಗೆ ಡಿಕ್ಕಿ ಹೊಡೆದಿದೆ. ನಾಗರಾಜು ಅವರು ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಕೆಆರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಅಂದು ಮಧ್ಯರಾತ್ರಿ ಅವರು ಸಾವನ್ನಪ್ಪಿದ್ದಾರೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಷಾಸುರನ ಕೊಂದು ಮೇಲ್ವರ್ಗದವರು ರಾಜ್ಯ ಸ್ಥಾಪನೆಗೆ ನೆರವಾಗಿದ್ದಕ್ಕೆ ಚಾಮುಂಡೇಶ್ವರಿಯ ಮೆರೆಸಲಾಗುತ್ತಿದೆ

● ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್ ವಿವರಣೆ ● 'ದಲಿತ ಅರಸರ ಸಾಂಸ್ಕೃತಿಕ ನೋಟ' ವಿಚಾರ ಸಂಕಿರಣ ● ಕೀರ್ತಿಶೇಷರಾದವರ ಖಳರನ್ನಾಗಿ ಬಿಂಬಿಸಲಾಗಿದೆ; ಬೇಸರ

ಮೈಸೂರು, ಸೆ.9(ಜಿಎ)– ಚಾಮುಂಡೇಶ್ವರಿ, ಜನಾನುರಾಗಿಯಾಗಿದ್ದ ಮಹಿಷಾಸುರನನ್ನು ಸೋಲಿಸಿ, ಕೊಂದು ಮೇಲ್ವರ್ಗದವರ ರಾಜ್ಯ ಸ್ಥಾಪನೆಗೆ ಬೆಂಬಲವಾಗಿ ನಿಂತಳು. ವೈದಿಕರಿಗೆ ನೆರವಾದಳೆಂಬ ಕಾರಣಕ್ಕೆ ಮೆರೆಸಲಾಗುತ್ತಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್ ತಿಳಿಸಿದರು.

ಮೈಸೂರು ವಿವಿ ಡಾ.ಬಾಬು ಜಗಜೀವನ ರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಮತ್ತು ಮಾತಂಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಶನಿವಾರ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ 'ದಲಿತ ಅರಸರ ಸಾಂಸ್ಕೃತಿಕ ನೋಟ ಹಾಗೂ ಅರಸು ಕುರಂಗರಾಯನ ಸಂಸ್ಕೃತಿ ಮತ್ತು ಚಾರಿತ್ರಿಕ ನೆಲೆಗಳು' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಚೀನ ಪುರಾಣದಲ್ಲಿ ಮಹಿಷ ಮಂಡಲದ ಉಲ್ಲೇಖವಿದೆ. ಚಾಮುಂಡಿಬೆಟ್ಟದಲ್ಲಿ ಮಹಿಷನ ಪ್ರತಿಮೆ ಇದೆ. ಅವನನ್ನು ಏಕೆ ದುರುಳನನ್ನಾಗಿ ಚಿತ್ರಿಸಲಾಗಿದೆ? ಬಲಿ ಮಹಾರಾಜ ಮಹಾತ್ಯಾಗಿ, ಜನಾನುರಾಗಿ. ಆದರೆ, ಅವನ ಬಲಿ ಪಡೆದ ದಿನವನ್ನು ಬಲಿಪಾಡ್ಯಮಿಯನ್ನಾಗಿ ಆಚರಿಸಲಾಗುತ್ತಿದೆ. ಕೀರ್ತಿವಂತರಾದವರನ್ನು ತಮ್ಮ ಹಿತಾಸಕ್ತಿಗಾಗಿ ಚರಿತ್ರೆಯಲ್ಲಿ ಖಳರನ್ನಾಗಿ ಬಿಂಬಿಸಲಾಗಿದೆ. ಆರ್ಯ ಸಂಸ್ಕೃತಿಯಲ್ಲಿ ಮಹಿಳಾ ದೇವತೆಯನ್ನು ಪೂಜಿಸುವುದಿಲ್ಲ. ಕಾಲಾಂತರದಲ್ಲಿ ಪೂಜಿಸಲಾರಂಭಿಸಿದರು.



ಮೈಸೂರು ವಿವಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್ ಮಾತನಾಡಿದರು.

ಸ್ಥಳೀಯ ದೇವತೆ ನಾಡದೇವತೆಯಾಗುವುದಾದರೆ ಅರಸನಾಗಿ ಜನಾನುರಾಗಿಯಾಗಿದ್ದ ಮಹಿಷ ನಾಡದೇವ ಯಾಕಾಗುವುದಿಲ್ಲ ಎಂದು ಪ್ರಶ್ನಿಸಿದರು.

ಮಹಿಷಾಸುರ, ಬಲಿಚಕ್ರವರ್ತಿಯನ್ನು ಜನ ಮರೆತಿಲ್ಲ. ಅವರದು ಮರೆಮಾಚಲ್ಪಟ್ಟ ಇತಿಹಾಸ. ಶಾಸ್ತ್ರೀಯ ಗ್ರಂಥಗಳು, ಕೃತಿಗಳಿಗೆ ಇವರು ಲೆಕ್ಕ ಇರುವುದಿಲ್ಲ. ಶ್ರೇಷ್ಠವಾದ ಚರಿತ್ರೆಯನ್ನು ತಿದ್ದಿ ಬರೆಯಲಾಯಿತು. ಕೊಡುಗೆ ಕೊಟ್ಟ ಅನೇಕರ ಹೆಸರು ಚರಿತ್ರೆಯಲ್ಲಿ ಇಲ್ಲವೇ ಇಲ್ಲ. ಇದು ಜಾತಿ ಮತ್ತು ಸಾಂಸ್ಕೃತಿಕ ರಾಜಕಾರಣ ಎಂದು ಬೇಸರಿಸಿದರು.

ಕನ್ನಡ ಉಪನ್ಯಾಸಕ ಡಾ.ರವಿಕುಮಾರ್ ನೀಹ ರಚಿಸಿರುವ ಈ ಕೃತಿ 'ದಲಿತ ಅರಸ ಕುರಂಗರಾಯನ ಚಾರಿತ್ರಿಕ ನೆಲೆಗಳು' ಪುಸ್ತಕ ಸಾಮಾಜಿಕ ಮತ್ತು ತಾತ್ವಿಕ ಆಯಾಮಗಳಿಂದ ನಮಗೆ ಮುಖ್ಯವಾಗುತ್ತದೆ. ದಲಿತರು ಜೀತದಾಳುಗಳಾಗಿ ಸೇನೆಯಲ್ಲಿ ಕಾಲಾಳುಗಳಾಗಿ, ಪಶುಪಾಲಕರಾಗಿ ಮಾತ್ರವಲ್ಲದೆ ಆಳ್ವಿಕೆ ಮಾಡಿದ್ದಾರೆ. ಎಲ್ಲಾ ಸಾಮ್ರಾಜ್ಯದ ನಿರ್ಮಾಣದ ಹಿಂದೆ ದಲಿತರ ಶ್ರಮವಿದೆ. ಆ ಮೂಲಕ ಕರ್ನಾಟಕಕ್ಕೆ ಕೊಡುಗೆ ಕೊಟ್ಟಿದ್ದಾರೆ ಎಂದರು. 16, 17 ಹಾಗೂ 18ನೇ ಶತಮಾನದಲ್ಲಿ ಸ್ಥಾನಿಕ ಪಾಳೇಗಾರರು ಕೃಷಿಗೆ, ಪಶು ಸಂಗೋಪನೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಆದ್ದರಿಂದಲೇ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗಿದೆ. ಆದರೆ, ಇದನ್ನು ಚರಿತ್ರೆಯಲ್ಲಿ ಉದ್ದೇಶಪೂರ್ವಕವಾಗಿ ಮರೆಮಾಚಲಾಗಿದೆ. ದಲಿತ ಸಮುದಾಯದ ವ್ಯಕ್ತಿ ಆಳ್ವಿಕೆ ಮಾಡಿದ್ದ ಎಂಬುದನ್ನು ಒಪ್ಪಿಕೊಳ್ಳಲು ಕೆಲವರಿಗೆ ಸಾಧ್ಯವಾಗಿಲ್ಲ ಎಂದರು.

ಸಾಂಸ್ಕೃತಿಕ ಸಂಕೋಲೆಗಳನ್ನು ಬಿಡಿಸಿಕೊಳ್ಳುವುದೇ ಅಧ್ಯಯನಕಾರರ ಸವಾಲು. ಚರಿತ್ರೆಯನ್ನು ಮೇಲ್ಮುಖವಾಗಿ ನೋಡಲಾಗಿದೆ. ಆದರೆ, ಚರಿತ್ರೆ ನಡೆದಿರುವುದು ನೆಲಮಟ್ಟದಲ್ಲಿ, ಅದನ್ನು ಕಟ್ಟಿದವರು ತಳಸ್ತರದ ಜನರು. ಈ ಪರಂಪರೆಯಲ್ಲಿ ಅಜ್ಞಾತರ ದೊಡ್ಡ ಚರಿತ್ರೆಯೇ ಇದೆ. ಅದನ್ನು ಹುಡುಕಲು ಈ ಕೃತಿಯೂ ಪ್ರೇರಣೆಯಾಗಲಿದೆ ಎಂದರು.

ಕುರಂಗರಾಯನ ಇತಿಹಾಸ ಕರ್ನಾಟಕದ ಸಾಂಸ್ಕೃತಿಕ, ಜಾತಿ ರಾಜಕಾರಣದ ಗ್ರಹಿಕೆಯ ನೆಲೆಗಳನ್ನು ಬದಲಿಸುವ ಪುಸ್ತಕವಾಗಿದೆ. ಇದು ಗ್ರಂಥಾಲಯದಲ್ಲಿ ಕುಳಿತು ಬರೆದ ಪುಸ್ತಕವಲ್ಲ. ಐತಿಹ್ಯಗಳ ದಾಖಲೆಗಳನ್ನು ಆಧರಿಸಿ ಬರೆದಿರುವುದು. ಲಿಖಿತ ದಾಖಲೆ ಮೋಸ ಮಾಡಿದಾಗ ಜನರ ಸ್ಮೃತಿ ನಮಗೆ ಮುಖ್ಯವಾಗುತ್ತದೆ. ಮರೆತ ಇತಿಹಾಸ ಕಟ್ಟಲು ಸಹಾಯವಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಇತಿಹಾಸ ಪ್ರಾಧ್ಯಾಪಕ ಪ್ರೊ.ಕೆ.ಸದಾಶಿವ, ಡಾ.ರವಿಕುಮಾರ್ ನೀಹ, ಡಾ.ಬಾಬು ಜಗಜೀವನ ರಾಮ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಆರ್. ತಿಮ್ಮರಾಯಪ್ಪ, ಸಂಘದ ಸಂಘಟನಾ ಕಾರ್ಯದರ್ಶಿ ಉಮೇಶ್, ಮಾತಂಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚೇತನ್ ಉಪಸ್ಥಿತರಿದ್ದರು.

ಮಹಾರಾಜ ಕಾಲೇಜು ಮೈದಾನದಲ್ಲಿ 2 ದಿನಗಳ ಮೈಸೂರು ಸಂತೆ ಆರಂಭ

● 100ಕ್ಕೂ ಹೆಚ್ಚು ಮಳಿಗೆಗಳಲ್ಲಿ ಫ್ಯಾನ್ಸಿ ವಸ್ತು, ಬಟ್ಟೆ ಸೇರಿ ಆಕರ್ಷಕ ವಸ್ತುಗಳ ಪ್ರದರ್ಶನ; ಮಾರಾಟ ● ಐಷಾರಾಮಿ ಕಾರು, ಬೈಕ್‌ಗಳೂ ಲಭ್ಯ



ಮೈಸೂರು,ಸೆ.9(ಎಂಟಿವೈ)–ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ಆರಂಭವಾದ 'ಮೈಸೂರು ಸಂತೆ'ಯಲ್ಲಿ ಐಷಾರಾಮಿ ವಾಹನಗಳೊಂದಿಗೆ ಆಕರ್ಷಕ ಉಡುಪು ಸೇರಿದಂತೆ ಅಲಂಕಾರಿಕಾ ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಜನರನ್ನು ಆಕರ್ಷಿಸುತ್ತಿದೆ.

ಕಳೆದ ಕೆಲವು ವರ್ಷಗಳಿಂದ ಆಯೋಜಿಸುತ್ತಿರುವ 'ಮೈಸೂರು ಸಂತೆ' ವಾರಾಂತ್ಯದಲ್ಲಿ ಮೈಸೂರಿಗರಿಗೆ ಮುದ ನೀಡುತ್ತಿದ್ದು, 100ಕ್ಕೂ ಹೆಚ್ಚು ಮಳಿಗೆಗಳಲ್ಲಿ ಬಗೆ ಬಗೆ ವಸ್ತುಗಳನ್ನು ಪ್ರದರ್ಶನಕ್ಕಿಡಲಾಗಿದೆ. ಮೈಸೂರು ಸಂತೆಯ ಪ್ರವೇಶ ದ್ವಾರದ ಬಳಿಯೇ ಐಷಾರಾಮಿ ಕಾರುಗಳು ನೋಡುಗರ ಕಣ್ಮನ ಸೆಳೆಯುತ್ತಿವೆ. ಇದರೊಂದಿಗೆ ವಿವಿಧ ಬೈಕ್‌ಗಳು, ಎಲೆಕ್ಟ್ರಿಕಲ್ ವಾಹನಗಳನ್ನು ಪ್ರದರ್ಶನಕ್ಕಿಡಲಾಗಿದೆ.


ವಾಟರ್ ಪ್ರೂಫ್ ಪೆಂಡಾಲ್‌ನಲ್ಲಿ ವ್ಯವಸ್ಥೆ ಮಾಡಿರುವ ಮಳಿಗೆಗಳಲ್ಲಿ ಮಹಿಳೆಯರ ಅಲಂಕಾರಿಕ ಉಡುಪು, ಗೃಹಬಳಕೆಯ ವಸ್ತುಗಳು, ಕರಕುಶಲ ವಸ್ತುಗಳು, ಪೀಠೋಪಕರಣಗಳು ಸೇರಿದಂತೆ ಇನ್ನಿತರ ಪದಾರ್ಥಗಳನ್ನು ಮಾರಾಟಕ್ಕಿಡಲಾಗಿದೆ. ಸಂತೆಯಲ್ಲಿ ತಿನಿಸು ಪ್ರಿಯರಿಗೂ ಸಾಕಷ್ಟು ಮಳಿಗೆಗಳಿದ್ದು, ಅವುಗಳಲ್ಲಿ ವಿವಿಧ ಬಗೆಯ ತಿಂಡಿ, ತಿನಿಸು, ಖಾದ್ಯ, ಐಸ್‌ಕ್ರೀಂ, ಪಾನೀಯ ಸೇರಿದಂತೆ ರುಚಿಕರ ತಿನಿಸನ್ನು ಗ್ರಾಹಕರಿಗೆ ನೀಡಲಾಗುತ್ತಿದೆ. ಸಂತೆ ವೀಕ್ಷಣೆಗೆ ಬರುವ ಸಾರ್ವಜನಿಕರಿಗೆ ಮನೋರಂಜನೆ ನೀಡಲು ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿದೆ. ಗಾಯನ, ಜಾನಪದ ಗೀತೆ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಜನರನ್ನು ರಂಜಿಸಲಿದೆ. ಬೆಳಗ್ಗೆ 11ರಿಂದ ರಾತ್ರಿ 9ರವರೆಗೆ ಮೈಸೂರು ಸಂತೆಗೆ ಪ್ರವೇಶಾವಕಾಶವಿದೆ. 50 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದ್ದು, ವಾಹನ ನಿಲುಗಡೆಗೂ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಪ್ರದರ್ಶನದ ವೀಕ್ಷಣೆಗೆ ಬರುವವರಿಂದ ಸಂಗ್ರಹವಾಗುವ ಮೊತ್ತ ಹಾಗೂ ಕಾರ್ಯಕ್ರಮದ ಆದಾಯವನ್ನು ಹಿಂದುಳಿದ ವರ್ಗಗಳ ಶಿಕ್ಷಣಕ್ಕಾಗಿ ಬಳಸಲು ನಿರ್ಧರಿಸಲಾಗಿದೆ. ಇಂದು ಮೈಸೂರು ಸಂತೆಗೆ ಮಾಜಿ ಶಾಸಕ ವಾಸು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಆಯೋಜಕರಾದ ಭರತ್‌ಗೌಡ, ಪೂಜಾ ಜೋಶಿ, ಕಾರ್ತಿಕ್ ಮಹೇಶ್, ಸ್ನೇಹಲ್ ಐಗೂರ್, ಸ್ಮಿತಾ ಬಾಲು, ರಮ್ಯಾ ಗೌಡ ಇತರರು ಉಪಸ್ಥಿತರಿದ್ದರು.



ನೈಪುಣ್ಯ ಸ್ಕೂಲ್‌ನಲ್ಲಿ ಇಂದು ಚಿತ್ರಕಲಾ ಸ್ಪರ್ಧೆ

ಮೈಸೂರು,ಸೆ.9(ಬಿಎಲ್‌ಯು) ಮೈಸೂರಿನ ಆರ್.ಟಿ.ನಗರದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಕ್ಯಾಂಪಸ್‌ನಲ್ಲಿ ನಾಳೆ ನೈಪುಣ್ಯ ದಸರಾ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ಹೆಸರಾಂತ ಚಿತ್ರಕಲಾವಿದರೂ ಆದ ಪ್ರಶಸ್ತಿ ಪುರಸ್ಕೃತ ಕಲಾವಿದ ಗಂಜೀಫಾ ರಘುಪತಿ ಭಟ್ ಚಿತ್ರಕಲಾ ಸ್ಪರ್ಧೆಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಾಳೆ ಬೆಳಗ್ಗೆ 10ರಿಂದ 1 ಗಂಟೆ ತನಕ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದ್ದು, ಸೀನಿಯರ್, ಜೂನಿಯರ್, ಸಬ್ ಜೂನಿಯರ್ ಹಾಗೂ ಮಾಸ್ಟರ್ಸ್ ಎಂಬ 4 ತಂಡಗಳಲ್ಲಿ ಪ್ರತ್ಯೇಕವಾಗಿ ಸ್ಪರ್ಧೆ ಆಯೋಜಿಸಲಾಗಿದೆ. ಜಾನಪದ, ಕರ್ನಾಟಕದ ಐತಿಹಾಸಿಕ ಸ್ಥಳಗಳು, ಬೊಂಬೆ ಹಬ್ಬದ ವಿಚಾರಗಳ ಮೇಲೆ ಮಕ್ಕಳು ಚಿತ್ರ ಬಿಡಿಸಲು ಸೂಚಿಸಲಾಗಿದೆ.

ವೃದ್ಧ ನಾಪತ್ತೆ



ನಂಜನಗೂಡು,ಸೆ.9– ಪಟ್ಟಣದ ಎನ್‌ಜಿಒ ಕಾಲೋನಿಯಿಂದ ಮಾದರಾಜೇ ಅರಸ್(60) ಅವರು ಆ.24ರಿಂದ ಕಾಣೆಯಾಗಿದ್ದು, ಈ ಬಗ್ಗೆ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇವರು 5.7 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಬಣ್ಣ ಹೊಂದಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಸಮೀಪದ ಪೊಲೀಸ್ ಠಾಣೆ ಅಥವಾ ಕುಟುಂಬದವರನ್ನು(ಮೊ.ಸಂ; 7899486506, 9901581826) ಸಂಪರ್ಕಿಸುವಂತೆ ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಶ್ರೀ ವೀರಭದ್ರೇಶ್ವರಸ್ವಾಮಿ–ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸೆಲೆನ್ಸ್ :** ಕೃಷ್ಣೋತ್ಸವ–2023, ಕ್ಯೂಟ್ ಲಿಟಲ್ ಕೃಷ್ಣ ಕಾಂಟೆಸ್ಟ್, ಉದ್ಘಾಟನೆ : ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಸ್ಥಳ: ಶಾಲೆ ಆವರಣ, ಬೆಳಗ್ಗೆ 9ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮೈಸೂರು ಸಾಹಿತ್ಯ ದಾಸೋಹ, ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ:** ಕಥಾಯಾನ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ರವೀಂದ್ರ, ಉಪಸ್ಥಿತರು: ಶಿಬಿರ ನಿರ್ದೇಶಕ ಸಂತೋಷ್ ಕುಮಾರ್ ಮೆಹೆಂದಳೆ, ರಂಗನಾಥ್, ಎಂ.ಆರ್.ಆನಂದ, ಲತಾ ಮೋಹನ್, ಸ್ಥಳ: ಕಸಾಪ ಸಭಾಂಗಣ, ವಿಜಯನಗರ, ಬೆಳಗ್ಗೆ 9.30ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಮಹಿಳೆಯರಲ್ಲಿ ಋತುಬಂಧದ ಸಮಸ್ಯೆಗಳು ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 9.30ರಿಂದ.

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್ :** ಎಂ.ಎಲ್. ಪವನ್‌ಕುಮಾರ್ ಅವರಿಂದ ಸ್ಥಿರ ಚಿತ್ರಣ ಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.

■ **ಕೊಪ್ಪಳ ಜಿಲ್ಲೆ ಕುಕನೂರಿನ ಕನ್ನಡ ಸಾಹಿತ್ಯ ಅಭಿವೃದ್ಧಿ ಟ್ರಸ್ಟ್, ಮೈಸೂರಿನ ಚಿತ್ಕಲಾ ಸಾಂಸ್ಕೃತಿಕ ಪ್ರತಿಷ್ಠಾನದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಅಖಿಲ ಕರ್ನಾಟಕ 5ನೇ ಸಾಂಸ್ಕೃತಿಕ ಸಮ್ಮೇಳನ ಹಾಗೂ ಸಾಹಿತ್ಯೋತ್ಸವ, ಸಾನ್ನಿಧ್ಯ: ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ ಪ್ರಶಸ್ತಿ ಪ್ರದಾನ: ಮಹೇಂದ್ರ ಮನೂತ ಜೈನ, ಆಶೀರ್ವಚನ: ಅಂಬರೀಶ ಜಿ. ಗೊಂದಾಳ, ಸಮ್ಮೇಳನಾಧ್ಯಕ್ಷತೆ: ನಿವೃತ್ತ ಪೊಲೀಸ್ ಅಧಿಕಾರಿ, ಹಿರಿಯ ಸಾಹಿತಿ ಡಾ.ಕೆ.ಮಹಾದೇವನಾಯಕ್, ಸಂಚಿಕೆ ಬಿಡುಗಡೆ : ವಿ.ಆರ್. ನಾರಾಯಣ ರೆಡ್ಡಿ, ಮುಖ್ಯ ಅತಿಥಿಗಳು: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸಮಾಜ ಸೇವಕ ಉಮಾಪತಿ ಉಮೇಶ್, ಸ್ಥಳ: ಕುತ್ತೂರು ಸೀತಾರಾಮ್‌ರಾವ್ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ

■ **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಪತ್ತಿನ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸಭಾಂಗಣ, ಶ್ರೀ ಹರ್ಷ ರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ನಗರ ಮತ್ತು ಜಿಲ್ಲಾ ಯಾದವ (ಗೊಲ್ಲ) ಯುವ ಸಂಘ :** 41ನೇ ವರ್ಷದ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮ, ಬೆಳಗ್ಗೆ 10ಕ್ಕೆ ಯಾದವ ವಧು–ವರರ ಸಮಾವೇಶ, ಅಧ್ಯಕ್ಷತೆ: ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವ ಕುಮಾರ್, ಉಪಸ್ಥಿತರು: ಶಾಸಕರಾದ ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಡಾ.ಯತೀಂದ್ರ ಸಿದ್ದರಾಮಯ್ಯ, ಶ್ರೀನಾಥ್, ಡಿ.ಟಿ.ಶ್ರೀನಿವಾಸ್, ದೊಡ್ಡ ನಾಗಯ್ಯ, ಸ್ಥಳ: ಯಾದವ ಸಮುದಾಯ ಭವನ, ದಿವಾನ್ಸ್ ರಸ್ತೆ.

■ **ಮೈಸೂರು ಜಿಲ್ಲಾ ಟ್ರಾವೆಲ್ಸ್ ಮಾಲೀಕರ ವಿವಿಧೋದ್ದೇಶ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಮಲೈ ಮಹದೇಶ್ವರ ಮಿನಿ ಫಂಕ್ಷನ್ ಹಾಲ್, ಕಾಂತರಾಜ ಅರಸ್ ರಸ್ತೆ, ಬೆಳಗ್ಗೆ 10ಕ್ಕೆ.

■ **ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್:** ಹಿರಿಯ ವಿದ್ಯಾರ್ಥಿಗಳ ಸಂಘದ 25ನೇ ವಾರ್ಷಿಕ ಮಹಾಸಭೆ, ಮುಖ್ಯ ಅತಿಥಿಗಳು: ತಾಂತ್ರಿಕ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕ ಡಾ.ಕೆ.ಜಿ.ಚಂದ್ರಶೇಖರ, ಮಾಜಿ ಶಾಸಕ ಕಳಲೆ ಎನ್.ಕೇಶವಮೂರ್ತಿ, ಸೆಸ್ಕಾಂ ಜನರಲ್ ಮ್ಯಾನೇಜರ್ ಆರ್. ರಾಮಸ್ವಾಮಿ, ಅಧ್ಯಕ್ಷತೆ : ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಪ್ರಾಂಶುಪಾಲ ಎಂ.ಪ್ರಕಾಶ್, ಸ್ಥಳ: ಹಿರಿಯ ವಿದ್ಯಾರ್ಥಿಗಳ ಸಂಘದ ಆವರಣ, ಬೆಳಗ್ಗೆ 10.30ಕ್ಕೆ.



ಇಂದಿನ ಪಂಚಾಂಗ

10.9.2023 ಭಾನುವಾರ, ಮಳೆ ನಕ್ಷತ್ರ: ಪುಬ್ಬ 31.08.2023ರಿಂದ 13.09.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ಚಾಮುಂಡೇಶ್ವರಿ ವಿವಿಧೋದ್ದೇಶ ಸಹಕಾರ ಸಂಘ:** 13ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ರಾಜ್‌ಕುಮಾರ್, ಸ್ಥಳ: ಶ್ರೀ ದರ್ಶಿನಿ ಫಂಕ್ಷನ್ ಹಾಲ್, ಹೂಟಗಳ್ಳಿ, ಬೆಳಗ್ಗೆ 10.30ಕ್ಕೆ

■ **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು :** ಪ್ರಥಮ ಬಿ.ಇ. ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಶ್ರೀನಿವಾಸ ರಾಮಾನುಜಂ ಕಂದೂರಿ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಕೆಂಪೇಗೌಡ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಬೆಳಗ್ಗೆ 10.30ಕ್ಕೆ.

■ **ಕಲಾಸುರುಚಿ:** ರವಿ ಕಾಣದ್ದನ್ನು ಕವಿ ಕಂಡ ಕನ್ನಡ ಕವಿತೆಗಳ ಓದು, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಮಹಿಷಾ ದಸರಾ ಆಚರಣಾ ಸಮಿತಿ, ಮಹಿಸೂರು, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ :** ಬೆಳಗ್ಗೆ 10.30ಕ್ಕೆ ಮಹಿಷ ಮಂಡಲದ ಆದಿದೊರೆ ಮಹಿಷಾಸುರ: ಒಂದು ಚಾರಿತ್ರಿಕ ನೋಟ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ, ಉದ್ಘಾಟನೆ: ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ಸಾನ್ನಿಧ್ಯ: ಉರಿಲಿಂಗಿ ಪೆದ್ದೀಶ್ವರ ಮಹಾಸಂಸ್ಥಾನ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ: ಹಿರಿಯ ಚಿಂತಕ ಪ್ರೊ.ಮಹೇಶ್‌ಚಂದ್ರ ಗುರು, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಿರಿಯ ಸಾಹಿತಿ ಪ್ರೊ ಅರವಿಂದ ಮಾಲಗತ್ತಿ, ಉಪಸ್ಥಿತರು: ಮಾಜಿ ಮೇಯರ್ ಪುರುಷೋತ್ತಮ್, ಚಿಂತಕ ಡಾ.ಕೃಷ್ಣಮೂರ್ತಿ ಚಮರಂ, ಸಂಘದ ಅಧ್ಯಕ್ಷ ಸಿ.ಮಹೇಶ್, ಪ್ರಾಸ್ತಾವಿಕ ನುಡಿ: ಹಿರಿಯ ಲೇಖಕ ಸಿದ್ದಸ್ವಾಮಿ, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಹಿರಿಯ ಸಾಹಿತಿ ಜಿ.ಎಸ್.ಸಿದ್ದರಾಮಯ್ಯ, ಸಾನ್ನಿಧ್ಯ: ಬಿಕ್ಕು ಬೋಧಿದತ್ತ ಭಂತೇಜಿ, ಮುಖ್ಯ ಅತಿಥಿಗಳು : ಹಿರಿಯ ಜಾನಪದ ಚಿಂತಕ ಪ್ರೊ ಕಾಳೇಗೌಡ ನಾಗವಾರ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಪ್ರಾಧ್ಯಾಪಕರಾದ ಪ್ರೊ ನಾಗರತ್ನ, ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ಸ್ಥಳ: ಲಲಿತ ಕಲೆಗಳ ಕಾಲೇಜು, ಮಾನಸಗಂಗೋತ್ರಿ,

■ **ಅರಸು ಯುವಜನ ವೇದಿಕೆ :** ವಾರ್ಷಿಕ ಮಹಾಸಭೆ, ಸ್ಥಳ: ಅರಸು ಮಂಡಳಿ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ಗುರುಮಲ್ಲೇಶ್ವರ ಪದವೀಧರರ ಪತ್ತಿನ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಅಶ್ವಿನ್ ಆರ್. ಪಾಳೇಗಾರ್, ಸ್ಥಳ: ಶ್ರೀ ನಟರಾಜ ಕಲ್ಯಾಣ ಮಂಟಪ, ಬೆಳಗ್ಗೆ 11ಕ್ಕೆ.

■ **ಶ್ರೀ ಬನಶಂಕರಿ ಪತ್ತಿನ ಸಹಕಾರ ಸಂಘ :** 23ನೇ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಆರ್.ಗೋವಿಂದರಾಜು, ಸ್ಥಳ: ದೇವಾಂಗ ಸಂಘ, ಕಾಳಮ್ಮನಗುಡಿ ಬೀದಿ, ಬೆಳಗ್ಗೆ 11ಕ್ಕೆ.

■ **ಶ್ರೀ ಕೃಷ್ಣರಾಜೇಂದ್ರ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್:** ಹಿರಿಯ ಸಹಕಾರಿಗಳ ಸನ್ಮಾನ ಸಮಾರಂಭ, ಸಾನ್ನಿಧ್ಯ: ಶ್ರೀ ಶಾಂತಮಲ್ಲಿ ಕಾರ್ಜುನ ಸ್ವಾಮೀಜಿ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು: ಶಾಸಕ ಎ.ಆರ್.ಕೃಷ್ಣಮೂರ್ತಿ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ –ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಮೈಸೂರು ಆಕಾಶವಾಣಿಗೆ–89– "ನುಡಿ ಸೇವೆಯ ನಿತ್ಯ ನಡಿಗೆಗೆ ಹೊಸ ಹೆಜ್ಜೆ", 9.40 ನಮ್ಮ ಆರೋಗ್ಯ–ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾನಸಿಕ ಆರೋಗ್ಯ ವಿಭಾಗದ ಮನೋವೈದ್ಯರಾದ ಡಾ.ಸುಧಾನಾಯಕ್ ಮತ್ತು ಮನೋಚಿಕಿತ್ಸಕ ಡಾ.ಬಾನು ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಪ್ರಭುಸ್ವಾಮಿ ಮಳಿಮಠ, 10.00 ಮೈಸೂರು ಆಕಾಶವಾಣಿಗೆ–89–"ನುಡಿ ಸೇವೆಯ ನಿತ್ಯ ನಡಿಗೆಗೆ ಹೊಸ ಹೆಜ್ಜೆ, 10.30 ಮಕ್ಕಳ ಮಂಟಪ–ಸತ್ಯ ಸಾಯಿಬಾಬಾ ವಿದ್ಯಾ ಸಂಸ್ಥೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 "ಮೈಸೂರು ಆಕಾಶವಾಣಿಗೆ–89– "ನುಡಿ ಸೇವೆಯ ನಿತ್ಯ ನಡಿಗೆಗೆ ಹೊಸ ಹೆಜ್ಜೆ" ಮಧ್ಯಾಹ್ನ: 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 "ಮೈಸೂರು ಆಕಾಶವಾಣಿಗೆ–89 – "ನುಡಿ ಸೇವೆಯ ನಿತ್ಯ ನಡಿಗೆಗೆ ಹೊಸ ಹೆಜ್ಜೆ", 2.35 ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ಕೊಲೊಂಬೋದಲ್ಲಿ ನಡೆಯಲಿರುವ ಏಷಿಯಾ ಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 6.50 ಕೃಷಿರಂಗ–ಪಶುರಂಗ–ಪ್ರಾಯೋಜಿತ ಕಾರ್ಯಕ್ರಮ. ಹೈನುಗಾರಿಕೆ ಹಾಗೂ ಸೈಲೇಜ್ ತಯಾರಿಕೆ ಕುರಿತು ಪಿರಿಯಾಪಟ್ಟಣ ತಾಲ್ಲೂಕ್ ಹುಣಸವಾಡಿಯ ಪಿ.ಡಿ.ರಾಜಾರಾಮ ಪೈ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ಕೊಲೊಂಬೋದಲ್ಲಿ ನಡೆಯಲಿರುವ ಏಷಿಯಾ ಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

■ **ಮೈಸೂರು ಜಿಲ್ಲಾ ಪೆಂಡಾಲ್ ಮಾಲೀಕರ ಸಂಘ:** ಸಾಂಸ್ಕೃತಿಕ ನಗರ ಮೈಸೂರು ವೈಭವ, ರಾಜ್ಯ ಮಟ್ಟದ 3ನೇ ಮಹಾಧಿವೇಶನ, ಸಾನ್ನಿಧ್ಯ: ಚಾಮುಂಡಿಬೆಟ್ಟದ ಶ್ರೀ ಶಶಿಶೇಖರ್ ಸ್ವಾಮೀಜಿ, ಬೇಬಿ ಮಠದ ಸ್ವಾಮೀಜಿ, ಉಸ್ಮಾನ್ ಶರೀಫ್, ಜಾನ್‌ಸನ್ ಪಾಲ್, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ದಾವಣಗೆರೆ ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಲಕ್ಷ್ಮಣ್, ಮೈಸೂರು ಜಿಲ್ಲಾ ಪೆಂಡಾಲ್ ಮಾಲೀಕರ ಸಂಘದ ಅಧ್ಯಕ್ಷ ಶಿವಕುಮಾರ್, ಸ್ಥಳ: ದಸರಾ ವಸ್ತು ಪ್ರದರ್ಶನ ಮೈದಾನ, ಮಧ್ಯಾಹ್ನ 12ಕ್ಕೆ

■ **ವಿಶ್ವ ಚೇತನ ಬಳಗ:** ಶಿಕ್ಷಕರ ದಿನಾಚರಣೆ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು, ಅಧ್ಯಕ್ಷತೆ: ಜ್ಯೋತಿಷ್ಯ ಶಾಸ್ತ್ರಜ್ಞ ಬಿ.ಎಸ್.ನಾಗೇಂದ್ರ, ಮುಖ್ಯ ಅತಿಥಿಗಳು: ಸಾಹಿತಿ ಶ್ರೀಮತಿ ನಾಗರತ್ನ, ಶ್ರೀಮತಿ ಎ.ಎನ್. ಪದ್ಮಾಕ್ಷಿ, ಪ್ರಾಸ್ತಾವಿಕ ನುಡಿ: ಡಾ.ಎಂ.ಶಿವಸ್ವಾಮಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 1.30ರಿಂದ.

■ **ನೂಪುರ ನೃತ್ಯಾಲಯ:** ನೂಪುರ ನೃತ್ಯೋತ್ಸವ, ಮುಖ್ಯ ಅತಿಥಿಗಳು: ಪ್ರಾಧ್ಯಾಪಕ ಕರ್ನಾಟಕ ಕಲಾಶ್ರೀ ಡಾ.ಕೆ.ಕುಮಾರ್, ಲೇಖಕ ವಿದ್ವಾನ್ ವಿ.ನಂಜುಂಡಸ್ವಾಮಿ, ಡಾ.ಶೆಲ್ವಪಿಳ್ಳೆ ಅಯ್ಯಂಗಾರ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಸಂಸ್ಕೃತಿ ಟ್ರಸ್ಟ್:** ನಾದ ನೃತ್ಯ, ಉದ್ಘಾಟನೆ : ವಿದ್ವಾನ್ ಕಣ್ಣರ್ ಆರ್. ರಾಮಾನುಜಂ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ಮಾಲೀಕ ರಾಮಚಂದ್ರ, ಸಂಜೆ 5.45ಕ್ಕೆ ಗಾನಭಾರತಿ ಸುಗಮ ಸಂಗೀತ ಕಲಾವಿದರಿಂದ ಸುಗಮ ಸಂಗೀತ, ಸಂಜೆ 6.30ಕ್ಕೆ ಸಂಸ್ಕೃತಿ ಟ್ರಸ್ಟ್ ವಿದ್ಯಾರ್ಥಿಗಳಿಂದ ಭರತನಾಟ್ಯ, ಸಂಜೆ 7.30ಕ್ಕೆ ನೃತ್ಯ ಈಶಾ ಪ್ರದರ್ಶಕ ಕಲೆಗಳ ಕೇಂದ್ರದವರಿಂದ ಭರತನಾಟ್ಯ, ಸ್ಥಳ: ರಮಾಗೋವಿಂದ ಕಲಾವೇದಿಕೆ, ಗಾನಭಾರತಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ :** ಸಿದ್ಧ ಸಮಾಧಿ ಯೋಗದ ಬಗ್ಗೆ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಧನ್ವಂತರಿ ಜಯಂತಿ ಅಂಗವಾಗಿ ಸಪ್ತರಾತ್ರೋತ್ಸವ ಪ್ರಯುಕ್ತ ಶ್ರೀ ಭಗವದ್ಗೀತಾ ಅಭಿಯಾನ, ವಿದ್ವಾನ್ ಬಾದರಾಯಣಾಚಾರ್ಯ ಅವರಿಂದ ಭಗವದ್ಗೀತೆ ಅಧ್ಯಾಯ–11 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ ಕುರಿತು ಉಪನ್ಯಾಸ, ನಿವೃತ್ತ ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕೃ. ರಾಮಚಂದ್ರ ಅವರಿಂದ ವಾಚನ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ ಮತ್ತು ಶ್ರೀ ಕೃಷ್ಣ ಗಾನಸಭಾ:** ಶ್ರೀ ಕೃಷ್ಣ ಜನ್ಮಾಷ್ಟಮಿ ಪೂಜಾ ಕಾರ್ಯಕ್ರಮಗಳು ಮತ್ತು ಸಂಗೀತ ಕಾರ್ಯಕ್ರಮ, ಮೋಹಿನಿಯಾಟ್ಟಮ್ ಕಲಾಮಂಡಲಮ್ ಸುಚಿತ್ರ ಅನಿಲ್ ಕುಮಾರ್ ಮತ್ತು ಅವರ ಶಿಷ್ಯರಿಂದ ಭರತನಾಟ್ಯ, ಸ್ಥಳ: ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ 3ನೇ ಹಂತ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ:** ಬಿ.ವಿ.ಕಾರಂತರ ನೆನಪಿನಲ್ಲಿ 'ಕಾರಂತರ ನಮನ' ನಾಟಕೋತ್ಸವ, ನಟನ ರೆಪರ್ಟರಿ ತಂಡದ ಕಲಾವಿದರಿಂದ ಧರ್ಮವೀರ ಭಾರತಿ ಅವರ 'ಅಂಧಯುಗ' ನಾಟಕ ಪ್ರದರ್ಶನ, ನಿರ್ದೇಶನ : ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಲಂಕೇಶ್ ಅವರ ಮುಟ್ಟಿಸಿಕೊಂಡವನು ನಾಟಕ ಪ್ರದರ್ಶನ, ನಿರ್ದೇಶನ : ಕೆ.ಆರ್. ನಂದಿನಿ, ನೃತ್ಯ ಸಂಯೋಜನೆ : ಮೈಮ್ ರಮೇಶ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಆನ್‌ಸ್ಟೇಜ್ ಯೂಥ್ ಥಿಯೇಟರ್:** ಪಿ.ಲಂಕೇಶ್ ಅವರ ಪೋಲೀಸರಿದ್ದಾರೆ ಎಚ್ಚರಿಕೆ ನಾಟಕ ಪ್ರದರ್ಶನ, ನಿರ್ದೇಶನ: ವಿನೋದ ಸಿ. ಮೈಸೂರು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

■ **ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ:** ಶ್ರೀ ಆದಿಚುಂಚನಗಿರಿ ಶಾಖಾ ಮಠದ ನೂತನ ಕಟ್ಟಡ ಹಾಗೂ ಬಿಜಿಎಸ್ ಸಾಂಸ್ಕೃತಿಕ ಭವನ ಮತ್ತು ಉಚಿತ ವಿದ್ಯಾರ್ಥಿನಿಲಯದ ಲೋಕಾರ್ಪಣೆ, ಸಾನ್ನಿಧ್ಯ: ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ನೇತೃತ್ವ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಉಪಸ್ಥಿತರು : ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಮೇಯರ್ ಶಿವಕುಮಾರ್, ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಶ್ರೀ ಆದಿಚುಂಚನಗಿರಿ ಶಾಖಾ ಮಠ, ಲಕ್ಷ್ಮೀ ಕಾಂತಸ್ವಾಮಿ ದೇವಸ್ಥಾನ, ಹೆಬ್ಬಾಳು, ಸಂಜೆ 7ಕ್ಕೆ.

ಜ್ಯೋತಿಷ್ಯಶಾಸ್ತ್ರ ಆಧ್ಯಾತ್ಮಿಕತೆ, ವಿಜ್ಞಾನದ ಸಮ್ಮಿಳಿತವಾಗಿದೆ

ಉಡುಪಿ ಪೇಜಾವರ ಶ್ರೀಗಳು ಅಭಿಪ್ರಾಯ



ಮೈಸೂರು,ಸೆ.9(ಬಿಎಲ್‌ಯು)–ಜ್ಯೋತಿಷ್ಯಶಾಸ್ತ್ರವು ಆಧ್ಯಾತ್ಮಿಕತೆ ಹಾಗೂ ವಿಜ್ಞಾನದ ಸಮ್ಮಿಳಿತವಾಗಿದೆ ಎಂದು ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ಅಸ್ಟ್ರಾಲಜಿಕಲ್ ಸೈನ್ಸ್‌ನ 38ನೇ ವಾರ್ಷಿಕ ಸಭೆಯ ಅಂಗವಾಗಿ ಆಯೋಜಿಸಿದ್ದ ಜ್ಯೋತಿಷ್ಯಶಾಸ್ತ್ರ ಕುರಿತ ರಾಷ್ಟ್ರೀಯ ವಿಚಾರ ಸಂಕೀರಣ ಉದ್ಘಾಟಿಸಿ ಮಾತನಾಡಿದ ಅವರು, ಖಗೋಳಶಾಸ್ತ್ರಕ್ಕೂ ಜ್ಯೋತಿಷ್ಯಶಾಸ್ತ್ರಕ್ಕೂ ಅವಿನಾಭಾವ ಸಂಬಂಧವಿದೆ ಎಂದು ಹೇಳಿದರು.

ನಮ್ಮ ಋಷಿ ಮುನಿಗಳು ಖಗೋಳಶಾಸ್ತ್ರದಲ್ಲಿ ಪರಿಣತಿ ಹೊಂದಿದ್ದರು. ಖಗೋಳಶಾಸ್ತ್ರವನ್ನು ವೈಜ್ಞಾನಿಕವಾಗಿ ಅವಲೋಕಿಸುತ್ತಿದ್ದರು. ಈಗಿನ ಖಗೋಳಶಾಸ್ತ್ರದ ಬಹಳಷ್ಟು ವಿಚಾರಗಳ ಬಗ್ಗೆ ಅಂದೇ ಅರಿವು ಹೊಂದಿದ್ದರು. ಅಷ್ಟರ ಮಟ್ಟಿಗೆ ಖಗೋಳಶಾಸ್ತ್ರದ ಬಗ್ಗೆ ಉನ್ನತ ಜ್ಞಾನ ಹೊಂದಿದ್ದರು ಎಂದು ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಹೇಳಿದರು.

ಈ ವೇಳೆ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಆರ್ಯ ಭವನ್ ಶುಕ್ಲಾ, ಪುನರ್ಜನ್ಮ ಸಿದ್ಧಾಂತದ ಬಗ್ಗೆ ವಿವರಿಸಿದರು. ಹಿಂದಿನ ಜನ್ಮದಲ್ಲಿ ಮಾಡಿದ ಫಲಗಳನ್ನು ಈಗ ಅನುಭವಿಸುತ್ತಿದ್ದೇವೆ ಎಂದು ಜ್ಯೋತಿಷ್ಯಶಾಸ್ತ್ರವನ್ನು ಉಲ್ಲೇಖಿಸಿ ಪ್ರತಿಪಾದಿಸಿದರು. ಮಾಡ್ರರ್ನ್ ಅಸ್ಟ್ರಾಲಜಿ ಮಾಸಿಕ ಪತ್ರಿಕೆ ಸಂಪಾದಕಿ ಡಾ.ಗಾಯತ್ರಿದೇವಿ ವಾಸುದೇವ್, ಸಂಸ್ಥೆಯ ಮೈಸೂರು ವಿಭಾಗದ ಅಧ್ಯಕ್ಷ ಸುಬ್ರಹ್ಮಣ್ಯ ಆರ್.ತಂತ್ರಿ ಸೇರಿದಂತೆ ವೇದಿಕೆಯಲ್ಲಿ ಹಲವರು ಉಪಸ್ಥಿತರಿದ್ದರು.

ಇಂದು ಪರಿಸರಸ್ನೇಹಿ ಗಣಪ ಮಾಡುವ ಕಾರ್ಯಾಗಾರ

ಮೈಸೂರು, ಸೆ.9(ಎಂಟಿವೈ)– ವಿನ್ಯಾಸ್ ಈವೆಂಟ್ಸ್ ಸಂಸ್ಥೆ ವತಿಯಿಂದ ಸೆ.10ರಂದು ಮಧ್ಯಾಹ್ನ 2ಕ್ಕೆ ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆ ಬಗ್ಗೆ ಜಾಗೃತಿ ಮೂಡಿಸಲೆಂದು ಮಕ್ಕಳಿಗಾಗಿ ಬಣ್ಣರಹಿತ, ರಾಸಾಯನಿಕ ರಹಿತ ಜೇಡಿಮಣ್ಣಿನ ಗಣಪ ಮೂರ್ತಿ ತಯಾರಿಕೆ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ರಕ್ಷಾ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯಲಕ್ಷ್ಮಿಪುರಂನಲ್ಲಿರುವ ಬಿಎಂ ಆಸ್ಪತ್ರೆ ಬಳಿಯ ಅಥರ್ವ ಮಲ್ಟಿಸ್ಪೆಷಾಲಿಟಿ ಆಯುರ್ವೇದಿಕ್ ಮತ್ತು ಹೀಲಿಂಗ್ ಕೇಂದ್ರದಲ್ಲಿ ಮಧ್ಯಾಹ್ನ 2ಕ್ಕೆ ಕಾರ್ಯಾಗಾರ ನಡೆಯಲಿದೆ. ಜೇಡಿಮಣ್ಣನ್ನು ಸಂಸ್ಥೆಯೇ ನೀಡಲಿದೆ. 16 ವರ್ಷದೊಳಗಿನವರು ಪಾಲ್ಗೊಳ್ಳಬಹುದಾಗಿದೆ. ಇದರಿಂದ ಮಕ್ಕಳಲ್ಲಿ ಸೃಜನಾತ್ಮಕತೆ, ಭಾವನಾತ್ಮಕತೆ, ತಾವೇ ತಯಾರಿಸಿದ್ದೆಂಬ ಸಂತಸ, ಸಾಮುದಾಯಿಕ ಬಾಂಧವ್ಯ ಬೆಳೆಯುತ್ತದೆ. ತಾವು ತಯಾರಿಸಿದ ಮೂರ್ತಿಯನ್ನು ತಮ್ಮ ಮನೆಗೆ ಕೊಂಡೊಯ್ದು ಪೂಜಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 86604 30205, 63633 51833 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ವಿನ್ಯಾಸ್ ಈವೆಂಟ್ಸ್ ಹಾಗೂ ಜೆಸಿಐ ಸಂಸ್ಥೆ ಸಾವಿತ್ರಿ, ರುಕ್ಮಿಣಿ, ಜ್ಯೋತಿ, ಪುಷ್ಪಲತಾ, ಪೂರ್ಣಿಮಾ, ಕೋಕಿಲಾ ಇದ್ದರು.

ರಾಷ್ಟ್ರೀಯ ಚರ್ಮರೋಗ ತಜ್ಞರ ಸಮ್ಮೇಳನದಲ್ಲಿ ಡಾ.ಹನುಮಂತಪ್ಪ ಭಾಗಿ

ಮೈಸೂರು,ಸೆ.9– ಕೇರಳದ ಕಲ್ಲಿಕೋಟೆಯಲ್ಲಿ ಸೆ.15ರಿಂದ



17ರವರೆಗೆ ನಡೆಯಲಿರುವ ರಾಷ್ಟ್ರೀಯ ಚರ್ಮರೋಗ ತಜ್ಞರ ಸಮ್ಮೇಳನದಲ್ಲಿ ಮೈಸೂರಿನ ಖ್ಯಾತ ಚರ್ಮರೋಗ ತಜ್ಞ ಡಾ.ಹೆಚ್.ಹನುಮಂತಪ್ಪ ಭಾಗವಹಿಸಲಿದ್ದಾರೆ. ಇವರು ವೈಜ್ಞಾನಿಕ ವಿಚಾರಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಲಿದ್ದು, ಸಂವಾದದಲ್ಲೂ ಪಾಲ್ಗೊಳ್ಳಲಿದ್ದಾರೆ. ಇವರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅನೇಕ ಅತಿಥಿ ಉಪನ್ಯಾಸಗಳನ್ನು ನೀಡಿದ್ದಾರೆ. ಅನೇಕ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿರುವುದಲ್ಲದೇ, ವೈಜ್ಞಾನಿಕ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದರು. ಅಲ್ಲದೆ, ರಾಷ್ಟ್ರೀಯ ಮಕ್ಕಳ ಚರ್ಮರೋಗ ತಜ್ಞರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರ ಕಿರುಕುಳ ಆರೋಪ

ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲೇ ವಿಷ ಸೇವಿಸಿ ವಿದ್ಯಾರ್ಥಿ ಆತ್ಮಹತ್ಯೆ ಯತ್ನ

ಮೈಸೂರು,ಸೆ.9(ಬಿಎಲ್‌ಯು)–ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲೇ ವಿದ್ಯಾರ್ಥಿಯೊಬ್ಬ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಇಂದು ನಡೆದಿದೆ.



ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಗಗನ್ (22) ಆತ್ಮಹತ್ಯೆಗೆ ಯತ್ನಿಸಿರುವ ವಿದ್ಯಾರ್ಥಿಯಾಗಿದ್ದಾನೆ. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ.ವೆಂಕಟೇಶ್ ನನಗೆ ಮಾನಸಿಕವಾಗಿ ಹಿಂಸೆ ಕೊಡುತ್ತಿದ್ದರು. ಜೊತೆಗೆ ದೈಹಿಕವಾಗಿ ಹಲ್ಲೆ ಕೂಡ ಮಾಡಿದ್ದರು. ರಶ್ಮಿ ಹಾಗೂ ಮಹೇಂದ್ರರ ಚಿತಾವಣೆ ಇದಕ್ಕೆ ಕಾರಣ ಎಂದು ಆತ್ಮಹತ್ಯೆ ಯತ್ನಕ್ಕೂ ಮುನ್ನ ಗಗನ್ ಸೆಲ್ಫಿ ವಿಡಿಯೋ ಮಾಡಿದ್ದಾನೆ.

ವಿಡಿಯೋ ಮಾಡಿದ ನಂತರ ಗಗನ್ ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲೇ ವಿಷ ಸೇವಿಸಿದ್ದಾನೆ. ಕುಸಿದು ಬಿದ್ದ ಗಗನ್‌ನನ್ನು ಕೂಡಲೇ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಸದ್ಯ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆತನಿಗೆ ಪ್ರಜ್ಞೆ ಬಂದ ನಂತರ ಹೆಚ್ಚಿನ ಮಾಹಿತಿ ದೊರೆಯಲಿದೆ.

ಆದರೆ ಗಗನ್ ಆರೋಪವನ್ನು ಪ್ರೊ.ವೆಂಕಟೇಶ್ ನಿರಾಕರಿಸಿದ್ದಾರೆ. ನನ್ನನ್ನು ನಿರ್ದೇಶಕ ಸ್ಥಾನದಿಂದ ಕೆಳಗಿಳಿಸಲು ನಮ್ಮ ಸಿಬ್ಬಂದಿಗಳಿಂದಲೇ ಇಂತಹ ಪಿತೂರಿ ನಡೆದಿದೆ. ಗಗನ್‌ನನ್ನು ಮುಂದೆ ಬಿಟ್ಟು ಇಷ್ಟೆಲ್ಲಾ ಮಾಡಿಸಿದ್ದಾರೆ ಎಂದು ದೂರಿದ್ದಾರೆ.

ಆತ್ಮಹತ್ಯೆಗೆ ಯತ್ನಿಸಿದ ಗಗನ್ ನಡತೆ ಸರಿ ಇರಲಿಲ್ಲ. ತುಂಬಾ ಅಶಿಸ್ತಿನಿಂದ ನಡೆದುಕೊಳ್ಳುತ್ತಿದ್ದ. ಈ ಕಾರಣದಿಂದ ಅವನಿಗೆ ಬುದ್ಧಿ ಮಾತು ಹೇಳಿದ್ದೆ. ಆದರೆ ಈಗ ಗಗನ್ ನನ್ನ ಹಾಗೂ ರಶ್ಮಿ, ಮಹೇಂದ್ರ ವಿರುದ್ಧ ಆಧಾರರಹಿತ ಆರೋಪ ಮಾಡಿದ್ದಾನೆ ಎಂದು ಪ್ರೊ. ವೆಂಕಟೇಶ್ ತಿಳಿಸಿದ್ದಾರೆ.

ಸ್ಕೂಟರ್ ಕಳವು

ಮೈಸೂರು,ಸೆ.9–ಮೈಸೂರಿನ ದೇವರಾಜ ಅರಸು ರಸ್ತೆಯ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದ ಸ್ಕೂಟರ್ ಕಳವು ಮಾಡಲಾಗಿದೆ. ಇಲ್ಲಿನ ಫಾಸ್ಟ್‌ಟ್ರಾಕ್ ವಾಚ್ ಅಂಗಡಿ ಮ್ಯಾನೇಜರ್ ವಿ.ನಿರಂಜನ್(38) ಸ್ಕೂಟರ್ ಕಳೆದುಕೊಂಡವರಾಗಿದ್ದು, ಇವರು ಸೆ.6ರಂದು ಸಂಜೆ 6.30ರ ಸುಮಾರಿನಲ್ಲಿ ಅರಸು ರಸ್ತೆಯ ನೈಕಾ ಶೋರೂಂ ಮುಂಭಾಗ ತನ್ನ ಡಿಯೋ ಸ್ಕೂಟರ್ (ಕೆಎ 09–ಹೆಚ್‌ಎಕ್ಸ್ 1221) ನಿಲ್ಲಿಸಿ ಅಂಗಡಿಗೆ ಹೋಗಿದ್ದು, ಕೆಲಸ ಮುಗಿಸಿ ರಾತ್ರಿ 8 ಗಂಟೆಗೆ ಹಿಂತಿರುಗಿ ಬಂದು ನೋಡಿದಾಗ ಸ್ಕೂಟರ್ ಕಳವಾಗಿರುವುದು ಗೊತ್ತಾಗಿದೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಹೋ... ಹೋ... ಬನ್ನಿ. ಮನೇಲಿ ಎಲ್ಲರೂ ಆರೋಗ್ಯವೇ?
ಮರೆಗುಳಿ ಪ್ರೊಫೆಸರ್ : ಅಯ್ಯೋ ದೇವರೆ, ಮರೆತೇ ಬಿಟ್ಟಿದ್ದೆನಲ್ಲಾ. ನಾನು ಬರುವಾಗ ನನ್ನ ಹೆಂಡ್ತಿ ಜಾರಿಬಿದ್ದಿದ್ದಳು.

ಮೈಸೂರು ಮಿತ್ರ

ಭಾನುವಾರ, 10 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಂದೇ ಒಂದು ಯೋಚನೆ ಸಹ ನಮ್ಮನ್ನು ಪರಿವರ್ತಿಸಬಲ್ಲದು – ನಿಟ್ಚೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಶ್ರೀಗಂಧದ ಕೊರಡು ತೇದಷ್ಟೂ ಪರಿಮಳ

ನಿಮ್ಮ ಪತ್ರಗಳು

■ ತಲೆ ಕತ್ತರಿಸಿದರೆ ಈ ನೆಲದ ಕಾನೂನು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ

ಮಾನ್ಯರೆ,

ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಅವರ ಪುತ್ರ ಹಾಗೂ ಹಾಲಿ ಸಚಿವರಾದ ಉದಯನಿಧಿ ಸ್ಟಾಲಿನ್ ಅವರು ಖಾಸಗಿ ಕಾರ್ಯಕ್ರಮವೊಂದರಲ್ಲಿ ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎಂಬ ಹೇಳಿಕೆಯೊಂದು ಇಡೀ ದೇಶದ ಉದ್ದಗಲಕ್ಕೂ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಜೊತೆಗೆ ಒಂದು ಧರ್ಮಕ್ಕೆ ಮಾಡಿದ ಅಪಮಾನ ಎಂದು ಸಹ ಕೆಲವರು ಹೇಳುತ್ತಿದ್ದಾರೆ. ಉದಯನಿಧಿ ಸ್ಟಾಲಿನ್ ಅವರ ಈ ಹೇಳಿಕೆಗೆ ಉಗ್ರವಾಗಿ ಪ್ರತಿಕ್ರಿಯೆ ನೀಡಿರುವ ಉತ್ತರ ಪ್ರದೇಶದ ರಾಮಚಂದ್ರ ದಾಸ್ ಪರಮಹಂಸರ ಆಚಾರ್ಯ ಎಂಬ ಸ್ವಾಮೀಜಿಯೊಬ್ಬರು ನಮ್ಮ ಸನಾತನ ಧರ್ಮದ ಬಗ್ಗೆ ಮಾತನಾಡಿರುವ ಉದಯನಿಧಿ ಸ್ಟಾಲಿನ್ ತಲೆಯನ್ನು ಕತ್ತರಿಸಿದವರಿಗೆ ಹತ್ತು ಕೋಟಿ ಬಹುಮಾನವನ್ನು ಕೊಡಲಾಗುವುದು ಎಂಬ ಬಹಿರಂಗವಾದ ಹೇಳಿಕೆಯನ್ನು ನೀಡಿದ್ದಾರೆ. ಅದು ಏನೇ ಇರಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿಕೊಂಡಿರುವ ಉದಯನಿಧಿ ಸ್ಟಾಲಿನ್ ಅವರ ಮಾತು ತಪ್ಪು ಅಥವಾ ಸರಿನೋ. ಇದನ್ನು ಸಂವಿಧಾನದ ಅಡಿಯಲ್ಲಿ ದಾಖಲಿಸಿ ತನಿಖೆ ಮಾಡುವುದು ಕ್ಷೇಮ. ಇದನ್ನು ಬಿಟ್ಟು ಖಾವಿ ಹಾಕಿಕೊಂಡು ತಲೆ ಕತ್ತರಿಸಿ ಎಂದು ಹೇಳಿರುವುದು ನಿಜಕ್ಕೂ ಕೊಲೆಗೆ ಪ್ರಚೋಧಿಸಿರುವ ಮೊದಲ ಸಾಕ್ಷಿ. ಹಾಗೇ ಈ ನೆಲದ ಕಾನೂನು ಈ ಸ್ವಾಮೀಜಿ ಹೇಳಿಕೆಯನ್ನು ಸಹಿಸುವುದಿಲ್ಲ. ಜೊತೆಗೆ ಸುಮ್ಮನೆ ಬಿಡುವುದಿಲ್ಲ.

–ಪವನ್ ಜಯರಾಂ, ಸಿದ್ದಯ್ಯನಪುರ.

■ ಇಲ್ಲೇ ಚಂದ್ರಲೋಕ ದರ್ಶನ...!



ಮಾನ್ಯರೇ,

ಮೈಸೂರಿನ ಆಲನಹಳ್ಳಿ ಪಂಚಾಯಿತಿ ವ್ಯಾಪ್ತಿಯ ರಿಂಗ್ ರೋಡ್‌ನಿಂದ ನಾಡನಹಳ್ಳಿಗೆ ವಾಸವಿ ಶಾಂತಿ ಧಾಮದ ಮೂಲಕ ಸಾಗುವ ಈ ರಸ್ತೆ ವರ್ಷಗಳಿಂದ ಕನಿಷ್ಠ ರಿಪೇರಿಯನ್ನೂ ಕಂಡಿಲ್ಲ. ನಿತ್ಯವೂ ಲಾರಿಗಳು, ಶಾಲಾ ಮಕ್ಕಳ ವಾಹನಗಳಲ್ಲದೆ ನೂರಾರು ವಾಹನಗಳು ಈ ಅಪಾಯಕಾರಿ ರಸ್ತೆಯಲ್ಲೇ ಸಾಗಬೇಕು. ಬೈಕ್ ಸವಾರರಂತೂ ದಿನವೂ ಆತಂಕದಿಂದಲೇ ಮಕ್ಕಳನ್ನು ಶಾಲೆಗೆ ಬಿಡಬೇಕು. ಭಾರತ ಚಂದ್ರನನ್ನು ಮುಟ್ಟುತ್ತಿರುವ ಸಮಯ ಬಂದಿದ್ದರೂ ನಮಗೆ ಮಾತ್ರ ಇವರು ಇಲ್ಲೇ ಚಂದ್ರಲೋಕವನ್ನು ತೋರಿಸುತ್ತಿದ್ದಾರೆ. ಈಗಲಾದರೂ ಈ ರಸ್ತೆಯನ್ನು ಕನಿಷ್ಠ ರಿಪೇರಿಯನ್ನು ಮಾಡಬೇಕಾಗಿ ವಿನಂತಿ.

– ನೊಂದ ನಿವಾಸಿಗಳು, ಮೈಸೂರು.

■ ಜನಪ್ರತಿನಿಧಿಗಳು ಬಾಯಿ ಮುಚ್ಚಿಕೊಂಡಿದ್ದರೆ ಸಾಕು!

ಮಾನ್ಯರೆ,

ಪ್ರತಿದಿನವೂ ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿರುವ ರಾಜಕೀಯ ಧುರೀಣರ ಹಾಗೂ ತಾವೇ ಜಾತಿ ಮತ ವ್ಯವಸ್ಥೆಯನ್ನು ಗುತ್ತಿಗೆ ಪಡೆದವರಂತೆ ಮಾತನಾಡುವವರ ವಿಚಾರಗಳನ್ನು ನೋಡಿದಾಗ ಹೇಸಿಗೆಯಾಗುತ್ತದೆ. ಇವರಿಗೆ ಜನರ ನೆಮ್ಮದಿ ಕೆಡಿಸುವುದೇ ಮುಖ್ಯವೋ? ಎಂಬ ಶಂಕೆ ಮೂಡುತ್ತದೆ. ಜನಪ್ರತಿನಿಧಿಗಳೂ ಸೇರಿದಂತೆ ಹಲವರು ಸ್ವಲ್ಪ ಬಾಯಿಮುಚ್ಚಿಕೊಂಡಿದ್ದರೆ ಸಾಕು..ಜನ ನೆಮ್ಮದಿಯಿಂದ ಬದುಕುತ್ತಾರೆ.!

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು

■ ಭಾರತ್ ಆದರೆ ತಪ್ಪೇನು!?

ಮಾನ್ಯರೆ,

ಜಿ20 ಆಮಂತ್ರಣ ಪತ್ರಿಕೆಯಲ್ಲಿ ಪ್ರೆಸಿಡೆಂಟ್ ಆಫ್ ಭಾರತ್ ಎಂದು ನಮೂದಿಸಿರುವುದರಿಂದ ಇಂಡಿಯಾ ಎಂಬ ಹೆಸರನ್ನು ಭಾರತ್ ಎಂದು ಬದಲಿಸಲಾಗುತ್ತದೆ ಎಂಬ ವದಂತಿಗಳು ಹಬ್ಬಿವೆ. ಇದರ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಹಾಸ್ಯಭರಿತವಾದ ಚರ್ಚೆಗಳು ಆರಂಭವಾಗಿವೆ! ಒಂದು ವೇಳೆ ಭಾರತ್ ಎಂದು ಹೆಸರು ಬದಲಾದರೆ ತಪ್ಪೇನು? ಇಂಡಿಯಾ ಅಂತಾನೇ ಇದ್ದಿದ್ದರೆ ಏನಾಗುತ್ತಿತ್ತು? ಎಂಬೆಲ್ಲಾ ಅರ್ಥದ ಚರ್ಚೆಗಳು ನಡೆಯುತ್ತಿವೆ. ಇಷ್ಟಕ್ಕೂ ಭಾರತ ಸರ್ಕಾರ ಇಂಡಿಯಾ ಎಂಬ ಹೆಸರನ್ನು ಭಾರತ್ ಎಂದು ಬದಲಾಯಿಸುತ್ತೇವೆ ಅಂತ ಎಲ್ಲೂ ಅಧಿಕೃತವಾಗಿ ಹೇಳದಿದ್ದರೂ ಅರ್ಥಪೂರ್ಣವಾದ ಚರ್ಚೆಗಳು ಎಲ್ಲೆಡೆ ನಡೆಯುತ್ತಿರುವುದು ಸಮಂಜಸವೇ ಆಗಿದೆ.

ಭಾರತ ಎಂಬ ಹೆಸರು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಇದನ್ನು ಪ್ರಾಚೀನ ಕಾಲದಿಂದಲೂ ಬಳಸಲಾಗುತ್ತಿದೆ. 'ಭಾರತ' ಎಂಬುದು ಅಸಂಖ್ಯಾತ ತಲೆಮಾರುಗಳಿಂದ ಬಂದ ರಾಷ್ಟ್ರದ ಹೆಸರಾಗಿದೆ. ಮಕ್ಕಳಿಗೆ ಭಾರತೀಯ ಸಾಂಸ್ಕೃತಿಕ ಮೌಲ್ಯಗಳು, ಸಂಪ್ರದಾಯಗಳು ಮತ್ತು ಕುಟುಂಬ ತತ್ವಗಳನ್ನು ತಿಳಿಸಲು ಇದರಿಂದ ನೆರವಾದಂತಾಗುತ್ತದೆ. ಭಾಷೆಯ ವ್ಯತ್ಯಾಸವನ್ನು ಲೆಕ್ಕಿಸದೆ ಇಡೀ ದೇಶದ ಜನರು ಇದನ್ನು ಭಾರತವೆಂದು ಕರೆಯಲು ಆರಂಭಿಸಿದ್ದಾರೆ. ಕೆಲವೊಮ್ಮೆ ನಾವು ಇಂಗ್ಲಿಷ್‌ನಲ್ಲಿ ಮಾತನಾಡುವಾಗ 'ಇಂಡಿಯಾ' ಎಂದು ಬಳಸಬೇಕಾಗುತ್ತದೆ. ಅದನ್ನು ಇತರ ವ್ಯಕ್ತಿಗೆ ಅರ್ಥವಾಗಲೆಂದು ನಾವು ಹೀಗೆ ಬಳಸುತ್ತೇವೆ. ಇನ್ನು ಮುಂದೆ ಹಾಗೆ ಮಾಡುವ ಅಗತ್ಯವಿಲ್ಲ. ಭಾಷೆಯ ಆಧಾರದ ಮೇಲೆ ವಿಶೇಷ ಹೆಸರುಗಳನ್ನು ಬದಲಾಯಿಸುವುದು ಅಷ್ಟೇನೂ ಸರಿ ಕಾಣದು. ಈ ರೀತಿ ಪ್ರಪಂಚದಾದ್ಯಂತ ಇದನ್ನು ಎಲ್ಲಿಯೂ ಮಾಡಲಾಗಿಲ್ಲ. ಆದರೆ ನಮ್ಮಲ್ಲಿ ಯಾಕೆ ಮಾಡಬೇಕು? ಇಂಡಿಯಾ ಇನ್ಮುಂದೆ ಭಾರತ್ ಆದರೆ ಭಾರತ್ ಎಂದೇ ಎಲ್ಲಾ ಕಡೆ ಉಚ್ಚರಿಸಿ ಬಳಸಲಾಗುತ್ತದೆ. ಏಕ ರೀತಿಯ ಪದ ಪ್ರಯೋಗ ಒಳ್ಳೆಯದೇ ಅಲ್ಲವೇ? ಇನ್ಮುಂದೆ ಒಂದೇ ದೇಶಕ್ಕೆ ಇಂಡಿಯಾ–ಭಾರತ ಎಂಬ ಎರಡೆರಡೂ ಪದ ಪ್ರಯೋಗ ಮಾಡುವುದು ಸಹ ತಪ್ಪುತ್ತದೆ. ಹೀಗಾಗಿ ಇಂಡಿಯಾ (ಭಾರತ) ಎಂಬ ಎರಡೆರಡೂ ಹೆಸರು ಬದಲಾಗಿ, ಎಲ್ಲರೂ ಬಳಸುವಂತೆ ಏಕರೀತಿಯವಾಗಿ 'ಭಾರತ್' ಆದರೆ ಸೂಕ್ತ ಹಾಗೂ ಸ್ವಾಗತಾರ್ಹ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಸಂಘರ್ಷಕ್ಕೆ ಬದಲು ಸಮನ್ವಯತೆ 'ಬ್ರಿಕ್ಸ್' ಶೃಂಗಸಭೆ ಮಹದುದ್ದೇಶ



ಆರ್ಥಿಕ ಮತ್ತು ಭೂ ರಾಜಕೀಯ ಕ್ಷೇತ್ರಗಳಲ್ಲಿ ದೊರೆತಿರುವ ಯಶಸ್ಸಿನಿಂದ ಜಾಗತಿಕವಾಗಿ ದಕ್ಷಿಣ ದೇಶಗಳು(ಬ್ರಿಕ್ಸ್) ಬ್ರಿಕ್ಸ್ ಸದಸ್ಯರಾಗಲು ತೋರುತ್ತಿರುವ ಉತ್ಸಾಹದಿಂದ ಬ್ರಿಕ್ಸ್ ನಾಯಕರು ಉತ್ತೇಜಿತರಾಗಿದ್ದಾರೆ. ಬಹು ವ್ಯವಹಾರಿಕ ಉದ್ದೇಶಕ್ಕೆ ಬ್ರಿಕ್ಸ್ ಸರಿಯಾದ ವೇದಿಕೆ ಎಂದು ದಕ್ಷಿಣ ಗೋಳದ ದೇಶಗಳೀಗ ನಿರ್ಣಯ ತಾಳಿದ್ದಾರೆ. ಆಲ್ಜಿರಿಯಾ, ಈಜಿಪ್ಟ್, ಥೈಲ್ಯಾಂಡ್, ಅರಬ್ ದೇಶಗಳೊಂದಿಗೆ ಜಿ–20ರ ಸದಸ್ಯರಾದ ಅರ್ಜೆಂಟೀನಾ, ಇಂಡೋನೇಷ್ಯಾ, ಮೆಕ್ಸಿಕೋ, ಸೌದಿ ಅರೇಬಿಯಾ ಮೊದಲಾದ ದೇಶಗಳು ಬ್ರಿಕ್ಸ್ ಸಂಘಟನೆ ಸೇರಲು ಆಸಕ್ತಿ ತೋರಿದ್ದಾರೆ. ಕೊನೆಗೆ ಕೇವಲ ಆರು ದೇಶಗಳಿಗೆ ಬ್ರಿಕ್ಸ್ ಸದಸ್ಯತ್ವ ನೀಡಲಾಯಿತು.

ಕಳೆದ ತಿಂಗಳು ದಕ್ಷಿಣ ಆಫ್ರಿಕಾದ ಜೊಹಾನ್ಸ್ ಬರ್ಗ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗ ಸಭೆಯಲ್ಲಿ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಪೂಸಾ ಅವರು ಔಪಚಾರಿಕವಾಗಿ ಬ್ರಿಕ್ಸ್ ವಿಸ್ತರಿಸುವ ಘೋಷಣೆ ಮಾಡುವುದರೊಂದಿಗೆ ಸೌದಿ ಅರೇಬಿಯಾ, ಇರಾನ್, ಈಜಿಪ್ಟ್, ಯುಎಇ, ಅರ್ಜೆಂಟೀನಾ ಮತ್ತು ಇಥಿಯೋಪಿಯಾ ಹೊಸದಾಗಿ ಸದಸ್ಯತ್ವ ಪಡೆದ ರಾಷ್ಟ್ರಗಳಾದವು. ಮೇಲ್ನೋಟಕ್ಕೆ ಅಮೇರಿಕ ಮತ್ತದರ ಮಿತ್ರ ದೇಶಗಳು ನ್ಯಾಟೋ ಮತ್ತಿತರ ಸಂಘಟನೆಗಳಿಗೆ ಪ್ರತಿಯಾಗಿ, ಪರ್ಯಾಯವಾಗಿ ಬ್ರಿಕ್ಸ್ ಸಂಘಟನೆ ಜಗತ್ತಿನ ಆರ್ಥಿಕ, ಭೂ ರಾಜಕೀಯಗಳನ್ನು ಪುನರ್ ರೂಪಿಸುವಂತೆ ಕಾಣುತ್ತಿದೆ. ಅಭಿವೃದ್ಧಿಶೀಲ ದೇಶಗಳ ಗುಂಪಾಗಿ ಆರಂಭಗೊಂಡ ಬ್ರಿಕ್ಸ್ ಪ್ರಸ್ತುತ ಪ್ರಬಲ ಅಂತರರಾಷ್ಟ್ರೀಯ ಕೂಟವಾಗಿ ಜಾಗತಿಕ ಆರ್ಥಿಕ, ಭೂರಾಜಕೀಯದಲ್ಲಿ ಮಹತ್ವದ ಪಾತ್ರ ನಿರ್ವಹಿಸುವಂತಹ ವಾತಾವರಣ ಸೃಷ್ಟಿಸಿಕೊಂಡಿದೆ. 2006ರಲ್ಲಾದ ಯೋಚನೆಯ ಪರಿಣಾಮ 2009ರಲ್ಲಿ ಈ ರಾಷ್ಟ್ರಗಳ ಮೊದಲ ಶೃಂಗ ಸಭೆ ನಡೆದ ಬಳಿಕ ದಕ್ಷಿಣ ಆಫ್ರಿಕಾವನ್ನೂ ಸೇರಿಸಿ ಬ್ರಿಕ್ಸ್ ರೂಪುಗೊಂಡಿತು.

ಬ್ರಿಕ್ಸ್ ಸಂಘಟನೆಯ ಆರಂಭ

2009ರಲ್ಲಿ ನಾಲ್ಕು ದೇಶಗಳಾದ ಬ್ರೆಜಿಲ್, ಭಾರತ, ರಷ್ಯಾ, ಚೀನಾ ಸೇರಿ ಪ್ರಾರಂಭವಾದ ಬಿಆರ್‌ಐಸಿ ಸಂಘಟನೆ 2010ರಲ್ಲಿ ದಕ್ಷಿಣ ಆಫ್ರಿಕಾ ಸೇರ್ಪಡೆಯೊಂದಿಗೆ 'ಬ್ರಿಕ್ಸ್' (ಬ್ರಿಕ್ಸ್) ಎಂದು ಮರುನಾಮಕರಣಗೊಂಡಿತು. ವಾರ್ಷಿಕ ಶೃಂಗಸಭೆ ನಡೆಸುತ್ತಾ ಬಂದಿರುವ ಈ ಸಂಘಟನೆಯ ದೇಶಗಳಲ್ಲಿ 2015ರ ಮಾಹಿತಿಯಂತೆ ಜಾಗತಿಕ ಜನಸಂಖ್ಯೆಯ ಅರ್ಧದಷ್ಟು ಅಂದರೆ 3.6 ಟ್ರಿಲಿಯನ್ ಜನಸಂಖ್ಯೆ ಇದ್ದು, ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) 16.6 ಲಕ್ಷ ಕೋಟಿ ಡಾಲರ್ ಆಗಿದೆ. ಜಗತ್ತಿನ ಒಟ್ಟಾರೆ ಉತ್ಪಾದನೆಯ ಶೇ.22ರಷ್ಟು ಮಾತ್ರ. ಈ ಕಾರಣದಿಂದ ಈ ಸಂಘಟನೆ ಹೊಗಳಿಕೆ–ತೆಗಳಿಕೆಗೆ ಗುರಿಯಾಗಿತ್ತು.

ಬ್ರಿಕ್ಸ್‌ನಲ್ಲಿ ಸಹಕಾರದ ಸ್ವರೂಪ ಮತ್ತು ಬೆಳವಣಿಗೆ

ಬ್ರಿಕ್ಸ್ ಸದಸ್ಯ ದೇಶಗಳ ಮಧ್ಯೆ ರಾಜಕೀಯ, ವಾಣಿಜ್ಯ ಮತ್ತು ಸಾಂಸ್ಕೃತಿಕ ಸಹಕಾರಗಳನ್ನು ಹೆಚ್ಚಿಸಲು 2011 ರಲ್ಲಿ ಬ್ರಿಕ್ಸ್ ಫೋರಂ ಎಂಬ ಸ್ವತಂತ್ರ ಅಂತರರಾಷ್ಟ್ರೀಯ ಸಂಘಟನೆಯ ಸ್ಥಾಪನೆಯಾಯ್ತು. 2012 ರಲ್ಲಿ ಬ್ರಿಕ್ಸ್ ದೇಶಗಳು ಜಂಟಿಯಾಗಿ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್)ಯ ಸಾಲ ನೀಡುವ ಶಕ್ತಿ ವೃದ್ಧಿಸಲು 75 ಬಿಲಿಯನ್ ಡಾಲರ್ ಕೊಡುಗೆ ಮೀಸಲಿಡುವುದಾಗಿ ಹೇಳಿದವು. 2013 ರಲ್ಲಿ ಐಎಂಎಫ್ ಮತ್ತು ವಿಶ್ವ ಬ್ಯಾಂಕ್‌ಗೆ ಪ್ರತಿಯಾಗಿ ಬ್ರಿಕ್ಸ್ ದೇಶಗಳ ಹಣಕಾಸು ಸಂಸ್ಥೆ ಸ್ಥಾಪಿಸುವ ನಿರ್ಣಯದಂತೆ 2014 ರಲ್ಲಿ ನೂರು ಶತಕೋಟಿ ಡಾಲರ್‌ಗಳ ಬಂಡವಾಳವಿರುವ ಬ್ರಿಕ್ಸ್ ಬ್ಯಾಂಕ್ ಸ್ಥಾಪನೆಗೆ ಸಹಿ ಮಾಡಿದವು. ಆರಂಭದಲ್ಲಿ ಬ್ರಿಕ್ಸ್ ಡೆವಲಪ್‌ಮೆಂಟ್ ಬ್ಯಾಂಕ್ ಎಂದಿದ್ದ ಇದರ ಹೆಸರನ್ನು ನಂತರ ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್ ಎಂದು ಮರು ನಾಮಕರಣ ಮಾಡಲಾಯಿತು. ಬ್ರಿಕ್ಸ್ ಸದಸ್ಯ ದೇಶಗಳು ತಲಾ 10 ಶತ ಕೋಟಿ ಡಾಲರ್ ಆರಂಭಿಕ ಬಂಡವಾಳ ಹೂಡುವ ಮೂಲಕ ಆರಂಭಿಕ 50 ಶತಕೋಟಿಯಿಂದ ಪಾಲು ಬಂಡವಾಳವನ್ನು ನೂರು ಶತಕೋಟಿಗೆ ಹೆಚ್ಚಿಸಲಾಗುವುದು. ಪ್ರಸ್ತುತ ವಾರ್ಷಿಕವಾಗಿ 34 ಶತ ಕೋಟಿ ಡಾಲರ್ ಸಾಲ ನೀಡಲಿದೆ. ಬೃಹತ್ ಆರ್ಥಿಕತೆಯಲ್ಲಿ ದೇಶಗಳು ಅಕ್ವಿಡಿಟಿ ಬಿಕ್ಕಟ್ಟು ಮತ್ತು ಪಾವತಿ ಕೊರತೆ ಅಥವಾ ಪವತಿ ಸಮತೋಲನಗಳ ಬಿಕ್ಕಟ್ಟನ್ನು ಎದುರಿಸಲು ಈ ಬ್ಯಾಂಕ್ ಸಹಾಯ ಮಾಡುತ್ತದೆ. ಅದೇ ರೀತಿ ಸದಸ್ಯ ದೇಶಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಈ ಬ್ಯಾಂಕ್ ಹಣಕಾಸು ನೆರವು ನೀಡುತ್ತದೆ.

ಜೊಹಾನ್ಸ್ ಬರ್ಗ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗ ಸಭೆ

ಈ ಬಾರಿಯ ಶೃಂಗ ಸಭೆಯಲ್ಲಿ ಆರು ದೇಶಗಳಿಗೆ ಸದಸ್ಯ ಸ್ಥಾನ ನೀಡುವುದು ಕಾರ್ಯಸೂಚಿಯಲ್ಲಿ ಪ್ರಮುಖವಾಗಿತ್ತು. ಭಾರತದ ಪ್ರಧಾನಿ ಮೋದಿಯವರು ಹೊಸ ಆರು ಸದಸ್ಯ ರಾಷ್ಟ್ರಗಳನ್ನು ಸ್ವಾಗತಿಸುತ್ತಾ ಈ ನಡೆಯ ಮೂಲಕ ಬಹುಕೇಂದ್ರಿತ ಜಾಗತಿಕ ವ್ಯವಸ್ಥೆಯಲ್ಲಿ ಅನೇಕ ದೇಶಗಳ ವಿಶ್ವಾಸ ಇನ್ನೂ ಬಲವಾಗಲಿದೆ ಎಂದು ನುಡಿದರು. ಚೀನಿ ಅಧ್ಯಕ್ಷ ಕ್ಸಿಜಿನ್‌ಪಿಂಗ್ ವಿಸ್ತರಣೆಯನ್ನು ಐತಿಹಾಸಿಕ ಎಂದು ಕರೆದರು. ಹೊಸ ರಾಷ್ಟ್ರಗಳನ್ನು ಸೇರಿಸುವುದರ ನೇತೃತ್ವವನ್ನು ಕ್ಸಿ ವಹಿಸುವ ಮೂಲಕ ದಕ್ಷಿಣ ದೇಶಗಳು ಜಾಗತಿಕ ವಿಚಾರದಲ್ಲಿ ಬಲವಾದ ಧ್ವನಿಯಾಗುವರೆಂಬ ವಿಶ್ವಾಸ ವ್ಯಕ್ತಪಡಿಸಿದರು. ಚೀನಿ ಅಧಿಕಾರಿಗಳಂತೂ ಬ್ರಿಕ್ಸ್ ಗುಂಪು ಜಿ–7 ಗುಂಪಿಗೆ ಪರ್ಯಾಯ, ಪ್ರತಿಸ್ಪರ್ಧಿಯಾಗಲಿದೆಯೆಂಬ ವಿಶ್ವಾಸ ವ್ಯಕ್ತಪಡಿಸಿದರು. ಆದರೆ ದುರ್ಬಲವಾಗಿರುವ ರಷ್ಯಾ, ಹದಗೆಟ್ಟಿರುವ ಭಾರತ–ಚೀನಾ ಸಂಬಂಧದ ಹಿನ್ನೆಲೆಯಲ್ಲಿ ವಿಸ್ತರಿತ ಬ್ರಿಕ್ಸ್ ಸಂಘಟನೆ ಮುಂದಿನ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಯಾವ ರೀತಿ ಸಂಘಟಿತವಾಗಿ ಕಾರ್ಯ ನಿರ್ವಹಿಸಲಿದೆ ಎಂಬುದರ ಮೇಲೆ ಸಂಘಟನೆಯ ಯಶಸ್ಸು ಅಡಗಿದೆ. ಬ್ರಿಕ್ಸ್ ಕೂಟ ವಿಸ್ತಾರದ ಜತೆಗೆ ಸಂಕೀರ್ಣತೆಯೂ ಹೆಚ್ಚಿದೆ. ಇರಾನ್ ಸೇರ್ಪಡೆ ಒಂದು ರೀತಿ ಪುಟಿನ್, ಕ್ಸಿಯವರಿಗೆ ವೈಯಕ್ತಿಕ ವಿಜಯವೆನಿಸಿದರೆ, ಪಾಕಿಸ್ತಾನಕ್ಕೆ ಸದಸ್ಯತನ ನೀಡದಿರುವುದು ಪ್ರಧಾನಿ ಮೋದಿಯವರ ವಿಜಯ ಎನಿಸಿದೆ. ಪ್ರಸ್ತುತ ಬ್ರಿಕ್ಸ್ ದೇಶಗಳನ್ನು ಗಮನಿಸಿದಲ್ಲಿ ಈ ಕೂಟ ಮುಂದಿನ ದಿನಗಳಲ್ಲಿ ಪಶ್ಚಿಮವನ್ನು ವಿರೋಧಿಸುವ ವೇದಿಕೆಯಾಗಲಿದೆ ಎಂದು ರಾಜತಾಂತ್ರಿಕರ ಅಭಿಪ್ರಾಯವಾಗಿದೆ.

ಬ್ರಿಕ್ಸ್ ವಿಸ್ತರಣೆಯ ಪರಿಣಾಮ

ಅಮೇರಿಕದ ಆರ್ಥಿಕ ನಿರ್ಬಂಧಗಳಿಂದ ತೀವ್ರ ಸಂಕಷ್ಟದಲ್ಲಿರುವ ಇರಾನ್ ಬ್ರಿಕ್ಸ್ ಸದಸ್ಯತ್ವದಿಂದ ನಿರಾಳಗೊಂಡಿದೆ. ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿರುವ ಅರ್ಜೆಂಟೀನಾಗೆ ಸದಸ್ಯತ್ವ ದೊರೆತಿರುವುದು ಆರ್ಥಿಕತೆ ಸುಧಾರಿಸುವ ಅವಕಾಶ ನೀಡಲಿದೆ. ಅರ್ಜೆಂಟೀನಾ ಅಧ್ಯಕ್ಷ ಅಲ್ಬರ್ಟ್ ಫರ್ನಾಂಡೀಸ್ ರವರು ದೇಶಕ್ಕೆ ಹೊಸ ಸನ್ನಿವೇಶಗಳನ್ನು ಸೃಷ್ಟಿಸಲಿದೆಯೆಂದರು. ಅತ್ಯಂತ ಬಡ ದೇಶವಾದ ಇಥಿಯೋಪಿಯಾದ ಪ್ರಧಾನಿ ಅಬ್ಬಿ ಅಹ್ಮದ್‌ರವರು ತನ್ನ ದೇಶಕ್ಕೆ ಇದೊಂದು ಶ್ರೇಷ್ಠ ಕ್ಷಣ ಎಂದರು. ಹೊಸ ಸದಸ್ಯರ ಸೇರ್ಪಡೆ ಬ್ರಿಕ್ಸ್ ಗುಂಪಿಗೆ ಪ್ರಾದೇಶಿಕ ಹಾಗೂ ಜಾಗತಿಕವಾಗಿ ಹೆಚ್ಚಿನ ಲಾಭ ತರಲಿದೆ ಎಂಬ ನಿರೀಕ್ಷೆ ಮೂಡಿಸಿದೆ. ಖಂಡ ಆಧಾರಿತ, ವಲಯ ಆಧಾರಿತ ಕೂಟಗಳು ವಿಶ್ವದ ಮೇಲೆ ಶ್ರೀಮಂತ ದೇಶಗಳ ದಬ್ಬಾಳಿಕೆಯನ್ನು ನಿಯಂತ್ರಿಸಬಹುದು.

ಅಮೇರಿಕದ ವ್ಯೂಹಾತ್ಮಕ ಮತ್ತು ಅಂತರರಾಷ್ಟ್ರೀಯ ಅಧ್ಯಯನ ಕೇಂದ್ರದ ಪ್ರಮುಖ ರಯನ್ ಬರ್ಗ್‌ರ ಪ್ರಕಾರ ಈ ಶೃಂಗದಲ್ಲಿ ಚೀನಾ ಮತ್ತು ರಷ್ಯಾ ತಮ್ಮ ಉದ್ದೇಶ ಸಾಧನೆಯಲ್ಲಿ ಯಶಸ್ಸು ಸಾಧಿಸಿರುವುದು ಅತ್ಯಂತ ಮಹತ್ವದ ವಿಚಾರವಾಗಿದೆ. ಕ್ಸಿ ಯೋಚಿಸಿದಂತೆ ಚೀನಾ ಕೇಂದ್ರಿತ ಬ್ರಿಕ್ಸ್ ರಚಿಸುವ ಅವಕಾಶ ಚೀನಾಕ್ಕೆ ದೊರೆತಿದೆ. ಯುಕ್ರೇನ್ ಯುದ್ಧದಿಂದ ಏಕಾಂಗಿಯಾಗಿರುವ ರಷ್ಯಾಕ್ಕೆ ಮುಂದಿನ ವರ್ಷ ಬ್ರಿಕ್ಸ್ ಸಮಾವೇಶ ರಷ್ಯಾದಲ್ಲಿ ಆಯೋಜಿಸುವ ಅವಕಾಶ ದೊರೆತಿದೆ.

ಬ್ರಿಕ್ಸ್ ಶೃಂಗದಲ್ಲಿ ಭಾರತದ ಪ್ರಸ್ತಾಪಗಳು

ಭಾರತವು ಹೊಸ ಸದಸ್ಯರ ಸೇರ್ಪಡೆಯನ್ನು ಯಾವುದೇ ರೀತಿಯಲ್ಲೂ ವಿರೋಧಿಸದಿದ್ದರೂ, ಸೇರ್ಪಡೆಗೆ ಒಂದು ಸಮಿತಿ ರಚಿಸಬೇಕು ಹಾಗೂ ಕೆಲವು ನೀತಿ ನಿಯಮ ನಿಬಂಧನೆಗಳಿರಬೇಕೆಂದು ಸೂಚಿಸಿತು. ಭಾರತವು ವಾಣಿಜ್ಯ ಉದ್ದೇಶಗಳಿಗೆ ತನ್ನ ಕರೆನ್ಸಿಯನ್ನೇ ವಿನಿಮಯಕ್ಕೆ ಉಪಯೋಗಿಸುವುದಕ್ಕೆ ನೀಡುತ್ತಿರುವ ಒತ್ತು ಅನೇಕ ದೇಶಗಳು ಸ್ಥಾನೀಯ ಕರೆನ್ಸಿಗಳಲ್ಲೇ ವ್ಯವಹರಿಸುವುದಕ್ಕೆ ತೋರುತ್ತಿರುವ ಒಲವು. ಜಾಗತಿಕ ಮಟ್ಟದಲ್ಲಿ ಆಡಳಿತಾತ್ಮಕ ಸುಧಾರಣೆಗಳು, ಇವುಗಳ ಹಿನ್ನೆಲೆಯಲ್ಲಿ ಸುಸ್ಥಿರ ಅಭಿವೃದ್ಧಿ ಬಗ್ಗೆ ಬ್ರಿಕ್ಸ್ ಶೃಂಗದಲ್ಲಿ ವ್ಯಾಪಕ ಸಮಾಲೋಚನೆಗಳಾದವು. ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ವಿನಿಮಯ ಕರೆನ್ಸಿಯಾಗಿರುವ ಅಮೇರಿಕದ ಡಾಲರ್‌ನ ಪ್ರಭುತ್ವದಿಂದ ಹೊರ ಬರಲು ಹೆಚ್ಚಿನ ದೇಶಗಳು ಪರ್ಯಾಯ ಕರೆನ್ಸಿ ಹುಡುಕುತ್ತಿವೆ. ಅಮೇರಿಕ ತನ್ನ ವಿದೇಶಾಂಗ ನೀತಿ ಹೇರುವ ಒತ್ತಡ ತೋರಿದಲ್ಲಿ ಭವಿಷ್ಯದಲ್ಲಿ ಡಾಲರ್ ಪ್ರಭುತ್ವ ಪತನವಾಗಲಿದೆ ಎಂದು ಅಮೇರಿಕದ ಅಧಿಕಾರಿಗಳು ಸರಕಾರವನ್ನು ಎಚ್ಚರಿಸಿದ್ದಾರೆ.

ಶೃಂಗ ಸಭೆಯಲ್ಲಿ ಯೂರೋಪಿನ ಯೂರೋದಂತೆ ಬ್ರಿಕ್ಸ್ ಕರೆನ್ಸಿಯ ಪ್ರಸ್ತಾಪವಾಗಿದೆ ಎಂಬ ಮಾಹಿತಿ ಇದೆ. ಬ್ರಿಕ್ಸ್‌ನ ಹೆಚ್ಚಿನ ದೇಶಗಳ ಪಾವತಿ ಸ್ಥಿತಿ ಮಿಗತೆಯಲ್ಲಿದ್ದರೂ, ಸಾಂಸ್ಥಿಕ ವ್ಯವಸ್ಥೆ ಇಲ್ಲದ ಕಾರಣ ಏಕರೂಪದ ಕರೆನ್ಸಿ ವ್ಯವಸ್ಥೆ ತರಲು ಸಫಲವಾಗಿಲ್ಲ. ಆಶಾದಾಯಕ ಬೆಳವಣಿಗೆ ಎಂದರೆ ಇತ್ತೀಚಿನ ದಿನಗಳಲ್ಲಿ ಬ್ರಿಕ್ಸ್ ದೇಶಗಳು ತಮ್ಮ ಕರೆನ್ಸಿಯಲ್ಲೇ ವ್ಯವಹರಿಸಲಾರಂಭಿಸಿದ್ದಾರೆ. ಇದು ಸದಸ್ಯ ದೇಶಗಳಲ್ಲಿ ಆಮದು ರಫ್ತಿಗೆ ಭಾರೀ ಉತ್ತೇಜನ ನೀಡಿದೆ. ಡಾಲರ್ ಖರೀದಿಸುವ ಸಮಸ್ಯೆ ಸಾಕಷ್ಟು ಕಡಿಮೆಯಾಗಿದೆ. ಜೊಹಾನ್ಸ್ ಬರ್ಗ್ ಶೃಂಗ ಸಭೆಯು ಸ್ಥಾನೀಯ ಕರೆನ್ಸಿ ಪಾವತಿ ವ್ಯವಸ್ಥೆಗೆ ಅವಕಾಶ ನೀಡುವುದರೊಂದಿಗೆ ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲಿ ಡಾಲರ್ ದಬ್ಬಾಳಿಕೆ ಕಡಿಮೆ ಮಾಡುವಲ್ಲಿ ಹೊಸ ಭರವಸೆ ಸೃಷ್ಟಿಸಿದೆ. ಭಾರತ ಈಗಾಗಲೇ ಹದಿನೆಂಟು ದೇಶಗಳೊಂದಿಗೆ ರೂಪಾಯಿಯಲ್ಲಿ ವ್ಯವಹರಿಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಭಾರತವು ಮುಂಬರುವ ದಿನಗಳಲ್ಲಿ ಜಾಗತಿಕ ಬೆಳವಣಿಗೆಯ ಇಂಜಿನ್ ಆಗಲಿದೆ. ಬ್ರಿಕ್ಸ್‌ನ ವಿಸ್ತರಣೆ ಮತ್ತು ಒಮ್ಮತದಿಂದ ಮುಂದುವರೆಯಬೇಕೆಂದು ಭಾರತ ಬಯಸುತ್ತದೆ. ಬ್ರಿಕ್ಸ್ ಗುಂಪು ಭವಿಷ್ಯದ ಪರಿಣತ ಸಂಸ್ಥೆಯಾಗಿ ಮಾಡುವಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರವೆನಿಸುತ್ತದೆ ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳವಣಿಗೆಯಾಗುತ್ತಿರುವ ಆರ್ಥಿಕತೆಯಾಗಿದೆ. ಭಾರತ ಶೀಘ್ರದಲ್ಲಿ 5 ಟ್ರಿಲಿಯನ್ ಡಾಲರ್‌ನ ಆರ್ಥಿಕತೆಯಾಗಲಿದೆ ಎಂದು ಶೃಂಗ ಸಭೆಯಲ್ಲಿ ಮೋದಿಯವರು ವಿಶ್ವಾಸ ವ್ಯಕ್ತಪಡಿಸಿದರು. ಬ್ರಿಕ್ಸ್ ರಾಷ್ಟ್ರಗಳ ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್ ಐದು ವರ್ಷಗಳಲ್ಲಿ 2.5 ಶತಕೋಟಿ ಡಾಲರ್ ಮೌಲ್ಯದ ಭಾರತೀಯ ರೂಪಾಯಿಯ ಬಾಂಡ್ ಅನ್ನು ಅಕ್ಟೋಬರ್‌ನಲ್ಲಿ ಬಿಡುಗಡೆ ಮಾಡಲಿದೆ ಎಂದು ಬ್ಯಾಂಕ್‌ನ ಮುಖ್ಯ ಹಣಕಾಸು ಅಧಿಕಾರಿ ಲೆಸ್ಲಿ ಮಸ್ಡೋರ್ಪ್ ತಿಳಿಸಿದ್ದಾರೆ. ಉತ್ತರ ಮತ್ತು ದಕ್ಷಿಣ ಗೋಳಾರ್ಧದ ದೇಶಗಳ ನಡುವೆ ಸಂಘರ್ಷಕ್ಕಿಂತ ಸಮನ್ವಯ ಸಾಧಿಸುವುದು, ತಿರಸ್ಕಾರದ ಬದಲು ಸಹಕಾರದ ಮನೋಭಾವನೆ ಮೂಡಿಸುವುದು ಬ್ರಿಕ್ಸ್ ಕೂಟದ ಉದ್ದೇಶವಾಗಿದೆ.

ಪ್ರಧಾನಿ ಮೋದಿ ಎದುರು ಇಂಡಿಯಾ ಬದಲಿಗೆ ಭಾರತ್ ಹೆಸರಿನ ಫಲಕ!



ನವದೆಹಲಿ, ಸೆ. 9– ಇಂಡಿಯಾ ಹೆಸರು ಬದಲಾವಣೆ ವಿಚಾರ ಕುರಿತು ದೇಶಾದ್ಯಂತ ತೀವ್ರ ಚರ್ಚೆ ನಡೆಯುತ್ತಿರುವಂತೆಯೇ, ಇದೀಗ ನವದೆಹಲಿಯಲ್ಲಿ ನಡೆಯುತ್ತಿರುವ ಜಿ–20 ಶೃಂಗಸಭೆಯಲ್ಲಿಯೂ ಇಂಡಿಯಾ ಬದಲಿಗೆ 'ಭಾರತ್ ''ಹೆಸರಿನ ಪ್ರಸ್ತಾಪ ಬಂದಿದೆ.

ಇಂದು ಜಿ–20 ಶೃಂಗಸಭೆಯನ್ನು ದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮಾತನಾಡುತ್ತಿದ್ದಾಗ ದೇಶದ ಹೆಸರನ್ನು ಮೈಕ್‌ನ ನೇಮ್ ಬೋರ್ಡ್‌ನಲ್ಲಿಯೂ Bharat ಎಂದು ಪ್ರದರ್ಶಿಸಲಾಯಿತು. ಜಿ–20 ಔತಣಕೂಟದ ಆಹ್ವಾನ ಪತ್ರಿಕೆಯಲ್ಲಿ ರಾಷ್ಟ್ರಪತಿಯವರನ್ನು 'ಪ್ರೆಸಿಡೆಂಟ್ ಆಫ್ ಇಂಡಿಯಾ' ಬದಲಿಗೆ 'ಪ್ರೆಸಿಡೆಂಟ್ ಆಫ್ ಭಾರತ್' ಎಂಬ ಉಲ್ಲೇಖದ ನಂತರ ವಿವಾದಕ್ಕೆ ಕಾರಣ ವಾಗಿದ್ದು, ವಿಪಕ್ಷಗಳು ತಮ್ಮ ಮೈತ್ರಿಕೂಟಕ್ಕೆ ರಾಷ್ಟ್ರೀಯ ಅಭಿವೃದ್ಧಿ ಅಂತರ್ಗತ ಅಲೆಯನ್ಸ್ (INDIA) ಎಂದು ಹೆಸರಿಟ್ಟಿರುವುದರಿಂದ ಹೆಸರು ಬದಲಾವಣೆಗೆ ಸರ್ಕಾರ ನಿರ್ಧರಿಸಿದೆ ಎಂದು ಟೀಕಿಸುತ್ತಿವೆ.



ಜಿ20 ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ವಿಶ್ವ ನಾಯಕರಿಗೆ ರಾತ್ರಿ ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಏರ್ಪಡಿಸಿದ್ದ ವಿಶೇಷ ಔತಣಕೂಟದಲ್ಲಿ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹಾಗೂ ಅವರ ಪತ್ನಿ ಅಕ್ಷತಾ ಮೂರ್ತಿ ಪಾಲ್ಗೊಂಡಿದ್ದರು.

ಕೃತಜ್ಞತೆಗಳು, ಆದರೆ... ಹೆಮ್ಮೆ ಪಡುವಂಥದ್ದು ಏನೂ ಇಲ್ಲ

ರಷ್ಯಾ ಯುದ್ಧದ ಕುರಿತು ಜಿ20 ಹೇಳಿಕೆಗೆ ಉಕ್ರೇನ್ ಖಡಕ್ ಪ್ರತಿಕ್ರಿಯೆ



ನವದೆಹಲಿ: ತನ್ನ ಮೇಲಿನ ರಷ್ಯಾದ ಆಕ್ರಮಣದ ಕುರಿತು ದೆಹಲಿಯಲ್ಲಿ ನಡೆಯುತ್ತಿರುವ ಜಿ20 ಶೃಂಗಸಭೆಯಲ್ಲಿ ಕೈಗೊಂಡ ನಿರ್ಣಯದ ಕುರಿತು ಜಿ20 ರಾಷ್ಟ್ರಗಳಿಗೆ ಉಕ್ರೇನ್ ಕೃತಜ್ಞತೆ ಸಲ್ಲಿಸಿದೆಯಾದರೂ ಹೆಮ್ಮೆಪಡಲು ಏನೂ ಇಲ್ಲ ಎಂದು ಹೇಳುವ ಮೂಲಕ ತನ್ನ ಬೆಂಬಲಕ್ಕೆ ನಿಲ್ಲದ ರಾಷ್ಟ್ರಗಳಿಗೆ ನೇರವಾಗಿಯೇ ತಿವಿದಿದೆ.

ಇತ್ತ ಜಿ20 ನಾಯಕರಿಂದ ಜಂಟಿ ಹೇಳಿಕೆ ಬಿಡುಗಡೆಯಾಗುತ್ತಲೇ ಅತ್ತ ಉಕ್ರೇನ್ ರಾಜಧಾನಿ ಕೀವ್‌ನಿಂದ ಉಕ್ರೇನಿಯನ್ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕೂಡ ಈ ಕುರಿತು ಹೇಳಿಕೆ ಬಿಡುಗಡೆ ಮಾಡಿದ್ದು, "ಪಠ್ಯದಲ್ಲಿ ಬಲವಾದ ಪದಗಳನ್ನು ಸೇರಿಸಲು ಪ್ರಯತ್ನಿಸಿದ ಪಾಲುದಾರರಿಗೆ ಉಕ್ರೇನ್ ಕೃತಜ್ಞರಾಗಿರಬೇಕು. ಅದೇ ಸಮಯದಲ್ಲಿ, ಉಕ್ರೇನ್ ವಿರುದ್ಧ ರಷ್ಯಾದ ಆಕ್ರಮಣಶೀಲತೆಯ ವಿಷಯದಲ್ಲಿ, ಜಿ20ರ ಗುಂಪಿನ ರಾಷ್ಟ್ರಗಳ ಬಗ್ಗೆ ಹೆಮ್ಮೆಪಡಲು ಏನೂ ಇಲ್ಲ" ಎಂದು ಟೀಕಿಸಿದೆ.

ಈ ಕುರಿತು ಮಾತನಾಡಿರುವ ಉಕ್ರೇನ್ ವಿದೇಶಾಂಗ ಸಚಿವ ಒಲೆಗ್ ನಿಕೊಲೆಂಕೊ ಅವರು, ತಮ್ಮ ಹೇಳಿಕೆಯಲ್ಲಿ ಎಲ್ಲಿಯೂ ರಷ್ಯಾ ಪದ ಬಳಕೆ ಮಾಡದ ಜಿ20 ರಾಷ್ಟ್ರಗಳನ್ನು, ಅವರು ಟೀಕಿಸಿದ್ದಾರೆ. ಮಾತ್ರವಲ್ಲದೇ ತಮ್ಮ ಪ್ರತಿಭಟನಾರ್ಥವಾಗಿ ಜಿ20 ಹೇಳಿಕೆಯ ಪಠ್ಯದ ಪ್ರತಿಯಲ್ಲಿ ಕೆಂಪು ಬಣ್ಣದಲ್ಲಿ ಎಡಿಟ್ ಮಾಡಲಾಗಿದ್ದು, ರಷ್ಯಾ ಹೆಸರು ಹೇಳದೇ ಅವರು, ಆ ದೇಶ ಎಂಬ ಒಕ್ಕಣೆ ಇದ್ದ ಪದಗಳನ್ನು ತೆಗೆದು ಅಲ್ಲಿ ರಷ್ಯಾ, 'ಉಕ್ರೇನ್‌ನಲ್ಲಿ ಯುದ್ಧ' ಪದಕ್ಕೆ ಬದಲಾಗಿ 'ಉಕ್ರೇನ್ ವಿರುದ್ಧದ ಯುದ್ಧ' ಎಂಬ ಪದಗಳನ್ನು ಸೇರಿಸಿ ಆ ಹೇಳಿಕೆಯ ಫೋಟೋವನ್ನು ಟ್ವಿಟರ್‌ನಲ್ಲಿ ಅಪ್ಲೋಡ್ ಮಾಡಿದ್ದಾರೆ. ಮಾತ್ರವಲ್ಲದೇ ಜಿ20 ಹೇಳಿಕೆಯಲ್ಲಿ ಎಲ್ಲೆಲ್ಲಿ ರಷ್ಯಾ ಪದ ಹೆಸರಿಸದೇ ಆ ದೇಶವನ್ನು ಇತರೆ ಪದಗಳಿಂದ ಉಲ್ಲೇಖಿಸಿದ್ದರೋ ಅಲ್ಲೆಲ್ಲಾ ಕೆಂಪು ಬಣ್ಣದಲ್ಲಿ ಅಡ್ಡಗೆರೆ ಎಳೆದು ರಷ್ಯಾ ಪದಗಳನ್ನು ಬರೆದಿದ್ದಾರೆ.

ವಿಶ್ವ ನಾಯಕರಿಗೆ ವಿಶೇಷ ಔತಣಕೂಟ; ಪಕ್ಕಾ ಭಾರತೀಯ ಶೈಲಿಯ ಸಸ್ಯಾಹಾರಿ ಖಾದ್ಯಗಳು!

ನವದೆಹಲಿ: ರಾಜಧಾನಿ ದೆಹಲಿಯಲ್ಲಿ ನಡೆಯುತ್ತಿರುವ ಜಿ20 ಶೃಂಗಸಭೆಯಲ್ಲಿ ಬೆಳಗ್ಗಿನಿಂದಲೂ ಸತತ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದ ವಿಶ್ವ ನಾಯಕರಿಗೆ ರಾತ್ರಿ ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ವಿಶೇಷ ಔತಣಕೂಟ ಏರ್ಪಡಿಸಿದ್ದರು.

ಜಿ20 ಶೃಂಗಸಭೆಯ ಶನಿವಾರದ ಕಾರ್ಯಕ್ರಮಗಳು, ಸಭೆಗಳ ಮುಕ್ತಾಯದ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ಮೋದಿ ಅವರು ಜಿ20 ನಾಯಕರು ಮತ್ತು ಪ್ರತಿನಿಧಿಗಳಿಗಾಗಿ ದೆಹಲಿಯ ಪ್ರಗತಿ ಮೈದಾನದ ಭಾರತ ಮಂಟಪದಲ್ಲಿ ವಿಶೇಷ ಔತಣಕೂಟ ಏರ್ಪಡಿಸಿದ್ದರು. ಈ ಭವ್ಯ ಭೋಜನಕೂಟಕ್ಕೆ ನಾಯಕರನ್ನು ಖುದ್ದು ಪ್ರಧಾನಿ ಮೋದಿ ಸ್ವಾಗತಿಸಿದರು. ಈ ಔತಣಕೂಟದಲ್ಲಿ ಸೊಗಸಾದ ಭಾರತೀಯ ಸಸ್ಯಾಹಾರಿ ಆಹಾರಗಳನ್ನು ಉಣಬಡಿಸಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಮಾಜಿ ನಗರಪಾಲಿಕೆ ಸದಸ್ಯರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್‌ಕುಮಾರ್ ರವರಿಗೆ
ಹುಟ್ಟುಹಬ್ಬದ
ಹಾರ್ದಿಕ ಶುಭಾಶಯಗಳು
ದಿನಾಂಕ:- 10-09-2023
ಶುಭಕೋರುವವರು:
ತೇಜಸ್ವಿ ನಾಗಲಿಂಗಸ್ವಾಮಿ ಹಾಗೂ ಗೆಳೆಯರು, ಅಗ್ರಹಾರ


ಮಾಜಿ ನಗರಪಾಲಿಕೆ ಸದಸ್ಯರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್‌ಕುಮಾರ್ ರವರಿಗೆ
ಜನ್ಮ ದಿನದ ಶುಭಾಶಯಗಳು
ಶುಭಕೋರುವವರು: ನಾಚನಹಳ್ಳಿಪಾಳ್ಯ ಸ್ನೇಹ ಬಳಗ


ಮಾಜಿ ನಗರಪಾಲಿಕೆ ಸದಸ್ಯರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್‌ಕುಮಾರ್ ರವರಿಗೆ
ಹುಟ್ಟುಹಬ್ಬದ
ಹಾರ್ದಿಕ ಶುಭಾಶಯಗಳು
ಶುಭಕೋರುವವರು:
ಸುಣ್ಣದಕೇರಿ ಗೆಳೆಯರ ಬಳಗ


ಮಾಜಿ ನಗರಪಾಲಿಕೆ ಸದಸ್ಯರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್‌ಕುಮಾರ್ ರವರಿಗೆ
ಹುಟ್ಟುಹಬ್ಬದ
ಹಾರ್ದಿಕ ಶುಭಾಶಯಗಳು
ದಿನಾಂಕ:- 10-09-2023
ಶುಭಕೋರುವವರು :
ಜೆ. ರವಿ ಸ್ನೇಹ ಬಳಗ
ಕುರುಬಾರಹಳ್ಳಿ

ಮೈಸೂರಿಂದ ಕೇರಳ ಗಡಿ ತನಕ 127 ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ

ಸಂಸದ ಪ್ರತಾಪ್ ಸಿಂಹ ಮಾಹಿತಿ

● ಮೈಸೂರಿಂದ ನಂಜನಗೂಡು ತನಕ 6 ಪಥ ● ನಂಜನಗೂಡಿನಿಂದ ಕೇರಳ ಗಡಿಭಾಗದ ತನಕ 4 ಪಥ ● ಮೈಸೂರು–ಬೆಂಗಳೂರು ಹೈವೆಯಲ್ಲಿ ವಾಹನಗಳ ವೇಗದ ಮಿತಿ ಹೆಚ್ಚಳಕ್ಕೆ ಚಿಂತನೆ



ಮೈಸೂರು,ಸೆ.9(ಬಿಎಲ್‌ಎಂ)– ಮೈಸೂರು ನಗರದಿಂದ ಕೇರಳ ಗಡಿಭಾಗದ ತನಕ ರಾಷ್ಟ್ರೀಯ ಹೆದ್ದಾರಿಯನ್ನು 127 ಕೋಟಿ ವೆಚ್ಚದಲ್ಲಿ ಅಗಲೀಕರಣ, ಡಾಂಬರೀಕರಣ ಮಾಡಲಾಗುವುದು ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಕಾಲೇಜು ಬಳಿ ರಾಷ್ಟ್ರೀಯ ಹೆದ್ದಾರಿ 766ರ ಯೋಜನೆ ಅನುಷ್ಠಾನ ಸಂಬಂಧ ಸ್ಥಳ ಪರಿಶೀಲನೆ ನಡೆಸಿದ ನಂತರ ಮಾತನಾಡಿದ ಅವರು, ಮೈಸೂರು ನಗರದಿಂದ ನಂಜನಗೂಡು ತನಕ ಈಗಿರುವ ರಾಷ್ಟ್ರೀಯ ಹೆದ್ದಾರಿಯನ್ನು 4ರಿಂದ 6 ಪಥವಾಗಿ ಅಭಿವೃದ್ಧಿ ಮಾಡಲಾಗುವುದು. ಹಾಗೆಯೇ ನಂಜನಗೂಡಿನಿಂದ ಕೇರಳ ಗಡಿ ತನಕ ಈಗಿರುವ ದ್ವಿಪಥವನ್ನು ನಾಲ್ಕು ಪಥವಾಗಿ ಮಾರ್ಪಡಿಸಲಾಗುವುದು ಎಂದರು.

ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಮಾಡುವ ಸಂಬಂಧ ಮೈಸೂರು ಹಾಗೂ ನಂಜನಗೂಡು ನಡುವಿನ ಹೆದ್ದಾರಿ ಮಾರ್ಗ ಬದಲಾವಣೆಗೆ ಇನ್ನು ಮೂರು ವರ್ಷಗಳಾಗುತ್ತದೆ. ಅಲ್ಲಿವರೆಗೆ ಮೈಸೂರಿನಿಂದ ಕೇರಳ ಗಡಿಭಾಗದ ರಸ್ತೆ ಮತ್ತಷ್ಟು ಹಾಳಾಗುತ್ತದೆ. ಈ ಕಾರಣದಿಂದ ಈಗ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಮಾಡಲಾಗುವುದು ಎಂದು ವಿವರಿಸಿದರು.

ಹೈವೇಯಲ್ಲಿ ವೇಗದ ಮಿತಿ ಹೆಚ್ಚಳಕ್ಕೆ ಚಿಂತನೆ: ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಸ್ಪೀಡ್ ಲಿಮಿಟ್ ಹೆಚ್ಚಳಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಚಿಂತನೆ ನಡೆಸಿದೆ. ಆದರೆ ಎಷ್ಟು ಪ್ರಮಾಣದಲ್ಲಿ ವೇಗದ ಮಿತಿ ಇರಬೇಕೆಂದು ಇನ್ನು ನಿರ್ಧರಿಸಿಲ್ಲ ಎಂದರು. 120 ಕಿಲೋ ಮೀಟರ್ ವೇಗದಲ್ಲಿ ಸಂಚರಿಸಬಹುದಾದ ಹೈವೆ ನಿರ್ಮಾಣ ಮಾಡಲಾಗಿದೆ. ಆದರೆ ಸಣ್ಣಪುಟ್ಟ ಕಾರುಗಳು 120 ಕಿಲೋ ಮೀಟರ್ ವೇಗದಲ್ಲಿ ಸಾಗಿದರೆ ಅಪಘಾತವಾಗುತ್ತದೆ. ಈ ಹಿನ್ನೆಲೆಯಲ್ಲಿ ಜನರನ್ನು ಮೊದಲು ಶಿಸ್ತುಬದ್ಧಗೊಳಿಸಬೇಕು. ತರುವಾಯ ಅಪಘಾತಗಳ ಸಂಖ್ಯೆ ಕಡಿಮೆ ಆಗುವುದನ್ನು ಅವಲೋಕಿಸಿ ವೇಗಮಿತಿ ಹೆಚ್ಚಳ ಮಾಡಲಾಗುವುದು. ಆದರೆ ಈಗ ಟ್ರಕ್ ಲೈನ್ ಗುರುತಿಸುವ ಬಗ್ಗೆ ಕ್ರಮ ವಹಿಸಲಾಗುವುದು ಎಂದರು.

ರಾಜ್ಯ ರಸ್ತೆ ಸಾರಿಗೆಯಲ್ಲಿ ಶೀಘ್ರ 13 ಸಾವಿರ ನೌಕರರ ನೇಮಕಾತಿ

● ಸಾರಿಗೆ ಸಚಿವ ರಾಮಲಿಂಗರೆಡ್ಡಿ ಮಾಹಿತಿ ● ಚಾಲಕರು, ನಿರ್ವಾಹಕರು, ಮೆಕ್ಯಾನಿಕ್ ಹುದ್ದೆಗಳ ಭರ್ತಿಗೆ ಕ್ರಮ ● ನಿಗಮದ ಪ.ಜಾತಿ, ಪ.ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ



ಮೈಸೂರು,ಸೆ.9(ಪಿಎಂ)– ರಾಜ್ಯ ರಸ್ತೆ ಸಾರಿಗೆಯ ನಾಲ್ಕು ನಿಗಮಗಳಲ್ಲಿ ಚಾಲಕರು, ನಿರ್ವಾಹಕರು ಹಾಗೂ ಮೆಕ್ಯಾನಿಕ್ ಹುದ್ದೆಗಳು ಸೇರಿದಂತೆ ಸುಮಾರು 13 ಸಾವಿರ ನೌಕರರ ನೇಮಕಾತಿಗೆ ಶೀಘ್ರ ಕ್ರಮ ವಹಿಸಲಾಗುವುದು ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗರೆಡ್ಡಿ ತಿಳಿಸಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ (4 ಸಾರಿಗೆ ನಿಗಮಗಳ ಸಂಯುಕ್ತಾಶ್ರಯದಲ್ಲಿ) ವತಿಯಿಂದ ಹಮ್ಮಿಕೊಂಡಿದ್ದ ವಿಶ್ವಜ್ಞಾನಿ, ಭಾರತರತ್ನ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತಿ (ಭೀಮೋತ್ಸವ), ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾನು 2013–17ರವರೆಗೂ ಸಾರಿಗೆ ಸಚಿವನಾಗಿದ್ದೆ. ಈ 7 ವರ್ಷಗಳಲ್ಲಿ ನಿವೃತ್ತಿ ಹೊಂದಿದವರೇ ಹೆಚ್ಚು. ಸುಮಾರು 13 ಸಾವಿರ ಜನ ನಿವೃತ್ತರಾದರು. ಆದರೆ ಆ ಜಾಗಗಳಿಗೆ ನೇಮಕಾತಿ ಮಾತ್ರ ಆಗಲೇ ಇಲ್ಲ. ಈಗ ನಾನು ಎರಡನೇ ಬಾರಿಗೆ ಸಾರಿಗೆ ಸಚಿವನಾದ ನಂತರ ಚಾಲಕರು, ನಿರ್ವಾಹಕರು ಹಾಗೂ ಮೆಕ್ಯಾನಿಕ್ ಹುದ್ದೆಗಳು ಸೇರಿದಂತೆ ಸುಮಾರು 13 ಸಾವಿರ ನೌಕರರ ಭರ್ತಿಗೆ ಕ್ರಮ ವಹಿಸಿದ್ದೇನೆ ಎಂದರು.

ಈ ಎಲ್ಲವೂ ಹೊಸ ಹುದ್ದೆಗಳೇನಲ್ಲ. ಎಲ್ಲವೂ ಮಂಜೂರಾತಿ ಹುದ್ದೆಗಳೇ ಆಗಿವೆ. ಕೋವಿಡ್ ಸಂದರ್ಭದಲ್ಲಿ ಈ ಹುದ್ದೆಗಳ ಭರ್ತಿಗೆ ತಡೆಹಿಡಿದಿದ್ದರು. ಇದೀಗ ಭರ್ತಿಗೆ ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾಪ ಕಳುಹಿಸಿದ್ದೇವೆ. ಅನುಮತಿ ಬಂದ ಕೂಡಲೇ ನೇಮಕಕ್ಕೆ ಚಾಲನೆ ನೀಡಲಾಗುವುದು. ಈ ಹುದ್ದೆಗಳು ಭರ್ತಿಯಾದರೆ ಹೆಚ್ಚು ಬಸ್‌ಗಳನ್ನು ಓಡಿಸಲು ಅವಕಾಶವಾಗಲಿದೆ ಎಂದು ತಿಳಿಸಿದರು.

ಲಕ್ಷದ 9 ಸಾವಿರ ನೌಕರರಲ್ಲಿ 13 ಸಾವಿರ ಮಂದಿ ನಿವೃತ್ತರಾದ ಹಿನ್ನೆಲೆಯಲ್ಲಿ ನಾಲ್ಕು ನಿಗಮಗಳಲ್ಲಿ ಬಸ್‌ಗಳನ್ನು ಓಡಿಸುವುದು ಕಷ್ಟವಾಗುತ್ತಿದೆ. ಆದ್ದರಿಂದ ಈ ಹುದ್ದೆಗಳ ಭರ್ತಿಗೆ ಪ್ರಥಮ ಆದ್ಯತೆ ನೀಡಿದ್ದೇನೆ. ಕೋವಿಡ್ ಸಂದರ್ಭದಿಂದ ಬಸ್‌ಗಳ ಸಂಚಾರ ಕಡಿಮೆಯಾಗಿದೆ. ಇದಕ್ಕೆ ಕೋವಿಡ್ ಒಂದು ಕಾರಣವಾದರೆ, ಎರಡನೆಯದು ನಿವೃತ್ತಿ ಜಾಗಕ್ಕೆ ನೇಮಕಾತಿ ನಡೆಯದೇ ಇರುವುದು. ಇದರಿಂದ ಚಾಲಕರು, ನಿರ್ವಾಹಕರ ಕೊರತೆ ಎದುರಾಗಿದೆ ಎಂದು ಹೇಳಿದರು.

ನಾನು ಹಿಂದೆ ಮಂತ್ರಿ ಸ್ಥಾನದಿಂದ ನಿರ್ಗಮಿಸಿದ ನಂತರ ಈ ಹಿಂದಿನ ಸರ್ಕಾರ 4 ವರ್ಷ ಕಾಲ ಒಂದು ಹೊಸ ಬಸ್ ಅನ್ನು ಖರೀದಿ ಮಾಡಲಿಲ್ಲ. ಅಧಿಕಾರಾವಧಿಯ ಕೊನೆ ವರ್ಷದಲ್ಲಿ ಹೊಸದಾಗಿ 4 ಸಾವಿರ ಬಸ್‌ಗಳ ಖರೀದಿಗೆ ತೀರ್ಮಾನಿಸಿದರು. ಆದರೆ ಅಷ್ಟೊತ್ತಿಗೆ ಚುನಾವಣೆ ಎದುರಾಯಿತು. ಇದೀಗ ಹೊಸ ಬಸ್‌ಗಳು ನಿಗಮಕ್ಕೆ ಪೂರೈಕೆಯಾಗುತ್ತಿವೆ ಎಂದರು.

ನಮ್ಮ ನಾಲ್ಕು ನಿಗಮಗಳು ದೇಶದಲ್ಲೇ ಅತ್ಯುತ್ತಮ ಸಾರಿಗೆ ಎಂಬ ಹೆಸರು ಪಡೆದಿವೆ. 35 ವರ್ಷಗಳಲ್ಲಿ ಕೆಎಸ್‌ಆರ್‌ಟಿಸಿಗೆ ಸುಮಾರು 400 ಪ್ರಶಸ್ತಿಗಳು ಸಂದಿವೆ. ಇಷ್ಟು ಪ್ರಶಸ್ತಿಗಳು ಬೇರೆ ಯಾವ ರಾಜ್ಯಗಳ ರಸ್ತೆ ಸಾರಿಗೆ ಸಂಸ್ಥೆಗಳಿಗೂ ಬಂದಿಲ್ಲ. ಕೇಂದ್ರ ಸರ್ಕಾರದಿಂದ ಪ್ರತಿವರ್ಷ 'ಎಕ್ಸಲೆಂಟ್ ಅವಾರ್ಡ್' ಎಂದು ಕೊಡಲಾಗುತ್ತದೆ. ಈ ಪ್ರಶಸ್ತಿಯು ಸತತ 6 ವರ್ಷಗಳ ಕಾಲ ಕೆಎಸ್‌ಆರ್‌ಟಿಸಿಗೆ ಬಂದಿದೆ. ಕೋವಿಡ್ ಹಿನ್ನೆಲೆಯಲ್ಲಿ ಕಳೆದ 3 ವರ್ಷಗಳಿಂದ ಈ ಪ್ರಶಸ್ತಿ ನಿಲ್ಲಿಸಲಾಗಿದೆ. ಮತ್ತೆ ಪ್ರಶಸ್ತಿ ಕೊಡಲಾರಂಭಿಸಿದರೆ ಅದು ಕೆಎಸ್‌ಆರ್‌ಟಿಸಿಗೇ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬೇರೆ ರಾಜ್ಯಗಳ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಹೋಲಿಸಿದರೆ, ನಮ್ಮಲ್ಲಿ ವ್ಯವಸ್ಥೆ, ತಂತ್ರಜ್ಞಾನ ಎಲ್ಲವೂ ಉತ್ತಮವಾಗಿದೆ ಎಂದರು.

55 ಕೋಟಿ ಮಹಿಳೆಯರ ಪ್ರಯಾಣ: ನಮ್ಮ ಅನೇಕ ಗ್ಯಾರಂಟಿಗಳಲ್ಲಿ ಶಕ್ತಿಯೂ ಒಂದು. ಚುನಾವಣಾ ಪೂರ್ವದಲ್ಲಿ ವಿಪಕ್ಷಗಳು ಈ ಬಗ್ಗೆ ಟೀಕಾಪ್ರಹಾರ ನಡೆಸಿದವು. ಸುಳ್ಳು ಭರವಸೆ ಎಂದು ಆರೋಪಿಸಿದರು. ನಷ್ಟ ಉಂಟಾಗಲಿದೆ, ಕೆಎಸ್‌ಆರ್‌ಟಿಸಿ ನೌಕರರಿಗೆ ಸಂಬಳ ಕೊಡದ ಪರಿಸ್ಥಿತಿ ಉದ್ಭವಿಸಲಿದೆ ಎಂದು ಟೀಕಿಸಿದರು. ಈ ಯೋಜನೆ ಪ್ರಾರಂಭವಾಗಿ ಇದೀಗ 100 ದಿನಗಳಾಗಿದ್ದು, ನೌಕರರಿಗೆ ವೇತನ ಸ್ಥಗಿತಗೊಳಿಸಲಾಗಿದೆಯೇ? ಶಕ್ತಿ ಯೋಜನೆಯಡಿ ಪ್ರತಿದಿನ 60 ಲಕ್ಷ ಮಹಿಳೆಯರು ಪ್ರಯಾಣ ಮಾಡುತ್ತಿದ್ದಾರೆ. ಈವರೆಗೆ ಒಟ್ಟು 55 ಕೋಟಿಗಿಂತಲೂ ಹೆಚ್ಚು ಮಹಿಳೆಯರು ಪ್ರಯಾಣ ಮಾಡಿದ್ದಾರೆ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಆರ್ಥಿಕ ದುರ್ಬಲರ ಜೀವನ ಸುಧಾರಣೆಗಾಗಿ ನಮ್ಮ ಸರ್ಕಾರ ಗ್ಯಾರಂಟಿಗಳನ್ನು ಜಾರಿಗೆ ತಂದಿದೆ. ಬೆಲೆ ಏರಿಕೆಯಿಂದ ಜನ ಸಂಕಷ್ಟದಲ್ಲಿದ್ದರು. ಅತಿಯಾದ ತೆರಿಗೆಯಿಂದ ಜನ ತತ್ತರಿಸಿದ್ದರು. ಜನರ ಆದಾಯ ಹೆಚ್ಚಾಗದೇ ಅವರ ವೆಚ್ಚ ಹೆಚ್ಚಾಗಿತ್ತು. ಆದ್ದರಿಂದ ನಮ್ಮ ಸರ್ಕಾರ ಗ್ಯಾರಂಟಿಗಳನ್ನು ನೀಡಿತು ಎಂದರು.

ಉದ್ಘಾಟನೆ ನೆರವೇರಿಸಿದ ಶಾಸಕ ತನ್ವೀರ್‌ಸೇಠ್ ಮಾತನಾಡಿ, ಮೀಸಲಾತಿ ಸೌಲಭ್ಯ ಒಂದೇ ಅಲ್ಲ. ಬ್ಯಾಕ್‌ಲಾಗ್ ಹುದ್ದೆಗಳು ಸಮುದಾಯಕ್ಕೆ ದೊರೆಯುವಂತೆ ಆಗಬೇಕು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ 2002–03ರಲ್ಲಿ 19 ಸಾವಿರ ಪರಿಶಿಷ್ಟ ಜಾತಿ, ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಯಿತು. ಬಳಿಕ ಈವರೆಗೆ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯಾಗಿಲ್ಲ. ಅಂಬೇಡ್ಕರ್ ಅವರ ಜೀವನ ನಮ್ಮ ಮುಂದೆ ಇದೆ. ನಮಗೆ ಲಭಿಸಿದ ಹಕ್ಕುಗಳು ಅವರಿಗೆ ದೊರೆಯಲಿಲ್ಲ. ಅವರ ತ್ಯಾಗವನ್ನು ನಾವು ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ದಲಿತರು ಶತ ಶತಮಾನಗಳಿಂದ ಅಸ್ಪೃಶ್ಯತೆ ನೋವು ಅನುಭವಿಸಿದ್ದಾರೆ. ಆದರೆ ಕೇವಲ 75 ವರ್ಷಗಳಿಂದ ಜಾರಿಯಲ್ಲಿರುವ ಮೀಸಲಾತಿ ಸೌಲಭ್ಯ ಸಹಿಸದೇ ಅದನ್ನು ಕೈಬಿಡಬೇಕೆಂದು ಪ್ರತಿಪಾದಿಸುವವರೂ ಇರುವುದು ದುರಂತ ಎಂದು ಬೇಸರ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಜೊತೆಗೆ ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಪುರಭವನದಿಂದ ಜಗನ್ಮೋಹನ ಅರಮನೆವರೆಗೆ ಸಾರೋಟಿನಲ್ಲಿ ಅಂಬೇಡ್ಕರ್ ಅವರ ಫೋಟೋ ಮೆರವಣಿಗೆ ನಡೆಸಲಾಯಿತು.

ಸಮಾರಂಭದಲ್ಲಿ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಮೇಯರ್ ಪುರುಷೋತ್ತಮ್, ನಗರಪಾಲಿಕೆ ಸದಸ್ಯ ಜಿ.ಎಸ್.ಸತ್ಯರಾಜ್, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ್, ಸಂಘದ ರಾಜ್ಯಾಧ್ಯಕ್ಷ ಎನ್.ರವೀಂದ್ರ ಮತ್ತಿತರರು ಹಾಜರಿದ್ದರು.

ಅಂಬೇಡ್ಕರ್ ಅವರ ಮೇಧಾವಿತನಕ್ಕೆ ದೇಶದ ಸಂವಿಧಾನವೇ ಸಾಕ್ಷಿ

ನಮ್ಮ ದೇಶದ ಜನತೆಗೆ ಮಾತ್ರವಲ್ಲ, ಪ್ರಪಂಚದ ಎಲ್ಲರಿಗೂ ಗೌರವಯುತ ಬದುಕು ದೊರೆಯಬೇಕು. ಅವರಿಗೆ ಅವರ ಹಕ್ಕು ಲಭಿಸಬೇಕೆಂದು ಡಾ.ಅಂಬೇಡ್ಕರ್ ಪ್ರತಿಪಾದಿಸಿದ್ದಾರೆ. ನಮ್ಮ ರಾಷ್ಟ್ರದಲ್ಲಿ ಮಾತ್ರವಲ್ಲದೆ, ಎಲ್ಲಾ ರಾಷ್ಟ್ರಗಳಲ್ಲಿ ಡಾ.ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದ ಬಗ್ಗೆ ಮೆಚ್ಚುಗೆ ಇದೆ. ಅವರ ಮೇಧಾವಿತನಕ್ಕೆ ಭಾರತದ ಸಂವಿಧಾನವೇ ಸಾಕ್ಷಿ. ಅವರು ತೋರಿದ ದಾರಿಯಲ್ಲಿ ನಾವು ಸಾಗಬೇಕಿದೆ.

–ರಾಮಲಿಂಗರೆಡ್ಡಿ, ಸಾರಿಗೆ, ಮುಜರಾಯಿ ಸಚಿವ

ರಾಷ್ಟ್ರೀಯ ಮಕ್ಕಳ ರಂಗೋತ್ಸವಕ್ಕೆ ದೇಣಿಗೆ ಸಂಗ್ರಹ



ಮೈಸೂರು, ಸೆ.9– ರಾಷ್ಟ್ರೀಯ ಮಕ್ಕಳ ರಂಗೋತ್ಸವಕ್ಕೆ ದೇಣಿಗೆ ಸಂಗ್ರಹಿಸಲು ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯು ಅಭಿಯಾನವನ್ನು ಆರಂಭಿಸಿದೆ. ಹಿರಿಯ ರಂಗಕರ್ಮಿ ಪ್ರಸನ್ನ ಅವರ ನೇತೃತ್ವದಲ್ಲಿ ಮೈಸೂರಿನ ರಂಗಕರ್ಮಿಗಳು ಇಂದು ನಂಜರಾಜ ಬಹದ್ದೂರ್ ಛತ್ರದಿಂದ ಪಾದಯಾತ್ರೆ ಹೊರಟು ಶಿವರಾಮಪೇಟೆ ಬೀದಿಯಲ್ಲಿ ದೇಣಿಗೆ ಸಂಗ್ರಹಿಸಿದರು. ಈ ಅಭಿಯಾನವು ಉತ್ಸವ ಆರಂಭವಾಗುವ ಸೆ.19ರವರೆಗೆ ಮುಂದುವರೆಯಲಿದೆ. ಶಿವರಾಮಪೇಟೆಯ ವ್ಯಾಪಾರಸ್ಥರು, ಸಾರ್ವಜನಿಕರು ಹಾಗೂ ಅಂಗಡಿ ಮಾಲೀಕರು ಈ ಅಭಿಯಾನಕ್ಕೆ ಬೆಂಬಲ ವ್ಯಕ್ತಪಡಿಸಿ ದೇಣಿಗೆಯನ್ನು ನೀಡಿದರು. ಮುಂಬರಲಿರುವ ರಾಷ್ಟ್ರೀಯ ಮಕ್ಕಳ ನಾಟಕೋತ್ಸವದಲ್ಲಿ ಭಾಗವಹಿಸುವುದಾಗಿಯೂ ತಿಳಿಸಿದರು.

ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆ ಸಮರ್ಥಿಸಿಕೊಂಡ ದಲಿತ ಚಳವಳಿ ನವನಿರ್ಮಾಣ ವೇದಿಕೆ



ಮೈಸೂರು, ಸೆ.9(ಜಿಎ)–ತಮಿಳುನಾಡಿನ ಡಿಎಂಕೆ ಪಕ್ಷದ ಯುವ ನಾಯಕ ಸಚಿವ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮ ನಿರ್ಮೂಲನೆಯಾಗಬೇಕೆಂದು ನೀಡಿರುವ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವುದಾಗಿ ದಲಿತ ಚಳವಳಿ ನವ ನಿರ್ಮಾಣ ವೇದಿಕೆಯ ಹರಿಹರ ಆನಂದಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವೈದಿಕರು ಸೃಷ್ಟಿಸಿದ ಸನಾತನ ಧರ್ಮವು ಮೂಲ ಭಾರತೀಯರನ್ನು ವರ್ಣ, ಜಾತಿಗಳಾಗಿ ವಿಂಗಡಿಸಿ ನೂರಾರು ವರ್ಷಗಳಿಂದ ಬಾಧಿಸಿದೆ. ಹಸಿವು, ಅಸ್ಪೃಶ್ಯತೆ, ಅನಕ್ಷರತೆ, ಮೌಢ್ಯತೆ, ಮೇಲು ಕೀಳುಗಳ ತವರಾಗಿರುವ ಸನಾತನ ಧರ್ಮ ಅಂತ್ಯವಾಗಲೇಬೇಕು. ಸಂಘಟನೆಯು ಸಚಿವ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಯನ್ನು ಬೆಂಬಲಿಸುತ್ತದೆ. ಇಲ್ಲಿ ಸನಾತನ ಧರ್ಮವೇ ಬೇರೆ, ಹಿಂದು ಧರ್ಮವೇ ಬೇರೆ ಎಂಬ ಬಗ್ಗೆ ಎಲ್ಲರಿಗೂ ಅರಿವು ಬರಬೇಕಾಗಿದೆ ಎಂದರು.

ಮಹಿಷ ದಸರಾ ಆಚರಣೆ ತಡೆಯುವುದಾಗಿ ಸಂಸದ ಪ್ರತಾಪ್‌ಸಿಂಹ ಹೇಳಿರುವುದು ಖಂಡನೀಯ. ಸಂಸದರು ತಾವು ಮಾಡಬೇಕಾದ ಕೆಲಸದ ಬಗ್ಗೆ ಗಮನ ಹರಿಸಲಿ. ಇಂತಹ ಮನುವಾದಿ ಸನಾತನಿಗಳ ವಿರುದ್ಧ ಎಲ್ಲ ಪ್ರಾತಿಪರರು ಒಟ್ಟುಗೂಡಬೇಕಾಗಿದೆ ಎಂದು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬಂಗವಾದಿ ನಾರಾಯಣಪ್ಪ, ಕಂದೇಗಾಲ ಶಿವಣ್ಣ, ಹೊರಳವಾಡಿ ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ಸೌಜನ್ಯ ಕೊಲೆ ಪ್ರಕರಣದ ಮರು ತನಿಖೆ ಸಾಧ್ಯವಿಲ್ಲ



ಬೆಂಗಳೂರು: ಧರ್ಮಸ್ಥಳದಲ್ಲಿ ನಡೆದ ಸೌಜನ್ಯ ಅತ್ಯಾಚಾರ–ಕೊಲೆ ಪ್ರಕರಣದ ಮರು ತನಿಖೆಗೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಬೆಂಗಳೂರಿನ ಶೇಷಾದ್ರಿಪುರದ ಸಾಮಾಜಿಕ ಕಾರ್ಯಕರ್ತ ಗಿರೀಶ್ ಭಾರದ್ವಾಜ್, ಬೆಳ್ತಂಗಡಿಯ ನವೀನ್‌ಕುಮಾರ್ ಮತ್ತು ಬಲ್ನಾಡು ಪುತ್ತೂರಿನ ವಿನಾಯಕ ಫ್ರೆಂಡ್ಸ್ ಚಾರಿಟಬಲ್ ಟ್ರಸ್ಟ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ನೇತೃತ್ವದ ವಿಭಾಗೀಯ ಪೀಠವು ವಿಚಾರಣೆ ನಡೆಸಿತು. ಅರ್ಜಿದಾರರು ಎತ್ತಿರುವ ಮನವಿ ಕುರಿತು ಕಾನೂನಿನಡಿ ಲಭ್ಯವಿರುವ ಪರ್ಯಾಯ ವಿಧಾನಗಳ ಮೂಲಕ ಪರಿಹಾರ ಪಡೆಯಬಹುದು ಎಂದು ಅಭಿಪ್ರಾಯಪಟ್ಟು ಅರ್ಜಿ ವಜಾಗೊಳಿಸಿತು. ಇದಕ್ಕೂ ಮುನ್ನ ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಅರುಣ್ ಶ್ಯಾಮ್, 2012ರಲ್ಲಿ ವಿದ್ಯಾರ್ಥಿನಿ ಸೌಜನ್ಯ ಕೊಲೆ ಮತ್ತು ಅತ್ಯಾಚಾರ ಘಟನೆ ನಡೆದಿದೆ. ಪ್ರಕರಣದ ಆರೋಪಿ ವಿರುದ್ಧ ಸೂಕ್ತ ಸಾಕ್ಷ್ಯಾಧಾರಗಳು ಇಲ್ಲ ಎಂಬ ಕಾರಣಕ್ಕೆ ಆತನನ್ನು ವಿಚಾರಣಾಧೀನ ನ್ಯಾಯಾಲಯ ಖುಲಾಸೆಗೊಳಿಸಿದೆ. ಆದರೆ, ಘಟನೆ ನಡೆದಿರುವುದು ನಿಜ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಅಂದರೆ ನಿಜವಾದ ದೋಷಿ ಪ್ರಕರಣದಿಂದ ತಪ್ಪಿಸಿಕೊಂಡಿದ್ದಾರೆ. ಪ್ರಕರಣ ನಡೆದ ನಂತರ ತನಿಖಾಧಿಕಾರಿ ಮತ್ತು ವೈದ್ಯರಿಂದ ಕೆಲವೊಂದು ಲೋಪಗಳು ನಡೆದಿವೆ. ಇದರಿಂದ ಮರು ತನಿಖೆ ನಡೆಸಬೇಕು ಎಂಬ ಅಭಿಪ್ರಾಯ ಸಾರ್ವಜನಿಕರಿಂದ ವ್ಯಕ್ತವಾಗಿದೆ. ಹೀಗಾಗಿ, ಸಿಬಿಐ, ಇಲ್ಲವೇ ಸ್ವತಂತ್ರ ತನಿಖಾ ಸಂಸ್ಥೆ ಅಥವಾ ಎಸ್‌ಐಟಿಯಿಂದ ಹೊಸದಾಗಿ ಮರು ತನಿಖೆ ನಡೆಸುವಂತೆ ಸರ್ಕಾರಕ್ಕೆ ಆದೇಶಿಸಬೇಕು ಎಂದು ಕೋರಿದ್ದರು.

ಅದಕ್ಕೆ ಪ್ರತಿಕ್ರಿಯಿಸಿದ ಪೀಠವು ಪ್ರಕರಣದಲ್ಲಿ ಸರ್ಕಾರ, ಮೂಲ ದೂರುದಾರರು ಅಥವಾ ಸಂತ್ರಸ್ತ ಕುಟುಂಬವು ಆರೋಪಿಯನ್ನು ದೋಷಮುಕ್ತಗೊಳಿಸಿದ ವಿಚಾರಣಾಧೀನ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಾನೂನಿನಲ್ಲಿ ಅವಕಾಶವಿದೆ. ಮೇಲ್ಮನವಿಯಲ್ಲಿ ತನಿಖಾ ಲೋಪಗಳನ್ನು ಪರಿಗಣಿಸಬಹುದಾಗಿದೆ ಎಂದು ನುಡಿಯಿತು. ಇದಕ್ಕೆ ಅರುಣ್ ಶ್ಯಾಮ್ ಅವರು ಸಂತ್ರಸ್ತ ಕುಟುಂಬವು ಮೇಲ್ಮನವಿ ಸಲ್ಲಿಸಿಲ್ಲ ಎಂದು ಪೀಠದ ಗಮನಕ್ಕೆ ತಂದರು.

ಆಗ ಪೀಠವು ಹಾಗಾದರೆ ಮೇಲ್ಮನವಿ ಸಲ್ಲಿಸಲು ಸಂತ್ರಸ್ತ ಕುಟುಂಬಕ್ಕೆ ನೀವು ಸಹಾಯ ಮಾಡಿ ಎಂಬುದಾಗಿ ಸಲಹೆ ನೀಡಿತಲ್ಲದೆ, ಸಭೆ–ಸಮಾರಂಭ, ಧರಣಿ ಹಾಗೂ ಸಾರ್ವಜನಿಕರ ಭಾವನೆಗಳಿಂದ ಕಾನೂನು ಚೌಕಟ್ಟು ಮೀರಲು ಸಾಧ್ಯವಿಲ್ಲ. ಅರ್ಜಿದಾರರ ಉದ್ದೇಶ ಒಳ್ಳೆಯದಿದ್ದರೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಕಾನೂನಿನ ಮಿತಿ ಅರಿತು ವ್ಯವಹರಿಸಬೇಕಾಗುತ್ತದೆ ಎಂದು ತಿಳಿಸಿತು.

ಕಾಂಗ್ರೆಸ್‌ನಲ್ಲಿ ನಿಷ್ಠೆ, ಪ್ರಾಮಾಣಿಕತೆಗೆ ಮನ್ನಣೆ ಇದೆ

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ವಿಶ್ವಾಸ



ಮೈಸೂರು,ಸೆ.9(ಎಸ್‌ಬಿಡಿ)–ಕಾಂಗ್ರೆಸ್‌ನಲ್ಲಿ ಎಲ್ಲರೂ ಸಮಾನರು. ನಿಷ್ಠೆ, ಪ್ರಾಮಾಣಿಕತೆಯಿಂದ ಪಕ್ಷ ಸಂಘಟನೆಗೆ ದುಡಿಯುವವರಿಗೆ ಅವಕಾಶಗಳು ಖಂಡಿತವಾಗಿ ದೊರಕುತ್ತವೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಹೇಳಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಎಸ್‌ಸಿ ವಿಭಾಗದ ಕಾರ್ಯಕಾರಿಣಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಕ್ಷ ನಮ್ಮೆಲ್ಲರಿಗೂ ತಾಯಿ ಇದ್ದಂತೆ. ಪಕ್ಷ ಸಂಘಟನೆಗೆ ಪ್ರಾಮಾಣಿಕವಾಗಿ ಶ್ರಮಿಸಬೇಕು. ಈ ನಿಟ್ಟಿನಲ್ಲಿ ಯಾರು ದುಡಿಯುತ್ತಾರೋ ಅವರಿಗೆ ಸಾಕಷ್ಟು ಅವಕಾಶಗಳು ಸಿಗುತ್ತವೆ. ಕಾಂಗ್ರೆಸ್‌ನಲ್ಲಿ ಎಲ್ಲರೂ ಸಮಾನರೆ. ಯಾರು ಯಾವುದೇ ಸ್ಥಾನದಲ್ಲಿದ್ದರೂ ಮೂಲತಃ ಕಾರ್ಯಕರ್ತರಾಗಿರುತ್ತಾರೆ. ಹಾಗಾಗಿ ಯಾವುದೇ ಭೇದಭಾವ ಇಲ್ಲದೆ ಎಲ್ಲರೂ ಒಟ್ಟಾಗಿ ಪಕ್ಷ ಸಂಘಟಿಸಬೇಕು ಎಂದು ಮನವಿ ಮಾಡಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಲಿತ ಸಮುದಾಯದ ಮತಗಳು ನಿರ್ಣಾಯಕವಾಗಿದ್ದವು. ಒಗ್ಗಟ್ಟಿನಿಂದ ಕೋಮುವಾದದ ವಿರುದ್ಧ ಮತಚಲಾಯಿಸಿದ್ದಾರೆ. ಇದಕ್ಕಾಗಿ ಪಕ್ಷದ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಕಾಂಗ್ರೆಸ್ ಸದಾಕಾಲ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಹಕ್ಕು ಮತ್ತು ಅಭಿವೃದ್ಧಿಯ ಪರವಾಗಿದೆ. ಎಲ್ಲಾ ಹಂತದ ಮುಖಂಡರೂ ದಲಿತ ಸಮುದಾಯದವರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಶಕ್ತಿಮೀರಿ ಶ್ರಮಿಸಬೇಕು ಎಂದರು.

ಕಾಂಗ್ರೆಸ್ ನಾಲ್ಕು ದಶಕಗಳ ನಂತರ ಮೈಸೂರಿನಲ್ಲಿ ಶೇ.62ರಷ್ಟು ಮತ ಪಡೆದಿದೆ. ಈ ಸಾಧನೆಗೆ ಎಲ್ಲರ ಪರಿಶ್ರಮ ಸಮಾನವಾಗಿದೆ. ಪಕ್ಷದಲ್ಲಿ ದುಡಿದ ಕಾರ್ಯಕರ್ತರು ಮತ್ತು ಪದಾಧಿಕಾರಿಗಳಿಗೆ ಕಾರ್ಯನಿರ್ವಹಿಸಲು ಮತ್ತಷ್ಟು ಅನುಕೂಲ ಕಲ್ಪಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಶಾಸಕರು ಮತ್ತು ಸಚಿವರೊಂದಿಗೆ ಮುಕ್ತವಾಗಿ ದಲಿತ ಸಮಾಜದ ಜ್ವಲಂತ ಸಮಸ್ಯೆಗಳನ್ನು ಚರ್ಚೆ ಮಾಡಲು ಸೂಕ್ತ ವೇದಿಕೆ ಕಲ್ಪಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ಪಕ್ಷದ ಎಸ್.ಸಿ ವಿಭಾಗವು ತಾಲೂಕು ಮಟ್ಟದ ಸಭೆಗಳನ್ನು ನಡೆಸಿ, ಪದಾಧಿಕಾರಿಗಳನ್ನು ನೇಮಕ ಮಾಡಿ ಜಿಲ್ಲಾ ಸಮಿತಿಗೆ ವರದಿ ನೀಡಬೇಕು. ಜಿಲ್ಲಾ ಕಾಂಗ್ರೆಸ್ ಆಯೋಜನೆ ಮಾಡುವ ಎಲ್ಲಾ ಕಾರ್ಯಕ್ರಮ ಹಾಗೂ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಮುಂಬರುವ ಚುನಾವಣೆಗಳಿಗೆ ಎಲ್ಲರೂ ತಯಾರಿ ಮಾಡಿಕೊಳ್ಳಬೇಕು. ಸರ್ಕಾರ ಬಂದ ಮೇಲೆ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗಿದೆ. ಆದರೆ ಪಕ್ಷ ಸಂಕಷ್ಟದಲ್ಲಿ ಇದ್ದಾಗಲೂ ಸಂಘಟನೆ ಮಾಡಿದ್ದವರಿಗೆ ಮಾನ್ಯತೆ ಹೆಚ್ಚಿರುತ್ತದೆ. ನಿರಂತರ ಪ್ರಕ್ರಿಯೆಯಾದ ಪಕ್ಷ ಸಂಘಟನೆಯನ್ನು ಕಡೆಗಣಿಸಬಾರದು. ಈ ವಿಚಾರದಲ್ಲಿ ರಾಜೀ ಸಲ್ಲದು. ಶಿಸ್ತು ಮತ್ತು ಬದ್ಧತೆ ಇದ್ದರೆ ಮಾತ್ರ ಪಕ್ಷದಲ್ಲಿ ಉನ್ನತ ಸ್ಥಾನಗಳನ್ನು ಪಡೆಯಲು ಸಾಧ್ಯ. ನಮ್ಮ ಸೈದ್ಧಾಂತಿಕ ನಿಲುವುಗಳ ಮತ್ತು ತತ್ವಗಳ ಆಧಾರದಲ್ಲಿ ರಾಜಕೀಯ ಮಾಡಬೇಕೇ ಹೊರತು, ಹಣ–ಹೆಂಡದ ಬಲದಲ್ಲಿ ಅಲ್ಲ ಎಂದು ನುಡಿದರು.

ಕಾರ್ಯಕಾರಿಣಿ ಸಭೆಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಎಸ್‌ಸಿ ವಿಭಾಗದ ಅಧ್ಯಕ್ಷ ಸಿದ್ದರಾಜು, ಬ್ಲಾಕ್ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು. ಜೊತೆಗೆ ಜಿಲ್ಲಾ ಯುವ ಬ್ರಿಗೇಡ್, ಜಿಲ್ಲಾ ಹಿಂದುಳಿದ ವರ್ಗಗಳ ಕಾಂಗ್ರೆಸ್, ಜಿಲ್ಲಾ ಶಿಕ್ಷಕರ ವಿಭಾಗ, ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ನಡೆದವು. ಇದರೊಂದಿಗೆ ಎರಡು ದಿನಗಳ ಸರಣಿ ಸಭೆಗೆ ತೆರೆಬಿದ್ದಿತು.



ಮೈಸೂರಿನ ಸಯ್ಯಾಜಿರಾವ್ ರಸ್ತೆ ಅಕ್ಕಿ ಚೌಕದಲ್ಲಿನ ಶ್ರೀ ಶನೇಶ್ವರಸ್ವಾಮಿ ರಥಕ್ಕೆ ಕಡೇ ಶ್ರಾವಣ ಶನಿವಾರದಂದು ವಿಶೇಷ ಪೂಜೆ–ಪುನಸ್ಕಾರ ನೆರವೇರಿಸಲಾಯಿತು. ಕಳೆದ 43 ವರ್ಷಗಳಿಂದಲೂ ಶ್ರಾವಣ ಮಾಸದಲ್ಲಿ ಭಕ್ತಾದಿಗಳು ವಿಶೇಷ ಪೂಜೆಯೊಂದಿಗೆ ಆರಾಧಿಸಿಕೊಂಡು ಬರುತ್ತಿದ್ದಾರೆ.

ನಾಳೆ ಮೈಸೂರಿಗೆ ಸಿಎಂ ಸಿದ್ದರಾಮಯ್ಯ



ಮೈಸೂರು,ಸೆ.9–ಶ್ರೀ ಆದಿಚುಂಚನ ಗಿರಿ ಮಹಾಸಂಸ್ಥಾನದ ಸಮಾರಂಭದಲ್ಲಿ ಭಾಗಿಯಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸೆ.11 (ಸೋಮವಾರ)ರಂದು ಮೈಸೂರಿಗೆ ಆಗಮಿಸಲಿದ್ದಾರೆ. ಅಂದು ಬೆಳಗ್ಗೆ 10.55ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವ ಮುಖ್ಯಮಂತ್ರಿಗಳು, ಬೆಳಗ್ಗೆ 11.25ಕ್ಕೆ ಹೆಬ್ಬಾಳು ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನದ ಆವರಣದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ನೂತನ ಕಟ್ಟಡ ಹಾಗೂ ಬಿಜಿಎಸ್ ಸಾಂಸ್ಕೃತಿಕ ಭವನ ಮತ್ತು ಉಚಿತ ವಿದ್ಯಾರ್ಥಿನಿಲಯದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 4 ಗಂಟೆಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರಿನ ಮಹದೇಶ್ವರ ಬಡಾವಣೆ ವಾರ್ಡ್ ನಂ.3ರಲ್ಲಿ ಮೈಸೂರು ಮಹಾನಗರ ಪಾಲಿಕೆಯಿಂದ 25 ಲಕ್ಷ ರೂ. ಅನುದಾನದಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಹಿಂಭಾಗದ ರಸ್ತೆಯ ಮರು ಡಾಂಬರೀಕರಣ ಕಾಮಗಾರಿಗೆ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಚಾಲನೆ ನೀಡಿದರು. ಈ ವೇಳೆ ಬಡಾವಣೆಯ ಮುಖಂಡರಾದ ಕೃಷ್ಣೇಗೌಡ, ಗಂಗಾಧರ್, ಬಸವಣ್ಣ, ರಮೇಶ್, ಮಹದೇವಣ್ಣ, ರುಕ್ಮಿಣಿ, ರಾಧಾ ಇನ್ನಿತರರು ಉಪಸ್ಥಿತರಿದ್ದರು.

ಮುರಿದು ಬಿತ್ತು ಭಾರಿ ಗಾತ್ರದ ಗುಲ್‌ಮೊಹರ್ ಮರ

ಧರೆಗುರುಳಿದ ವಿದ್ಯುತ್ ಕಂಬಗಳು; ಕಟ್ಟಡಕ್ಕೆ ಹಾನಿ



ಮೈಸೂರು,ಸೆ.9(ಎಸ್‌ಬಿಡಿ)– ಬೃಹತ್ ಗುಲ್‌ಮೊಹರ್ ಮುರಿದು ಬಿದ್ದು, ಎರಡು ವಿದ್ಯುತ್ ಕಂಬಗಳು ನೆಲಕ್ಕುರುಳಿರುವುದಲ್ಲದೆ, ಕಟ್ಟಡಕ್ಕೆ ಹಾನಿಯಾಗಿರುವ ಘಟನೆ ಮೈಸೂರಿನ ಅಗ್ರಹಾರದಲ್ಲಿ ಶನಿವಾರ ಬೆಳಗ್ಗೆ ಸಂಭವಿಸಿದೆ.

ಇಲ್ಲಿನ ರಾಮಾನುಜ ರಸ್ತೆ, ಜೆಎಸ್‌ಎಸ್ ಮಹಾವಿದ್ಯಾಪೀಠದ ಬಳಿ ಬೆಳಗ್ಗೆ ಸುಮಾರು 6.45ರ ವೇಳೆಯಲ್ಲಿ ಈ ಘಟನೆ ಸಂಭವಿಸಿದ್ದು, ಮರದ ಕಾಂಡ ಮುರಿದು ಮೋರಿಗೆ ಅಡ್ಡಲಾಗಿ ಬಿದ್ದಿದೆ. ಇಲ್ಲಿದ್ದ ವಿದ್ಯುತ್ ತಂತಿಗಳು ತುಂಡಾಗಿ, ಎರಡು ಕಂಬಗಳು ನೆಲಕ್ಕುರುಳಿವೆ. ಮರದ ಕೊಂಬೆಗಳು ಮೋರಿಯ ಮತ್ತೊಂದು ಭಾಗದಲ್ಲಿರುವ ನಿರೂಪ್ ಹಾಗೂ ಅವರ ಚಿಕ್ಕಮ್ಮ ದೇವಿಕಾ ಅವರ ಮನೆಗೆ ಬಡಿದಿದ್ದರಿಂದ ಕಟ್ಟಡದ ಸಜ್ಜಾ, ಗ್ರಿಲ್, ನೀರಿನ ಪೈಪ್ ಇನ್ನಿತರ ವಸ್ತುಗಳಿಗೆ ಹಾನಿಯಾಗಿದೆ.

ತಪ್ಪಿದ ಅನಾಹುತ: ಮರ ಬಿದ್ದು ವಿದ್ಯುತ್ ತಂತಿಗಳು ತುಂಡಾಗಿ ಬಿದ್ದಿವೆ. ಅಲ್ಲದೆ ಮರದ ಕೊಂಬೆಯೊಂದಿಗೆ ವಿದ್ಯುತ್ ತಂತಿಗಳೂ ನಿರೂಪ್ ಮನೆಗೆ ತಾಕಿದ್ದವು. ಅದೃಷ್ಟವಶಾತ್ ತಂತಿ ತುಂಡಾದ ಕೂಡಲೇ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಯಾವುದೇ ಅಪಾಯ ಸಂಭವಿಸಿಲ್ಲ. ಮಕ್ಕಳು ಶಾಲಾ–ಕಾಲೇಜಿಗೆ ಹೊರಡುವ ಸಂದರ್ಭದಲ್ಲಿ ಈ ಘಟನೆಯಾಗಿದ್ದರೂ ದುರಂತ ಸಂಭವಿಸುವ ಸಾಧ್ಯತೆ ಇತ್ತು. ಸದ್ಯ ಹೆಚ್ಚಿನ ಅಪಾಯವಾಗಿಲ್ಲ.

ಶಾಸಕರ ಸೂಚನೆ: ಘಟನೆ ಬಗ್ಗೆ ತಿಳಿಯುತ್ತಿದ್ದಂತೆ ಸ್ಥಳೀಯ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಸ್ಥಳಕ್ಕಾಗಮಿಸಿ, ಸೆಸ್ಕ್ ಅಧಿಕಾರಿಗಳು ಹಾಗೂ ನಗರ ಪಾಲಿಕೆ ಅಭಯ ತಂಡಕ್ಕೆ ಮಾಹಿತಿ ನೀಡಿದರು. ಶಾಸಕ ಟಿ.ಎಸ್.ಶ್ರೀವತ್ಸ ಅವರ ಮನೆಯೂ ಸಮೀಪದಲ್ಲೇ ಇರುವುದರಿಂದ ಅವರಿಗೂ ವಿಚಾರ ತಿಳಿದಿತ್ತು. ಶಾಸಕರೂ ಸ್ಥಳ ಪರಿಶೀಲಿಸಿ, ತ್ವರಿತ ಕ್ರಮಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸೆಸ್ಕ್ ಸಿಬ್ಬಂದಿ ಮುಂಜಾಗ್ರತಾ ಕ್ರಮವಾಗಿ 5 ಟ್ರಾನ್ಸ್‌ಫಾರ್ಮರ್‌ಗಳನ್ನು ಆಫ್ ಮಾಡಿಸಿದರು. ಅತ್ತ ಅಭಯ ತಂಡದ ನೌಕರರು ಮರದ ಕೊಂಬೆಗಳನ್ನು ಕತ್ತರಿಸಿದರಾದರೂ ಮೋರಿಗೆ ಅಡ್ಡಲಾಗಿ ಬಿದ್ದಿದ್ದ ಮರವನ್ನು ತೆರವು ಮಾಡಲು ಸಾಧ್ಯವಾಗಲಿಲ್ಲ. ಸಂಜೆ ವೇಳೆಗೆ ಕ್ರೇನ್ ಸಹಾಯದಿಂದ ಬೃಹತ್ ಮರವನ್ನು ತೆರವು ಮಾಡಲಾಯಿತು. ಕಂಬಗಳು ಹಾಗೂ ವಿದ್ಯುತ್ ತಂತಿಗಳನ್ನು ಅಳವಡಿಸಿ, ಸಂಜೆ 6 ಗಂಟೆ ವೇಳೆಗೆ ವಿದ್ಯುತ್ ಸಂಪರ್ಕ ನೀಡಲಾಯಿತು. ದಿನವಿಡೀ ವಿದ್ಯುತ್ ಸಂಪರ್ಕ ಇಲ್ಲದಿದ್ದರಿಂದ ಕುಡಿಯುವ ನೀರಿಗೂ ತೀವ್ರ ತೊಂದರೆಯಾಗಿತ್ತು.

ತೆರವಿಗೆ ದಿನಾಂಕ ನಿಗದಿಯಾಗಿತ್ತು: ಗುಲ್‌ಮೊಹರ್ ಅತ್ಯಂತ ಗಟ್ಟಿಮುಟ್ಟಾಗಿರುವಂತೆ ಕಂಡರೂ ಕಾಂಡದ ಒಳಭಾಗ ಟೊಳ್ಳಾಗಿರುತ್ತದೆ. ಯಾವ ಸಂದರ್ಭದಲ್ಲಾದರೂ ಮುರಿದು ಬೀಳುವ ಸ್ಥಿತಿಯಲ್ಲಿರುತ್ತವೆ ಇಂದು ಮುರಿದು ಬಿದ್ದ ಮರವನ್ನು ತೆರವುಗೊಳಿಸಲು ಮೂರು ತಿಂಗಳ ಹಿಂದೆಯೇ ಅರಣ್ಯ ಇಲಾಖೆ ಅನುಮತಿ ದೊರೆತಿತ್ತು. ಇದಕ್ಕೆ ನಗರಪಾಲಿಕೆ ವತಿಯಿಂದ ಕರೆಯಲಾಗಿದ್ದ ಟೆಂಡರ್‌ನಲ್ಲಿ ಯಾರೂ ಭಾಗವಹಿಸಲಿಲ್ಲ. ಹಾಗಾಗಿ ಈಗ ಮರ ಬಿದ್ದು ಹಾನಿಯಾಗಿರುವ ಮನೆ ನಿವಾಸಿ ನಿರೂಪ್, ಮರ ತೆರವುಗೊಳಿಸುವಂತೆ ಖಾಸಗಿ ವ್ಯಕ್ತಿಗೆ ಹಣ ನೀಡಿದ್ದರು. ಆದರೆ ಪಕ್ಕದಲ್ಲೇ ಹಾದುಹೋಗಿರುವ ವಿದ್ಯುತ್ ತಂತಿ ತೆರವು ಮಾಡಲು ಸೆಸ್ಕ್ ಅಧಿಕಾರಿಗಳು ವಿಳಂಬ ಮಾಡಿದರು. ಸದ್ಯ ಸೆ.26ಕ್ಕೆ ವಿದ್ಯುತ್ ತಂತಿ ತೆರವು ಮಾಡುವುದಾಗಿ ಸೂಚಿಸಿದ್ದರು. ಇದೀಗ ಆ ಮರವೇ ಮುರಿದು ಬಿದ್ದಿದೆ ಎಂದು ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ತಿಳಿಸಿದರು.

ಮೈಸೂರಲ್ಲಿ 2 ದಿನ ನೀರು ವ್ಯತ್ಯಯ



ಮೈಸೂರು, ಸೆ.9–ಮೈಸೂರು ವಿದ್ಯುತ್ ಸರಬರಾಜು ಕೇಂದ್ರದಲ್ಲಿ ತುರ್ತು ದುರಸ್ತಿ ಕಾರ್ಯ ಹಮ್ಮಿಕೊಂಡಿರುವುದರಿಂದ ಸೆ.12 ಮತ್ತು 13ರಂದು ಮೈಸೂರು ನಗರದ ಕೆಲವೆಡೆ ನೀರು ಸರಬರಾಜು ವ್ಯತ್ಯಯವಾಗಲಿದೆ. ವಾರ್ಡ್ ನಂ.9ರಿಂದ 16, 28ರಿಂದ 39, 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.


ಮಾಜಿ ನಗರಪಾಲಿಕೆ ಸದಸ್ಯರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್‌ಕುಮಾರ್ ರವರಿಗೆ
ಹುಟ್ಟುಹಬ್ಬದ
ಹಾರ್ದಿಕ ಶುಭಾಶಯಗಳು
ದಿನಾಂಕ:- 10-09-2023
ಶುಭಕೋರುವವರು:
ನಾಚನಹಳ್ಳಿಪಾಳ್ಯ ಸ್ನೇಹ ಬಳಗ


ಮಾಜಿ ನಗರಪಾಲಿಕೆ ಸದಸ್ಯರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್‌ಕುಮಾರ್ ರವರಿಗೆ
ಜನ್ಮ ದಿನದ ಶುಭಾಶಯಗಳು
ಶುಭಕೋರುವವರು:
ಯುವಶಕ್ತಿ ಸಂಘ, ಗೌರಿಶಂಕರ ನಗರ


ಮಾಜಿ ನಗರಪಾಲಿಕೆ ಸದಸ್ಯರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್‌ಕುಮಾರ್ ರವರಿಗೆ
ಹುಟ್ಟುಹಬ್ಬದ
ಹಾರ್ದಿಕ ಶುಭಾಶಯಗಳು
ದಿನಾಂಕ:- 10-09-2023
ಶುಭಕೋರುವವರು:
ಶ್ರೀರಾಮಪುರ ಸ್ನೇಹ ಬಳಗ


ಮಾಜಿ ನಗರಪಾಲಿಕೆ ಸದಸ್ಯರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್‌ಕುಮಾರ್ ರವರಿಗೆ
ಹುಟ್ಟುಹಬ್ಬದ
ಹಾರ್ದಿಕ ಶುಭಾಶಯಗಳು
ದಿನಾಂಕ:- 10-09-2023
ಶುಭಕೋರುವವರು:
ಅಶೋಕಪುರಂ ಗೆಳೆಯರ ಬಳಗ

ಮಡಿಕೇರಿಯಲ್ಲಿ ಕೈಲ್‌ಪೊಳ್ದ್ ಸಂಭ್ರಮದಿಂದ ಆಚರಣೆ

ಆಯುಧ ಪೂಜೆ, ತೆಂಗಿನಕಾಯಿಗೆ ಗುಂಡು, ಭಾರದ ಗುಂಡು ಎಸೆತ



ಮಡಿಕೇರಿ,ಸೆ.9– ಫೆಡರೇಶನ್ ಆಫ್ ಕೊಡವ ಸಮಾಜದ ವತಿಯಿಂದ ಕೈಲ್‌ಪೊಳ್ದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಬಾಳುಗೋಡು ಕೊಡವ ಸಮಾಜದಲ್ಲಿ ಕೊಡವ ಸಾಂಪ್ರದಾಯಿಕ ಆಯುಧ ಪೂಜೆಯನ್ನು ಶ್ರದ್ಧಾಭಕ್ತಿಯಿಂದ ಮಾಡಲಾಯಿತು. ನಂತರ ತೆಂಗಿನಕಾಯಿಗೆ ಗುಂಡು ಹೊಡೆಯುವುದು, ಭಾರದ ಗುಂಡು ಎಸೆಯುವುದು ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆದವು.

ಪೊಮ್ಮಕ್ಕಡ ವಿಭಾಗದ ಪದಾಧಿಕಾರಿಗಳು ಹಾಗೂ ಸದಸ್ಯರು ಹಬ್ಬಕ್ಕೆ ವಿಶೇಷ ಮೆರಗನ್ನು ತಂದುಕೊಟ್ಟರು. ಫೆಡರೇಶನ್ ಆಫ್ ಕೊಡವ ಸಮಾಜದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ವಾಟೇರಿರ ಶಂಕರಿ ಪೂವಯ್ಯ, ಖಜಾಂಚಿ ಚಿರಿಯಪಂಡ ಕಾಶಿಯಪ್ಪ, ಪೊಮ್ಮಕ್ಕಡ ವಿಭಾಗದ ಬಲ್ಲಣಮಾಡ ರೀಟಾ ದೇಚಮ್ಮ, ಪ್ರಮುಖರಾದ ಕಂಬೀರಂಡ ಕಿಟ್ಟು ಕಾಳಪ್ಪ, ಕೋಟೇರ ರಘು, ಬೊಳಿಯಂಗಡ ದಾದೂ ಪೂವಯ್ಯ ಮತ್ತಿತರರು ಉಪಸ್ಥಿತರಿದ್ದರು.

ಬಹುಮಾನ ವಿತರಣೆ: 'ಪಾಯಿಂಟ್ 22' ಕೋವಿ ಸ್ಪರ್ಧೆಯಲ್ಲಿ ಕುಟ್ಟಪ್ಪೀರ ಶರತ್ ಪ್ರಥಮ, ಕೇಲೇಟಿರ ಪವಿತ್ ದ್ವಿತೀಯ ಹಾಗೂ ಅಚ್ಚಪಂಡ ಪಟ್ಟು ತೃತೀಯ ಬಹುಮಾನ ಪಡೆದುಕೊಂಡರು. ಬಕೆಟ್‌ಗೆ ಬಾಲು ಎಸೆಯುವ ಸ್ಪರ್ಧೆಯಲ್ಲಿ ಅಪ್ಪುಮಣಿಯಂಡ ಬಜನ್ ಪ್ರಥಮ ಹಾಗೂ ಕಾಳಿಮಾಡ ಮೋಟಯ್ಯ ದ್ವಿತೀಯ ಬಹುಮಾನ ಗಳಿಸಿದರು. ಭಾರದ ಗುಂಡು ಎಸೆತ ಸ್ಪರ್ಧೆಯಲ್ಲಿ ಅಪ್ಪುಮಣಿಯಂಡ ಬಜನ್ ಪ್ರಥಮ, ಕೇಲೇಟಿರ ಪವಿತ ದ್ವಿತೀಯ ಹಾಗೂ ಪುದಿಯೊಕ್ಕಡ ಪೂರ್ಣ ತೃತೀಯ ಬಹುಮಾನ ಪಡೆದರು.

ವಿಶೇಷ ಮಕ್ಕಳಿಗೂ ಉತ್ತಮ ಶಿಕ್ಷಣ ನೀಡಬೇಕು

ವಿರಾಜಪೇಟೆ, ಸೆ.9– ಎಲ್ಲಾ ಮಕ್ಕಳಂತೆ ವಿಶೇಷ ಮಕ್ಕಳಿಗೂ ಉತ್ತಮ ಶಿಕ್ಷಣ ನೀಡಬೇಕು. ಸರಕಾರದಿಂದ ಅವರಿಗೆ ದೊರಕುವಂತಹ ಸೌಲಭ್ಯಗಳನ್ನು ನೀಡಲು ಪ್ರಯತ್ನಿಸುವುದಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಭರವಸೆ ನೀಡಿದರು.

ಕೊಡಗು ಜಿಲ್ಲಾ ಪಂಚಾಯತ್ ಶಾಲಾ ಶಿಕ್ಷಣ ಇಲಾಖೆ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ವಿರಾಜಪೇಟೆ ಸರಕಾರಿ ಮಾದರಿ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 2022–23ನೇ ಸಾಲಿನ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ಆಯ್ಕೆಯಾದ 'ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸಾಧನ–ಸಲಕರಣೆ ವಿತರಣಾ ಕಾರ್ಯಕ್ರಮ' ಹಾಗೂ ನವ ಭಾರತ ಸಾಕ್ಷರತಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಪ್ರತಿಯೊಬ್ಬರು ಪ್ರೀತಿಯಿಂದ ನೋಡಿಕೊಳ್ಳಬೇಕು. ಅವರ ಸೇವೆಯಿಂದ ನಮಗೂ ಪುಣ್ಯ ಬರುವಂತಾಗಲಿ. ಮುಂದಿನ ದಿನದಲ್ಲಿ ಸರ್ಕಾರದ ಎಲ್ಲಾ ಸೌಲಭ್ಯಗಳು ಮಕ್ಕಳಿಗೆ ದೊರಕಲಿದೆ ಎಂದರು.



ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಪ್ರಕಾಶ್ ಮಾತನಾಡಿ, ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸರಕಾರದಿಂದ ಬಂದಿರುವ 7 ವೀಲ್‌ಚೇರ್ ಹಾಗೂ ಎಂಆರ್ ಕಿಟ್, ಮತ್ತು ಬುದ್ಧಿಮಾಂದ್ಯ ಮಕ್ಕಳಿಗೆ ನಡೆದಾಡಲು ಸಹಾಯವಾಗುವಂತ ವಾಕರ್ ನೀಡಲಾಗುತ್ತಿದೆ. ಇದರ ಸೌಲಭ್ಯಗಳನ್ನು ಪೋಷಕರು ಪಡೆದುಕೊಳ್ಳುವಂತೆ ತಿಳಿಸಿದರಲ್ಲದೆ, ನವ ಭಾರತ ಸಾಕ್ಷರತಾ ಕಾರ್ಯಕ್ರಮವು ಈ ಹಿಂದೆ ಸಾಕ್ಷರ ಕಾವೇರಿ ಇದ್ದ ಸಂದರ್ಭ ಶೇ.80ರಷ್ಟು ವಯಸ್ಕರ ಶಿಕ್ಷಣ ಯಶಸ್ವಿಯಾಗಿದ್ದು, ಇನ್ನು ಶೇ.20ರಷ್ಟು ಮಂದಿ ಕಲಿಯಬೇಕಾಗಿದೆ. ಆದ್ದರಿಂದ ಈ ಯೋಜನೆ ಮುಂದುವರಿಯಲಿದೆ ಎಂದರು.

ವೇದಿಕೆಯಲ್ಲಿ ಸಮಗ್ರ ಶಿಕ್ಷಣ ಅಧಿಕಾರಿ ವನಜಾಕ್ಷಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸುರೇಂದ್ರ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಲಾಲ್ ಕುಮಾರ್, ಹಿರಿಯ ಉಪನ್ಯಾಸಕ ಶಿವಾನಂದ, ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಸಂಘದ ಕುಮಾರ, ಪ್ರೌಢಶಾಲಾ ಶಿಕ್ಷಕರ ಸಂಘದ ಅರಿಣ್ ಡಿಸೋಜ ಉಪಸ್ಥಿತರಿದ್ದರು. ಶಿಕ್ಷಣ ಇಲಾಖೆಯ ಬಿಐಇಆರ್‌ಟಿ ಅಜಿತಾ ಕೆ.ಎಸ್. ಸ್ವಾಗತಿಸಿದರೆ, ಕೇಶವಮೂರ್ತಿ ವಂದಿಸಿದರು, ಬಿ.ಆರ್.ಪಿ ವಾಮನ ನಿರೂಪಿಸಿದರು. ಕೊನೆಯಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಮಡಿಕೇರಿಯಲ್ಲಿ ನಾಪತ್ತೆಯಾದ ಬೆಟ್ಟದಪುರದ ಮಹಿಳೆಗಾಗಿ ಶೋಧ

ನಾಪತ್ತೆ ಸುತ್ತ ಹಲವು ಅನುಮಾನದ ಹುತ್ತ, ಸಿಗದ ಸುಳಿವು

ಮಡಿಕೇರಿ,ಸೆ.9– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮದ ವಿವಾಹಿತ ಮಹಿಳೆ ಎಂ. ಸರಸ್ವತಿ(33) ಮಡಿಕೇರಿಗೆ ಬಂದು ನಾಪತ್ತೆಯಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರವೂ ಶೋಧ ಕಾರ್ಯ ನಡೆಸಲಾಯಿತು. ಆದರೆ ಸರಸ್ವತಿ (33) ಅವರ ಮೃತದೇಹ ಮಾತ್ರ ಪತ್ತೆಯಾಗಿಲ್ಲ.

ಎಂ.ಸರಸ್ವತಿ ಅವರ ಚಪ್ಪಲಿ, ಪರ್ಸ್, ಬಟ್ಟೆಗಳು, ದಾಖಲಾತಿಗಳು ಮತ್ತು ಡೆತ್‌ನೋಟ್ ಕೂಡ ಪ್ರವಾಸಿ ತಾಣ ಅಬ್ಬಿ ಜಲಪಾತದ ಬಳಿ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಆಕೆ ನೀರಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತಗೊಂಡಿದೆ.

ಈ ಹಿನ್ನೆಲೆಯಲ್ಲಿ ಅಗ್ನಿಶಾಮಕ ದಳ, ಮಡಿಕೇರಿ ಗ್ರಾಮಾಂತರ ಪೊಲೀಸರು, ಬೆಟ್ಟದಪುರ ಠಾಣಾ ಪೊಲೀಸರು ಮತ್ತು ಎನ್‌ಡಿಆರ್‌ಎಫ್ ಯೋಧರ ತಂಡ ಅಬ್ಬಿ ಜಲಪಾತದಲ್ಲಿ ಜಂಟಿ ಕಾರ್ಯಾಚರಣೆಯ ಮೂಲಕ ಶನಿವಾರವೂ ಶೋಧ ಕಾರ್ಯ ನಡೆಸಿತು. ಸರಸ್ವತಿ ನಾಪತ್ತೆಯಾಗಿರುವ ಕುರಿತು ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಆಕೆಯ ಕುಟುಂಬಸ್ಥರು ಸೆ.5ರಂದೇ ದೂರು ದಾಖಲಿಸಿದ್ದಾರೆ.

ಆತ್ಮಹತ್ಯೆಯ ಸುತ್ತ ಅನುಮಾನ: ಎಂ.ಸರಸ್ವತಿ ಸೆ.5ರ ಮಂಗಳವಾರ ನಾಪತ್ತೆಯಾಗಿರುವುದಾಗಿ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಆದರೆ ಮಂಗಳವಾರದಿಂದ ಶುಕ್ರವಾರದವರೆಗೆ ಆಕೆ ಎಲ್ಲಿದ್ದಳು ಎಂಬ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಪ್ರತಿದಿನ ಬೆಳಗಿನ 7 ಗಂಟೆಯ ವೇಳೆಗೆ ಅಬ್ಬಿಫಾಲ್ಸ್‌ನ ಪ್ರವೇಶ ದ್ವಾರವನ್ನು ಸಾರ್ವಜನಿಕರ ಪ್ರವೇಶಕ್ಕೆ



ತೆರೆಯಲಾಗುತ್ತದೆ. ಮಾತ್ರವಲ್ಲದೇ ಟಿಕೆಟ್ ಕೌಂಟರ್ ಕೂಡ ಅಲ್ಲಿದ್ದು, ಶುಕ್ರವಾರ ಬೆಳಗಿನ 7 ಗಂಟೆಯ ಅವಧಿಯಲ್ಲಿ ಯಾವುದೇ ಟಿಕೆಟ್ ವಿತರಣೆಯಾಗಿಲ್ಲ. ಇನ್ನು ಪ್ರವೇಶ ದ್ವಾರದಲ್ಲಿ ಅಳವಡಿಸಿರುವ ಸಿ.ಸಿ. ಕ್ಯಾಮರಾದ ಡಿವಿಆರ್ ಹೈ ವೋಲ್ಟೇಜ್‌ನಿಂದ ಹಾನಿಗೀಡಾಗಿದ್ದು, ಪ್ರಸ್ತುತ ದುರಸ್ತಿಯಲ್ಲಿದೆ. ಆದರೆ ಅಬ್ಬಿಫಾಲ್ಸ್‌ಗೆ ತೆರಳುವ ರಸ್ತೆ ಬದಿಯಲ್ಲಿರುವ ಸಿ.ಸಿ. ಕ್ಯಾಮರಾದಲ್ಲಿ ಕಾರೊಂದು ಬೆಳಗಿನ 6.30 ಗಂಟೆಗೆ ಅತ್ತ ಕಡೆ ತೆರಳುವ ದೃಶ್ಯ ಸೆರೆಯಾಗಿದೆ.

ಈ ಕುರಿತು ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ಇನ್ನು ಸರಸ್ವತಿ ಅವರ ಚೂಡಿದಾರದ ಟಾಪ್, ಬ್ಯಾಗ್ ಹಾಗೂ ಅದರಲ್ಲಿ ಆಧಾರ್ ಕಾರ್ಡ್, ಶಾಲಾ ದಾಖಲಾತಿ, ಬ್ಯಾಂಕ್ ಪಾಸ್‌ಬುಕ್ ಮತ್ತಿತರ ವಸ್ತುಗಳಿದ್ದ ಬ್ಯಾಗ್ ಮಾತ್ರವೇ ಪ್ರವೇಶ ದ್ವಾರದ ಬಳಿ ದೊರೆಕಿತ್ತು. ಇದನ್ನು ಪ್ರವಾಸಿಗರೊಬ್ಬರು ಟಿಕೆಟ್ ಕೌಂಟರ್ ಸಿಬ್ಬಂದಿಗೆ ನೀಡಿ ಪರಿಶೀಲಿಸುವಂತೆ ಹೇಳಿದ್ದರು. ಈ ಆಧಾರದಲ್ಲಿ ಎಂ.ಸರಸ್ವತಿ ಜಲಪಾತಕ್ಕೆ ಧುಮುಕಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ವಿಶ್ವಕರ್ಮ ಜಯಂತಿ; ಸಿಇಓ ಜೊತೆ ಚರ್ಚೆ

ಮಡಿಕೇರಿ, ಸೆ.9– ವಿಶ್ವಕರ್ಮ ಜಯಂತಿಯನ್ನು ಸೆ.17 ರಂದು ಆಚರಿಸುವ ಸಂಬಂಧ ಜಿ.ಪಂ.ಸಿಇಓ ವರ್ಣಿತ್ ನೇಗಿ ಅವರ ಜೊತೆ ಶುಕ್ರವಾರ ಚರ್ಚೆ ನಡೆಯಿತು.

ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ಸಮಾಜದ ಮುಖಂಡ ಜೊತೆ ಚರ್ಚಿಸಿದ ಬಳಿಕ ಜಿ.ಪಂ ಸಿಇಓ ಅವರ ಕಚೇರಿಯಲ್ಲಿ ಜಿ.ಪಂ.ಸಿಇಓ ವರ್ಣಿತ್ ನೇಗಿ ಅವರ ಸಮ್ಮುಖದಲ್ಲಿ ಸಮಾಲೋಚನೆ ನಡೆಯಿತು.

ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಜಿಲ್ಲಾ ಕೇಂದ್ರದಲ್ಲಿಯೇ ಆಯೋಜಿಸಬೇಕು. ತಾಲೂಕು ಮಟ್ಟದ ಕಾರ್ಯಕ್ರಮವನ್ನು ತಾಲೂಕು ಮಟ್ಟದಲ್ಲಿ ಮಾಡಬಹುದಾಗಿದೆ. ಆ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಅವರ ಜೊತೆ ಚರ್ಚಿಸಿ ತಿಳಿಸಲಾಗುವುದು ಎಂದು ಜಿಪಂ ಸಿಇಓ ಅವರು ಹೇಳಿದರು.

ಎಸ್.ಜೆ.ದೇವದಾಸ್, ಬಿ.ಬಿ.ನಾಗರಾಜು, ಎಸ್.ಬಿ.ಯಶವಂತ್, ಶಿಲ್ಪಿ ಮಂಜುನಾಥ ಆಚಾರ್ಯ ಇತರರಿದ್ದರು.

ವಸತಿ ಶಾಲೆ, ಭರಚುಕ್ಕಿಗೆ ಡಿಸಿ ಭೇಟಿ; ಪರಿಶೀಲನೆ

ಚಾಮರಾಜನಗರ, ಸೆ.9– ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ ಭರಚುಕ್ಕಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಸೇರಿದಂತೆ ಜಿಲ್ಲೆಯ ವಿವಿಧೆಡೆಗೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಯಳಂದೂರು ತಾಲೂಕಿನ ವಡಗೆರೆಯಲ್ಲಿರುವ ಅಗರ–ಮಾಂಬಳ್ಳಿ ಹೋಬಳಿಗೆ ಸೇರಿದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ಅಲ್ಲಿನ ಕೊಠಡಿಗಳು, ಸಭಾಂಗಣ ಇತರೆ ಸ್ಥಳಗಳನ್ನು ವೀಕ್ಷಣೆ ಮಾಡಿ ವಿದ್ಯಾರ್ಥಿನಿಯರಿಗೆ ವಸತಿ ಶಾಲೆಯಲ್ಲಿ ಕಲ್ಪಿಸಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು.

ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಗುಣಮಟ್ಟದ ಊಟ–ಉಪಾಹಾರ ನೀಡಲಾಗುತ್ತಿದೆಯೇ, ಕೊಠಡಿ, ಶೌಚಾಲಯ ಮತ್ತಿತರ ಕಡೆ ಶುಚಿತ್ವ ಕಾಪಾಡಿಕೊಳ್ಳಲಾಗುತ್ತಿದೆಯೇ? ಶೈಕ್ಷಣಿಕ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆಯೇ ಎಂದು ಪ್ರಶ್ನಿಸಿ ತಿಳಿದುಕೊಂಡರು.

ವಿದ್ಯಾರ್ಥಿನಿಯರು ಶ್ರಮಪಟ್ಟು ಓದಬೇಕು. ಹೆಚ್ಚು ಅಂಕಗಳಿಸಿ ನಿಮಗೆ ಆಸಕ್ತಿ ಇರುವ ವಿಷಯಗಳನ್ನು ಕಾಲೇಜು ಹಂತದಲ್ಲಿ ಆಯ್ಕೆ ಮಾಡಿಕೊಳ್ಳಿ, ಸ್ಪರ್ಧಾತ್ಮಕ ಪರೀಕ್ಷೆ ಬರೆದು ಉನ್ನತ ಹುದ್ದೆಗಳನ್ನು ಅಲಂಕರಿಸಿ. ವಿದ್ಯಾರ್ಥಿ ಜೀವನ ಸಾರ್ಥಕಪಡಿಸಿಕೊಂಡರೆ ಮುಂದಿನ ಭವಿಷ್ಯ ಉತ್ತಮವಾಗಲಿದೆ ಎಂದು ಸಲಹೆ ನೀಡಿದರು.

ಬಳಿಕ ಯಳಂದೂರು ತಾಲೂಕಿನ ಆಲ್ಕೆರೆ ಅಗ್ರಹಾರ ಗ್ರಾಮಕ್ಕೆ ಭೇಟಿ ನೀಡಿ ಅಂಧತ್ವ ಪ್ರಮಾಣ ತಗ್ಗಿಸಲು ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿ ನಡೆಸಲಾಗುತ್ತಿರುವ ನೇತ್ರ ತಪಾಸಣೆ ಆಂದೋಲನ ಕಾರ್ಯ ವೀಕ್ಷಿಸಿದರು.

ಆಶಾ ಕಾರ್ಯಕರ್ತೆಯರು, ಆರೋಗ್ಯ ಸಿಬ್ಬಂದಿಯವರೊಂದಿಗೆ ಗ್ರಾಮದಲ್ಲಿ ಸಂಚರಿಸಿದ ಜಿಲ್ಲಾಧಿಕಾರಿಗಳು, ಕಣ್ಣಿನ ಆರೋಗ್ಯ ಸಂರಕ್ಷಣೆಗೆ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು. ಕಣ್ಣಿನ ತೊಂದರೆಗಳನ್ನು ಪರಿಹರಿಸಲು ವಿಶೇಷವಾಗಿ ನಡೆಸುತ್ತಿರುವ ಆಶಾ ಕಿರಣ ಕಾರ್ಯಕ್ರಮ ಸದುಪಯೋಗ ಮಾಡಿಕೊಳ್ಳುವಂತೆ ತಿಳಿಸಿದರು. ಇದೇ ವೇಳೆ ಗ್ರಾಮದ ಶಾಲಾ ಮಕ್ಕಳೊಂದಿಗೆ ಜಿಲ್ಲಾಧಿಕಾರಿ ಆತ್ಮೀಯವಾಗಿ ಮಾತನಾಡಿದರು.



ನಂತರ ಪ್ರಸಿದ್ಧ ಪ್ರವಾಸಿ ಸ್ಥಳ ಭರಚುಕ್ಕಿ ಹಾಗೂ ಹಿನ್ನೀರಿನ ಪ್ರದೇಶಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಯವರು ಅಲ್ಲಿ ಪ್ರವಾಸಿಗರಿಗೆ ಒದಗಿಸಿರುವ ಸೌಲಭ್ಯಗಳನ್ನು ಪರಿಶೀಲನೆ ನಡೆಸಿದರು. ಪ್ರವಾಸಿಗರು ವಹಿಸಬೇಕಿರುವ ಮುನ್ನೆಚ್ಚರಿಕೆ, ಸುರಕ್ಷತಾ ಕ್ರಮಗಳು ಪಾಲನೆ ಮಾಡುವಂತೆ ಮನವರಿಕೆ ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಮಹೇಶ್, ತಹಸೀಲ್ದಾರ್ ಮಂಜುಳಾ ಸೇರಿದಂತೆ ಇತರರು ಇದ್ದರು.

ಕಬ್ಬು ತುಂಬಿದ್ದ ಲಾರಿಗೆ ವಿದ್ಯುತ್ ಸ್ಪರ್ಶ: ಇಬ್ಬರ ಸಾವು

ಹನೂರು, ಸೆ.9– ಕಬ್ಬು ತುಂಬಿಕೊಂಡು ಹೋಗುತ್ತಿದ್ದ ಲಾರಿಗೆ ವಿದ್ಯುತ್ ತಂತಿ ತಗುಲಿದ ಪರಿಣಾಮ ಇಬ್ಬರು ಸಾವನ್ನಪ್ಪಿರುವ ಘಟನೆ ಕೊಳ್ಳೇಗಾಲ ತಾಲೂಕಿನ ಗುಂಡಾಲ್ ಜಲಾಶಯ ರಸ್ತೆಯ ದುರ್ಗಮ್ಮನ ದೇವಸ್ಥಾನದ ಬಳಿ ನಡೆದಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಅಂಗರಪುರ ಗ್ರಾಮದ ನಿವಾಸಿಗಳಾದ ಲಾರಿ ಚಾಲಕ ಚಿನ್ನು ಮತ್ತು ಮಾಲೀಕ ಪ್ರಕಾಶ್ ಸಾವನ್ನಪ್ಪಿದವರು.

ಗುಂಡಾಲ್ ಜಲಾಶಯ ಸಮೀಪದ ಬೆಟ್ಟಪ್ಪನ ಸಿದ್ದಪ್ಪ ಎಂಬುವರ ಜಮೀನಿನಲ್ಲಿ ಲಾರಿಗೆ ಕಬ್ಬು ತುಂಬಿಕೊಂಡು ಬರುವಾಗ ದುರ್ಗಮ್ಮನ ದೇವಸ್ಥಾನ ಹತ್ತಿರ ರಸ್ತೆ ಬದಿ ಹಾದು ಹೋಗಿರುವ ಹೈ ಪವರ್ ವಿದ್ಯುತ್ ತಂತಿ ಲಾರಿಗೆ ತಗುಲಿದೆ. ಈ ವೇಳೆ ಲಾರಿ ಚಾಲಕ ಚಿನ್ನು ಮತ್ತು ಮಾಲೀಕರಾದ ಪ್ರಾಶ್ ಲಾರಿಯಿಂದ ಇಳಿದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ, ವಿದ್ಯುತ್ ಸ್ಪರ್ಶಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಈ ವರ್ಷದ ಅಂತ್ಯಕ್ಕೆ ಕುಡಿಯುವ ನೀರಿನ

ಎಕ್ಸ್‌ಪ್ರೆಸ್ ಪೈಪ್‌ಲೈನ್ ಕಾಮಗಾರಿ ಪೂರ್ಣ

ಗುಂಡ್ಲುಪೇಟೆ, ಸೆ.9– ಪಟ್ಟಣದಲ್ಲಿ ಕುಡಿಯುವ ನೀರಿನ ಎಕ್ಸ್‌ಪ್ರೆಸ್ ಪೈಪ್‌ಲೈನ್ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಈ ವರ್ಷದ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ಪಟ್ಟಣದಲ್ಲಿ ನಡೆದ ಬ್ರಾಹ್ಮಣ ಮಹಾಸಭಾ ವಾರ್ಷಿಕ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣರಾದ ಮಕ್ಕಳಿಗೆ ಪ್ರೋತ್ಸಾಹ ಧನ ವಿತರಿಸಿ ಹಾಗೂ ಹಿರಿಯ ನಾಗರಿಕರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಯಾವುದೇ ಸಂಘ ಸಂಸ್ಥೆಗಳು ಮುಂಚೂಣಿಗೆ ಬರಲು ಸಂಘಟನೆ ಅಗತ್ಯ ಇದರಿಂದ ಸಮುದಾಯದ ಶಕ್ತಿ ಪ್ರದರ್ಶನ ಹಾಗೂ ಸರ್ಕಾರದ ಮೂಲಕ ಸವಲತ್ತುಗಳನ್ನು ಪಡೆಯಲು ಸಹಕಾರಿಯಾಗಲಿದೆ ಎಂದರು.

ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಈಗಾಗಲೇ ಮಾಡಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಇಲಾಖೆ ಅಧಿಕಾರಿಗಳ ಮೂಲಕ ಪಟ್ಟಿ ಮಾಡುತ್ತಿದ್ದೇನೆ. ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಪಟ್ಟಣವನ್ನು ಮಾದರಿಯನ್ನಾಗಿಸುವ ಗುರಿ ಇಟ್ಟುಕೊಂಡು ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ಮಹಾಸಭಾ ತಾಲೂಕು ಅಧ್ಯಕ್ಷ ಗೋಪಾಲಕೃಷ್ಣಭಟ್, ಶ್ರೀರಾಘವೇಂದ್ರಸ್ವಾಮಿ ಮೃತ್ತಿಕಾ ಬೃಂದಾವನ ಟ್ರಸ್ಟ್ ಅಧ್ಯಕ್ಷೆ ರಾಜೇಶ್ವರಿ ಚಂದ್ರಶೇಖರ್,' ಪದಾಧಿಕಾರಿಗಳಿದ್ದರು.



ರಮೇಶ್ ಅನುಮಾನಾಸ್ಪದ ಸಾವು ಪ್ರಕರಣ

ಸಮಗ್ರ ತನಿಖೆಗೆ ದಲಿತ ಮುಖಂಡರ ಒತ್ತಾಯ

ಈ ಸಂಬಂಧ ಸಿಎಂ, ಗೃಹ ಸಚಿವರ ಭೇಟಿಗೆ ಸಭೆಯಲ್ಲಿ ತೀರ್ಮಾನ

ಚಾಮರಾಜನಗರ, ಸೆ.9– ನಗರದ ಗುಂಡ್ಲುಪೇಟೆ ರಸ್ತೆಯ ಹುದಾ ಪಬ್ಲಿಕ್ ಶಾಲೆ ಬಳಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ತೋಟಗಾರಿಕೆ ಇಲಾಖೆ ನೌಕರ ದಡದಹಳ್ಳಿ ರಮೇಶ್ ಸಾವಿನ ಪ್ರಕರಣವನ್ನು ಸಮಗ್ರ ತನಿಖೆ ನಡೆಸಬೇಕು ಎಂದು ಜಿಲ್ಲೆಯ ದಲಿತ ಮುಖಂಡರು ಒಕ್ಕೊರಲಿನಿಂದ ಒತ್ತಾಯಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶನಿವಾರ ನಡೆದ ದಲಿತ ಮುಖಂಡರ ಸಭೆಯಲ್ಲಿ ರಮೇಶ್ ಸಾವಿನ ಬಗ್ಗೆ ಚರ್ಚಿಸಲಾಯಿತು. ಬಳಿಕ ಈ ಬಗ್ಗೆ ಸಮಗ್ರ ತನಿಖೆ ನಡೆಸಲು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯನ್ನು ಒತ್ತಾಯಿಸಿದರು. ಪ್ರಕರಣ ಸಂಬಂಧ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿ, ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹಸಚಿವ ಜಿ. ಪರಮೇಶ್ವರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು. ಆ ಮೂಲಕ ಮೃತ ರಮೇಶ್ ಕುಟುಂಬಕ್ಕೆ ನ್ಯಾಯ ದೊರಕಿಸುವ ಹಾಗೂ ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆ ಮಾಡಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.



ಮೃತ ರಮೇಶ್ ಮರ್ಮಾಂಗಕ್ಕೆ ಮಾತ್ರ ಪೆಟ್ಟು ಬಿದ್ದಿರುವುದರಿಂದ ಇದು ಅಪಘಾತವಲ್ಲ ಇದೊಂದು ಕೊಲೆ. ಪೂರ್ವ ಯೋಜಿತವಾಗಿ ಅಪಘಾತ ಎಂದು ಬಿಂಬಿಸಲಾಗಿದೆ. ಇದರ ಹಿಂದೆ ಕಾಣದ ಕೈಗಳು ಕೆಲಸ ಮಾಡಿವೆ. ಇದನ್ನು ದಲಿತ ಮುಖಂಡರು ಗಂಭೀರವಾಗಿ ಪರಿಗಣಿಸಬೇಕು ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

ದಲಿತ ಮುಖಂಡ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ದಡದಹಳ್ಳಿ ರಮೇಶ್ ಸಾವು ಅನುಮಾನಾಸ್ಪದವಾಗಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿದರೆ ಸತ್ಯಾಂಶ ಹೊರಬರಲಿದೆ. ಇದಕ್ಕಾಗಿ ಹೋರಾಟ ಅನಿವಾರ್ಯ ಎಂದರು.

ಬಿಎಸ್‌ಪಿ ಜಿಲ್ಲಾಧ್ಯಕ್ಷ ಎಸ್.ನಾಗಯ್ಯ ಮಾತನಾಡಿ, ಮೃತ ರಮೇಶ್ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಉನ್ನತ ಮಟ್ಟದ ತನಿಖೆ ಅವಶ್ಯಕವಾಗಿರುವುದರಿಂದ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸೋಣ ಎಂದರು. ಸಭೆಯಲ್ಲಿ ಡಿಎಸ್‌ಎಸ್ ಮುಖಂಡ ರಾಜಣ್ಣ, ಶಂಕರ್, ಬಸವಣ್ಣ, ನಗರಸಭೆ ಮಾಜಿ ಸದಸ್ಯ ಬಸವರಾಜು, ಮುಖಂಡರಾದ ರವಿ, ವಾಸು, ಎಸ್.ಪಿ. ಮಹೇಶ್, ಜಯಶಂಕರ್, ಎಂ.ಶಿವಮೂರ್ತಿ, ಚಂದ್ರಕಾಂತ, ಪರಮೇಶ್ವರ, ನಾಗೇಂದ್ರ ಇತರರಿದ್ದರು.

ಚಿನ್ನಾಭರಣ ಪಾಲಿಶ್ ನೆಪದಲ್ಲಿ ವಂಚನೆ

2 ಪ್ರತ್ಯೇಕ ಪ್ರಕರಣಗಳಲ್ಲಿ 13 ಗ್ರಾಂ ಚಿನ್ನ ಕಳವು

ಕೆ.ಆರ್.ಪೇಟೆ, ಸೆ.9– ಚಿನ್ನಾಭರಣ ಪಾಲಿಶ್ ಮಾಡುವ ನೆಪದಲ್ಲಿ ದುಷ್ಕರ್ಮಿಗಳು ಚಿನ್ನ ಕರಗಿಸಿ ವಂಚಿಸಿರುವ 2 ಪ್ರತ್ಯೇಕ ಘಟನೆ ತಾಲೂಕಿನಿಂದ ವರದಿಯಾಗಿದೆ.

ತಾಲೂಕಿನ ಬಲ್ಲೇನಹಳ್ಳಿ ಗ್ರಾಮದ ಗಣೇಶ್ ಅವರ ಪತ್ನಿ ರಾಧಾ ಅವರಿಗೆ ಸೇರಿದ 33 ಗ್ರಾಂ ತೂಕದ ಚಿನ್ನದ ಸರವನ್ನು ಪಾಲಿಶ್ ಮಾಡುವ ನೆಪದಲ್ಲಿ, ಸುಮಾರು 5 ಗ್ರಾಂ ನಷ್ಟು ಚಿನ್ನ ಕರಗಿಸಿಕೊಂಡು ಇಬ್ಬರು ವಂಚಕರು ಪರಾರಿಯಾಗಿದ್ದಾರೆ. ಕಳೆದುಕೊಂಡ ಚಿನ್ನದ ಬೆಲೆ 30 ಸಾವಿರ ಎಂದು ಅಂದಾಜಿಸಲಾಗಿದೆ.

ಈ ಘಟನೆ ನಡೆದು 4 ದಿನಗಳ ನಂತರ ಅದೇ ಬಲ್ಲೇನಹಳ್ಳಿ ಗ್ರಾಮಕ್ಕೆ ಬಂದ ವಂಚಕರು, ನಿಂಗರಾಜು ಎಂಬುವರ ಪತ್ನಿಗೆ ಸೇರಿದ ಚಿನ್ನದ ಸರವನ್ನು ಅದೇ ರೀತಿ ಪಾಲಿಶ್ ಮಾಡುವುದಾಗಿ ಹೇಳಿ, 40 ಗ್ರಾಂ ಚಿನ್ನದ ಸರದಿಂದ 8 ಗ್ರಾಂ ಚಿನ್ನವನ್ನು ಕರಗಿಸಿಕೊಂಡು ವಾಪಸ್ ನೀಡಲು ಮುಂದಾದರು. ಈ ಸಮಯದಲ್ಲಿ ಅನುಮಾನಗೊಂಡ ನಿಂಗರಾಜು ಅವರ ಪತ್ನಿ, ಚಿನ್ನದ ಸರವನ್ನು ಕೈಯಲ್ಲಿಡಿದು ನೋಡಿದಾಗ, ಸರದ ತೂಕ ಕಡಿಮೆಯಾಗಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಕೂಡಲೇ ಆರೋಪಿ ಹಿಡಿದು ಮನೆಯಲ್ಲಿ ಕೂಡಿ ಹಾಕಿದರು.

ನಂತರ ಬೂಕನಕೆರೆ ಗ್ರಾಮದ ಚಿನ್ನದ ಅಂಗಡಿಗೆ ತೆರಳಿ ಚಿನ್ನದ ಸರವನ್ನು ತೂಕ ಹಾಕಿಸಿದಾಗ 8 ಗ್ರಾಂ ಚಿನ್ನ ಕಡಿಮೆಯಾಗಿರುವುದು ಕಂಡುಬಂತು. ತಕ್ಷಣ ವಾಪಸ್ ಬಂದು ಸಾರ್ವಜನಿಕರಿಗೆ ತಿಳಿಸಿ ಆರೋಪಿಗೆ ಧರ್ಮದೇಟು ನೀಡಿ, ಆರೋಪಿಯಿಂದ ಫೋನ್ ಪೇ ಮೂಲಕ 40 ಸಾವಿರ ಹಣ ವಸೂಲಿ ಮಾಡಿದ್ದರು. ಆದರೆ ಹಣವನ್ನು ಪಾವತಿ ಮಾಡಿರುವ ಅಪರಿಚಿತ ಆರೋಪಿ ಈಗ ಗ್ರಾಮದಿಂದ ಪರಾರಿಯಾಗಿದ್ದಾನೆ.

ಆದರೆ ಇದಕ್ಕೂ ಮೊದಲೇ ವಂಚನೆಗೆ ಒಳಗಾದ ರಾಧಾ ಗಣೇಶ್ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮಹಜರು ನಡೆಸಿ, ಆರೋಪಿಯ ಚಹರೆಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಅಲ್ಲದೇ ಶೀಘ್ರ ಆರೋಪಿ ಬಂಧಿಸಿ ಕದ್ದಿರುವ ಚಿನ್ನ ವಾಪಸ್ ಕೊಡಿಸುವ ಭರವಸೆ ನೀಡಿದ್ದಾರೆ.

ಚಿನ್ನ ಪಾಲಿಶ್ ಮಾಡುವುದಾಗಿ ಬರುವ ಅಪರಿಚಿತರ ಬಗ್ಗೆ ಗ್ರಾಮಸ್ಥರು ಎಚ್ಚರಿಕೆಯಿಂದ ಇರಬೇಕೆಂದು ಕೆಆರ್.ಪೇಟೆ ಗ್ರಾಮಾಂತರ ಠಾಣೆ ಸಬ್ ಇನ್ಸ್‌ಪೆಕ್ಟರ್ ಸುಬ್ಬಯ್ಯ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.



ಪಾಂಡವಪುರ ಗೃಹ ನಿರ್ಮಾಣ ಸಹಕಾರ ಸಂಘದ ಸಾಮಾನ್ಯ ಸಭೆ

ಸಂಘದಲ್ಲಿ ನಡೆದಿರುವ ಭ್ರಷ್ಟಾಚಾರ ತನಿಖೆಗೆ ಸದಸ್ಯರ ಒತ್ತಾಯ



ಪಾಂಡವಪುರ, ಸೆ.9– ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಶನಿವಾರ ಪಾಂಡವಪುರ ತಾಲೂಕು ಗೃಹ ನಿರ್ಮಾಣ ಸಹಕಾರ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆ ನಡೆಯಿತು.

ಸಂಘದ ಅಧ್ಯಕ್ಷ ಜಿ.ಇ.ರವಿಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಘದಲ್ಲಿ ನಡೆದಿರುವ ಹಲವು ಭ್ರಷ್ಟಾಚಾರ ತನಿಖೆ ನಡೆಸಬೇಕು. ಜೊತೆಗೆ ಚಂದ್ರೆ ಬಡಾವಣೆ ಬಳಿ ಭೂಮಿ ಖರೀದಿಗೆ ನೀಡಿರುವ ಹಣ ಇತ್ಯರ್ಥಗೊಳಿಸಿ ಭೂಮಿ ಖರೀದಿಸುವಂತೆ ಷೇರುದಾರರು ಆಡಳಿತ ಮಂಡಳಿಗೆ ಒತ್ತಾಯಿಸಿದರು.

ಚಂದ್ರೆ ಗ್ರಾಮದ ಬಳಿ ಭೂಮಿ ಖರೀದಿಗಾಗಿ 1.30 ಕೋಟಿ ರೂ. ನೀಡಿ 11 ವರ್ಷ ಕಳೆದಿದೆ. ಆದರೆ ಇನ್ನೂ ಪ್ರಕರಣ ಇತ್ಯರ್ಥಗೊಂಡಿಲ್ಲ. ಹೀಗಾದರೆ ಸಹಕಾರ ಸಂಘದ ಅಭಿವೃದ್ಧಿ ಹೇಗೆಂದು ಅಧ್ಯಕ್ಷರನ್ನು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷ ರವಿಕುಮಾರ್, ಈಗಾಗಲೇ ಈ ಪ್ರಕರಣ ಕೋರ್ಟ್‌ನಲ್ಲಿ ಇತ್ಯರ್ಥಗೊಂಡಿದೆ. ಹಣ ಪಡೆದಿರುವ ರೈತನು ಸಹ ಕೋರ್ಟ್‌ನಲ್ಲಿ ಒಪ್ಪಿಕೊಂಡಿದ್ದಾರೆ. ಚಂದ್ರೆ ಗ್ರಾಮದ ಬಳಿ ನಿವೇಶನಕ್ಕೆ ಬೇಡಿಕೆ ಕಡಿಮೆ ಇರುವುದರಿಂದ ಇದೀಗ ನಾನು ನೀಡಿರುವ 1.30 ಕೋಟಿ ಹಣಕ್ಕೆ ಮಾತ್ರ ಭೂಮಿ ಖರೀದಿಸಿ ನಿವೇಶನ ಮಾರ್ಪಾಡು ಮಾಡಲಾಗುವುದು ಎಂದರು.

ಕೆಲ ಸದಸ್ಯರು 1.30 ಕೋಟಿ ಹಣ ಕೊಟ್ಟು 11 ವರ್ಷವಾಗಿದ್ದು, ಅದಕ್ಕೆ ಇಲ್ಲಿಯವರೆಗೆ ಬಡ್ಡಿ ಸೇರಿ ಪಡೆಯಿರಿ ಎಂದು ಸದಸ್ಯರಾದ ಕೆ. ಕುಬೇರ್, ಗಂಗಾಧರ್ ಸೇರಿದಂತೆ ಹಲವು ಸದಸ್ಯರು ಆಗ್ರಹಿಸಿದರು.

ಹರಳಹಳ್ಳಿ ಬಳಿ ನೀಡಲಾಗಿರುವ ಬಡಾವಣೆಗೆ ಯಾವುದೇ ಮೂಲ ಸೌಕರ್ಯ ಒದಗಿಸಿಕೊಟ್ಟಿಲ್ಲ. ಕುಡಿಯುವ ನೀರು, ರಸ್ತೆ, ವಿದ್ಯುತ್, ಚರಂಡಿ ಸೌಕರ್ಯಗಳಿಲ್ಲ ಮೊದಲು ಬಡಾವಣೆಗೆ ಮೂಲಸೌಕರ್ಯ ಒದಗಿಸಿ ಎಂದು ಸದಸ್ಯ ಶ್ರೀನಿವಾಸ್ ಒತ್ತಾಯಿಸಿದರು. ಹರಳಹಳ್ಳಿ ಬಡಾವಣೆಗೆ ಮೂಲಸೌಕರ್ಯ ಒದಗಿಸುವಂತೆ ಕ್ಯಾತನಹಳ್ಳಿ ಪಂಚಾಯಿತಿಗೆ ಪತ್ರ ಬರೆಯಲಾಗಿದೆ, ಶೀಘ್ರ ಮೂಲಸೌಕರ್ಯ ಒದಗಿಸಿಕೊಡಲಾಗುವುದು ಎಂದು ಅಧ್ಯಕ್ಷ ರವಿಕುಮಾರ್ ಭರವಸೆ ನೀಡಿದರು.

ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಿರುವ ಅಕ್ರಮ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸುವಂತೆ ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಈವರೆಗೂ ಯಾಕೆ ತನಿಖೆಗೆ ನೀಡಿಲ್ಲ ಎಂದು ನಿವೃತ್ತ ಶಿಕ್ಷಕ ಧರ್ಮೇಗೌಡ ಆಡಳಿತ ಮಂಡಳಿ ಸದಸ್ಯರನ್ನು ಪ್ರಶ್ನಿಸಿದರು. ಸಂಘದ ಅಕ್ರಮ ತನಿಖೆ ನಡೆಸಿ ಎಂದು ಆಡಳಿತ ಮಂಡಳಿ ಒತ್ತಾಯಿಸಲು ಸಾಧ್ಯವಿಲ್ಲ. ಷೇರುದಾರರೇ ತನಿಖೆಗೆ ನೀಡಿ ಎಂದು ಆಡಳಿತ ಮಂಡಳಿಯವರು ಸಭೆಗೆ ತಿಳಿಸಿದರು.

ಸಂಘದಲ್ಲಿ ಸಾಲ ಪಡೆದು ಸುಸ್ತಿಯಾಗಿರುವವರ ಬಳಿ ಹಣ ವಸೂಲಿ ಮಾಡಲಾಗಿದೆಯೇ ಎಂದು ಸದಸ್ಯರು ಪ್ರಶ್ನಿಸಿದರು. ಉತ್ತರಿಸಿದ ಆಡಳಿತ ಮಂಡಳಿ 16.60 ಲಕ್ಷ ಸುಸ್ತಿ ಸಾಲ ಇದೆ. 186 ಮಂದಿ ಸಾಲ ಪಡೆದು ಸುಸ್ತಿ ಹೊಂದಿದ್ದಾರೆ. ಈ ಪೈಕಿ 50 ಮಂದಿ ಮೇಲೆ ಕೇಸು ದಾಖಲಿಸಲಾಗಿದೆ. ಹಂತ ಹಂತವಾಗಿ ಷೇರುದಾರರ ಮನವೊಲಿಸಿ ಸಾಲ ವಸೂಲಿ ಮಾಡಲಾಗುತ್ತಿದೆ ಎಂದರು. ಸಭೆಯಲ್ಲಿ ಉಪಾಧ್ಯಕ್ಷ ಸಿ.ಆರ್. ರಮೇಶ್, ಬಿ.ಎಸ್.ಜಯರಾಮು, ಮುರಳೀಧರ್, ಬಿ.ಟಿ.ಶಿವಣ್ಣ, ಪಿ.ಚಲುವರಾಜು, ಡಿ.ಹುಚ್ಚೇಗೌಡ, ಕಣ್ಣ, ಎನ್.ಭಾಸ್ಕರ್, ಆದರ್ಶರಾಮು, ಎಸ್.ಟಿ. ಕೃಷ್ಣಯ್ಯ, ಎಚ್.ಆರ್.ಜ್ಯೋತಿ, ಎಚ್.ಎಲ್.ರೋಜಾ, ರೂಪಾವತಿ ಬಿ.ಕೆ., ಪ್ರಭಾರ ಕಾರ್ಯದರ್ಶಿ ಹೆಚ್.ಎಸ್.ಪ್ರಕಾಶ್ ಹಾಜರಿದ್ದರು.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಹೊತ್ತಿ ಉರಿದ ಕಾರು

ಮಂಡ್ಯ, ಸೆ.9– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಚಲಿಸುತ್ತಿದ್ದ ಕಾರು ಹೊತ್ತಿ ಉರಿದಿರುವ ಘಟನೆ ಶ್ರೀರಂಗಪಟ್ಟಣ ತಾಲೂಕಿನ ಗೌಡಹಳ್ಳಿ ಗೇಟ್ ಬಳಿ ನಡೆದಿದೆ.

ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿದ್ದ ಕಾರು ಸಂಪೂರ್ಣ ಭಸ್ಮವಾಗಿದ್ದು, ರಾಜಸ್ಥಾನ ಮೂಲದ ವಿಕ್ಕಿ ಮತ್ತು ಸ್ನೇಹಿತರು ತಮಿಳುನಾಡಿನಲ್ಲಿ ಸ್ನೇಹಿತನ ಕಾರು ಪಡೆದು ವ್ಯಾಪಾರ ಹಿನ್ನೆಲೆಯಲ್ಲಿ ಮೈಸೂರಿಗೆ ತೆರಳುತ್ತಿದ್ದರು. ಈ ವೇಳೆ ಗಣಂಗೂರು ಬಳಿ ಹೊಗೆ ಕಾಣಿಸಿಕೊಂಡಿದ್ದು, ಗೌಡಹಳ್ಳಿ ಗೇಟ್ ಬಳಿ ಬೆಂಕಿ ಹೊತ್ತಿಕೊಂಡಿದೆ. ತಕ್ಷಣ ಕಾರಿನಲ್ಲಿದ್ದ ಮೂವರು ಕೆಳಗೆ ಇಳಿದಿದ್ದು, ಕಾರು ಸಂಪೂರ್ಣ ಸುಟ್ಟುಹೋಗಿದೆ.



ಕಾರಿನಲ್ಲಿದ್ದವರು ಅಪಾಯದಿಂದ ಪಾರಾಗಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಿದರು.

ಈ ಸಂಬಂಧ ಶ್ರೀರಂಗಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೈಸೂರು ಮಿತ್ರ

ಈ ಬಾರಿ 2 ಲಕ್ಷ ಲೀಡ್‌ನಲ್ಲಿ ಗೆಲ್ತೇನೆ...!




ಮೈಸೂರು, ಸೆ.9(ಬಿಎಲ್‌ಯು)– ಮುಂದಿನ ಲೋಕಸಭಾ ಚುನಾವಣೆಯಲ್ಲಿ ನಾನಂತೂ 2 ಲಕ್ಷ ಲೀಡ್‌ನಲ್ಲಿ ಗೆಲ್ತೇನೆ. ಇದರಲ್ಲಿ ಯಾವುದೇ ಅನುಮಾನ ಬೇಡ ಎಂದು ಸಂಸದ ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಳೆದ ಹತ್ತು ವರ್ಷದ ಅವಧಿಯಲ್ಲಿ ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳೇ ನನಗೆ ಶ್ರೀರಕ್ಷೆ. ಹಾಗಾಗಿ ಎರಡು ಲಕ್ಷ ಲೀಡ್‌ನಲ್ಲಿ ಗೆಲುವು ಸಾಧಿಸುತ್ತೇನೆ ಎಂದು ಹೇಳಿದರು. ಕರ್ನಾಟಕದ ಜನರು ಕಳೆದ 40 ವರ್ಷದಿಂದ ಪ್ರತಿ ಐದು ವರ್ಷಕ್ಕೊಮ್ಮೆ ರಾಜ್ಯ ಸರ್ಕಾರವನ್ನು ಬದಲಿಸುತ್ತಾ ಬಂದಿದ್ದಾರೆ. ಆದರೆ ಕೇಂದ್ರದಲ್ಲಿ 2014 ರಿಂದ ಬಿಜೆಪಿಗೆ ಬೆಂಬಲ ನೀಡುತ್ತಾ ಬಂದಿದ್ದಾರೆ. ಹಾಗೆಯೇ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕೂಡ ಬಿಜೆಪಿಗೆ ರಾಜ್ಯದ ಜನತೆ ಇನ್ನು ಹೆಚ್ಚಿನ ಬೆಂಬಲ ನೀಡಲಿದ್ದಾರೆ ಎಂದು ವಿಶ್ವಾಸದಿಂದ ನುಡಿದರು.

ಮಹಾ ಆರಾಧಕರು: ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಮಹಿಷ ದಸರಾ ಆಚರಣೆ ಮಾಡಬೇಕೆನ್ನುವವರ ಪತ್ನಿಯರು ನಾಡದೇವತೆ ತಾಯಿ ಚಾಮುಂಡೇಶ್ವರಿ ಆರಾಧನೆ ಮಾಡುತ್ತಾರೆ ಎಂದು ಇದೇ ವೇಳೆ ಪ್ರತಾಪ್ ಸಿಂಹ ಪ್ರಗತಿಪರರಿಗೆ ತಿರುಗೇಟು ನೀಡಿದರು. ಮಹಿಷ ದಸರಾ ಆಚರಣೆ ಮಾಡಲು ಮುಂದಾಗಿರುವ ನಾಲ್ಕು ಜನರ ಮನೆಗೆ ಹೋಗಿ ನೋಡಿ. ಅವರ ಪತ್ನಿಯರೇ ತಾಯಿ ಚಾಮುಂಡೇಶ್ವರಿಯನ್ನು ಪೂಜಿಸುತ್ತಾರೆ. ಹೀಗಿರುವಾಗ ಇವರಿಗೆ ಕನಿಷ್ಠ ಅವರ ಮನೆಯವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ತಮ್ಮ ಹೆಂಡತಿಯರೇ ಚಾಮುಂಡೇಶ್ವರಿ ದೇವಿ ಆರಾಧಿಸುತ್ತಿರುವ ವಾಸ್ತವತೆ ಅರಿವಿದ್ದರೂ ಇಲ್ಲಿ ಬಂದು ಉದ್ದುದ್ದ ಭಾಷಣ ಮಾಡುತ್ತಾರೆ ಎಂದು ಪ್ರತಾಪ್ ಸಿಂಹ ಕಿಡಿಕಾರಿದರು.

ನಾವು ಇಷ್ಟು ವಿರೋಧ ಮಾಡಿದರೂ ಅದ್ಹೇಗೆ ಮಹಿಷ ದಸರಾ ಆಚರಣೆ ಮಾಡುತ್ತಾರೊ ನೋಡೋಣ. ಸರ್ಕಾರ ಇವರ ಮಾತಿಗೆ ಮನ್ನಣೆ ನೀಡಿ ಅದ್ಹೇಗೆ ಅನುಮತಿ ಕೊಡುತ್ತದೆಯೋ ನೋಡೋಣ ಎಂದು ಸವಾಲು ಹಾಕಿದರು. ಸರ್ಕಾರ ಬಹುಸಂಖ್ಯಾತರ ಭಾವನೆಗಳಿಗೆ ಮನ್ನಣೆ ನೀಡಬೇಕು. ಯಾರೊ ಒಂದಿಬ್ಬರು ಇಂತಹ ಆಚರಣೆ ಮಾಡುತ್ತೇವೆ ಎಂದರೆ ಅವರ ಬೇಡಿಕೆಗೆ ಸ್ಪಂದಿಸಬಾರದು. ಯಡಿಯೂರಪ್ಪ ಸರ್ಕಾರ ಮಹಿಷ ದಸರಾಗೆ ಅನುಮತಿ ನಿರಾಕರಿಸಿತ್ತು. ಅದರಂತೆ ಈಗಿನ ಸರ್ಕಾರ ಕೂಡ ಮಹಿಷ ದಸರಾಗೆ ಅನುಮತಿ ನೀಡಬಾರದು ಎಂದು ಪ್ರತಾಪ್ ಸಿಂಹ ಆಗ್ರಹಿಸಿದರು.

ಜ.22ಕ್ಕೆ ಅಯೋಧ್ಯೆ ಶ್ರೀ ರಾಮಮಂದಿರ ಉದ್ಘಾಟನೆ



ನವದೆಹಲಿ, ಸೆ.9– ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಬಹುನಿರೀಕ್ಷಿತ ವೈಭವೋಪೇತ ಶ್ರೀ ರಾಮಮಂದಿರದ ಉದ್ಘಾಟನೆ ಮುಂದಿನ ಜನವರಿಯಲ್ಲೇ ನಡೆಯಲಿದ್ದು, ದಿನಾಂಕ ಕೂಡ ನಿಗದಿಯಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರೇ ಈ ಮಂದಿರವನ್ನು ಉದ್ಘಾಟನೆ ಮಾಡಲಿರುವ ಮಾಹಿತಿ ಹೊರಬಿದ್ದಿದೆ. 2024ರ ಜನವರಿ 22ರಂದು ಶ್ರೀರಾಮಮಂದಿರವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟನೆ ಮಾಡಲಿದ್ದಾರೆ. ಅವರ ಜತೆಗೆ ಇತರ ಪ್ರಮುಖ ಸಚಿವರು, ಗಣ್ಯರು, ನಾಯಕರು ಈ ಸಮಾರಂಭಕ್ಕೆ ಸಾಕ್ಷಿಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸುಮಾರು 2 ವರ್ಷಗಳಿಂದ ಈ ಮಂದಿರದ ನಿರ್ಮಾಣ ನಡೆಯುತ್ತಿದೆ. ಪ್ರಧಾನಿ ಮೋದಿ 2020ರ ಆ.5ರಂದು ಈ ಮಂದಿರಕ್ಕೆ ಗುದ್ದಲಿ ಪೂಜೆ ನಡೆಸಿದ್ದರು. ನೂತನ ಮಂದಿರದಲ್ಲಿ ಸೂರ್ಯ, ಗಣೇಶ, ಶಿವ, ದುರ್ಗೆ, ಅನ್ನಪೂರ್ಣ, ಹನುಮಾನ್ ದೇವರ ಪ್ರತಿಷ್ಠಾಪನೆಯೂ ಇರಲಿದೆ.

ಒಂದನೇ ಪುಟದಿಂದ

'ಸಮಾಜವಾದಿ' ಆಗೋಲ್ಲ!

ಕಸುಬು ಕಿತ್ತುಕೊಂಡಿದೆ. ಹೀಗಾಗಿ ಅವರು, ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ಪಾನೀಪುರಿ ಮಾರಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಯಾರು ಕುಲಕಸುಬು ಕಳೆದುಕೊಂಡಿದ್ದಾರೋ ಅಂತಹವರಿಗೆ ಎರಡು ಎಕರೆ ಜಮೀನು ನೀಡಿ ಎಂದು ಒತ್ತಾಯಿಸಿದ ಹರಿಪ್ರಸಾದ್, ಸಮುದಾಯ ಸಂಘಟಿತರಾಗಿ ಚುನಾವಣೆಯಲ್ಲಿ ಮತದಾನ ಮಾಡಿದರೆ, ಯಾರನ್ನು ಬೇಕಾದರೂ ಸೋಲಿಸಬಹುದು ಎಂದರು. ನಾನು ಮಂತ್ರಿಯಾಗುತ್ತೇನೆ, ಮುಖ್ಯಮಂತ್ರಿಯಾಗುತ್ತೇನೆ ಎಂಬ ಭ್ರಮೆ ಯಾರಿಗೂ ಬೇಡ. ನಮ್ಮ ಸಮುದಾಯ ಕರ್ನಾಟಕದಲ್ಲಿ ಅಷ್ಟೇ ಅಲ್ಲ. ಬೇರೆ ರಾಜ್ಯದಲ್ಲಿ ಇದ್ದಾರೆ. ದೇವರಾಜ ಅರಸು ಕುಟುಂಬವನ್ನೇ ಮೂಲೆಗುಂಪು ಮಾಡಿದ ನಾವು, ಇನ್ನು ಬೇರೆ ಹಿಂದುಳಿದವರಿಗೆ ಅಧಿಕಾರ ದೊರೆಯುತ್ತದೆಯೇ? ಬರೀ ಭ್ರಮೆ ಎಂದು ಗುಡುಗಿದರು.

ವಿಶ್ವ ನಾಯಕರ ಒಕ್ಕೊರಲ ಸಹಮತ

ಅಧಿಕೃತವಾಗಿ ಅಂಗೀಕರಿಸಲಾಗಿದೆ. ಭಾರತದ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಜಿ20 ಶೃಂಗಸಭೆಯು ಶನಿವಾರ ಒಮ್ಮತದೊಂದಿಗೆ ನವದೆಹಲಿ ಘೋಷಣೆಯನ್ನು ಅಂಗೀಕರಿಸಿದೆ. ಆದರೆ ಉಕ್ರೇನ್ ವಿರುದ್ಧ ರಷ್ಯಾ ಯುದ್ಧದ ವಿವಾದಾತ್ಮಕ ವಿಷಯಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಭೂಪ್ರದೇಶವನ್ನು ವಶಪಡಿಸಿಕೊಳ್ಳಲು ಬಲ ಪ್ರಯೋಗ ಅಥವಾ ಪರಮಾಣು ಶಸ್ತ್ರಾಸ್ತ್ರಗಳ ಬಳಕೆಯನ್ನು ತಿರಸ್ಕರಿಸಿದೆ.

ಶೃಂಗಸಭೆಯು ಅಧಿಕೃತವಾಗಿ ಮುಕ್ತಾಯಗೊಳ್ಳುವ ಒಂದು ದಿನದ ಮುನ್ನ ಬಿಡುಗಡೆಯಾದ ಜಿ20 ಅಂತಿಮ ಹೇಳಿಕೆಯು ಕಳೆದ ವರ್ಷ ಬಾಲಿಯಲ್ಲಿ ನಡೆದ ಸಭೆಯಲ್ಲಿ ಯುದ್ಧದ ಬಗ್ಗೆ ನೀಡಲಾದ ಹೇಳಿಕೆಗಿಂತ ಕಡಿಮೆ ತೀಕ್ಷ್ಣವಾದ ಮಾತುಗಳನ್ನು ಹೊಂದಿದೆ ಮತ್ತು ರಷ್ಯಾದ ಆಕ್ರಮಣವನ್ನು ನೇರವಾಗಿ ಉಲ್ಲೇಖಿಸಿಲ್ಲ.

ಸದಸ್ಯರು ತಮ್ಮ ರಾಷ್ಟ್ರೀಯ ನಿಲುವುಗಳನ್ನು ಮತ್ತು ವಿಶ್ವಸಂಸ್ಥೆಯಲ್ಲಿ ಅಂಗೀಕರಿಸಿದ ನಿರ್ಣಯಗಳನ್ನು ಪುನರುಚ್ಚರಿಸಿದರು ಮತ್ತು ಎಲ್ಲಾ ರಾಷ್ಟ್ರಗಳು ಯುಎನ್ ಚಾರ್ಟರ್‌ನಲ್ಲಿ ಸೂಚಿಸಲಾದ ತತ್ವಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕು ಎಂದು ದೆಹಲಿ ಘೋಷಣೆ ಹೇಳಿದೆ. ವಿಶ್ವಸಂಸ್ಥೆಯಲ್ಲಿ ಅಂಗೀಕರಿಸಿದ ನಿರ್ಣಯಗಳಿಗೆ ಅನುಗುಣವಾಗಿ, ಯಾವುದೇ ದೇಶದ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವ ಅಥವಾ ರಾಜಕೀಯ ಸ್ವಾತಂತ್ರ್ಯದ ವಿರುದ್ಧ ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಬೆದರಿಕೆ ಅಥವಾ ಬಲ ಪ್ರಯೋಗದಿಂದ ದೂರವಿರಬೇಕು ಮತ್ತು ಪರಮಾಣು ಶಸ್ತ್ರಾಸ್ತ್ರಗಳ ಬಳಕೆ ಸ್ವೀಕಾರಾರ್ಹವಲ್ಲ ಎಂದು ಘೋಷಣೆ ಹೇಳಿದೆ. ಜಾಗತಿಕ ನಂಬಿಕೆ, ವಿಶ್ವಾಸದ ಕೊರತೆಯನ್ನು ನೀಗಿಸಲು ಭಾರತವು ಜಗತ್ತಿಗೆ ಕರೆ ನೀಡುತ್ತಿದೆ. ನಾವೆಲ್ಲರೂ ಒಗ್ಗಟ್ಟಾಗಿ ಸಾಗಬೇಕಾದ ಸಮಯವಿದು. ಈ ಸಮಯದಲ್ಲಿ "ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್" ಮಂತ್ರ ನಮಗೆ ಬೆಳಕು ತರಬಲ್ಲದು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಜಾಗತಿಕ ರಾಷ್ಟ್ರಗಳಿಗೆ ಸಾರಿದರು.

ಶನಿವಾರ ಬೆಳಗ್ಗೆ ರಾಷ್ಟ್ರ ರಾಜಧಾನಿ ನವದೆಹಲಿಯ ಪ್ರಗತಿ ಮೈದಾನದಲ್ಲಿ ನಿರ್ಮಿಸಿರುವ 'ಭಾರತ ಮಂಟಪ'ದಲ್ಲಿ ಆರಂಭವಾದ ಜಿ20 ಶೃಂಗಸಭೆಯ ಸ್ವಾಗತ ಭಾಷಣದಲ್ಲಿ 'ಒಂದು ಭೂಮಿ' ಧ್ಯೇಯ ವಾಕ್ಯದ ಮೇಲೆ ಮಾತನಾಡಿದ ಅವರು, ಹಲವು ವಿಷಯಗಳನ್ನು ಉಲ್ಲೇಖಿಸಿದರು. ಹಳೆಯ ಸವಾಲುಗಳಿಗೆ ಹೊಸ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ 21ನೇ ಶತಮಾನದ ಮಹತ್ವವನ್ನು ಒತ್ತಿ ಹೇಳಿದ ಅವರು, ಸವಾಲುಗಳನ್ನು ಎದುರಿಸಲು ಮಾನವ ಕೇಂದ್ರಿತ ವಿಧಾನಕ್ಕೆ ಕರೆ ನೀಡಿದರು.

21ನೇ ಶತಮಾನವು ಜಗತ್ತಿಗೆ ಹೊಸ ದಿಕ್ಕನ್ನು ತೋರಿಸಲು ಅತೀ ಸೂಕ್ತ ಸಮಯವಾಗಿದೆ. ಇದು ಹಳೆಯ ಸಮಸ್ಯೆಗಳಿಗೆ ಹೊಸ ಪರಿಹಾರಗಳನ್ನು ಹುಡುಕುವ ಸಮಯವಾಗಿದ್ದು, ಅದಕ್ಕಾಗಿಯೇ ನಾವು ನಮ್ಮ ಜವಾಬ್ದಾರಿಗಳನ್ನು ಮಾನವ ಕೇಂದ್ರಿತ ವಿಧಾನದೊಂದಿಗೆ ಪೂರೈಸಲು ಮುಂದುವರೆಯಬೇಕು ಎಂದರು.

ನಮ್ಮಲ್ಲಿ ನಂಬಿಕೆ ಕೊರತೆಯಿದೆ. ಅದನ್ನು ನಿವಾರಿಸಬೇಕು ಎಂದ ಅವರು, ಕೋವಿಡ್ ಸಾಂಕ್ರಾಮಿಕ ರೋಗದ ನಂತರ ನಂಬಿಕೆಯ ಕೊರತೆಯ ಹೊಸ ಸವಾಲನ್ನು ದುರದೃಷ್ಟವಶಾತ್ ಎದುರಿಸಬೇಕಾಯಿತು. ಇದರಿಂದ ಯುದ್ಧಗಳೂ ನಡೆದವು. ಕೋವಿಡ್‌ನಂತಹ ಸಾಂಕ್ರಾಮಿಕವನ್ನೇ ಸೋಲಿಸಿದ ನಾವು, ನಂಬಿಕೆಯ ಕೊರತೆಯ ಸವಾಲನ್ನು ಹೇಗೆ ಗೆಲ್ಲಬಹುದು ಎಂದು ಯೋಚನೆ ಮಾಡಬೇಕು ಎಂದರು. ಉಕ್ರೇನ್‌ನಲ್ಲಿನ ಯುದ್ಧವು ಜಾಗತಿಕ ಮಟ್ಟದಲ್ಲಿ ನಂಬಿಕೆಯ ಕೊರತೆಯನ್ನು ಉಂಟುಮಾಡಿದೆ ಎಂದ ಅವರು, ಈ ನಿಟ್ಟಿನಲ್ಲಿ ಜಿ20 ರಾಷ್ಟ್ರಗಳ ನಾಯಕರು ಒಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಉತ್ತರ ಮತ್ತು ದಕ್ಷಿಣದ ನಡುವೆ ವಿಭಜನೆ, ಪೂರ್ವ ಮತ್ತು ಪಶ್ಚಿಮದ ನಡುವೆ ಅಂತರ, ಆಹಾರ ಮತ್ತು ಇಂಧನದ ನಿರ್ವಹಣೆ, ಸೈಬರ್ ಭದ್ರತೆ, ಭಯೋತ್ಪಾದನೆ ಆರೋಗ್ಯ, ಇಂಧನ ಅಥವಾ ನೀರಿನ ಭದ್ರತೆಯ ಭವಿಷ್ಯಕ್ಕಾಗಿ ನಾವು ದೃಢವಾದ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.



ಪರಿಸರಸ್ನೇಹಿ ಗಣಪತಿ ಮೂರ್ತಿ ಪೂಜಿಸುವ ಸಂಬಂಧ ಕಾರ್ಯಾಗಾರ

ಮಕ್ಕಳಿಂದ ಮೂಡಿದ ಮಣ್ಣಿನ ಗಣಪ!







ಮೈಸೂರು, ಸೆ.9(ಎಂಟಿವೈ)– ಗೌರಿ–ಗಣೇಶ ಹಬ್ಬದಲ್ಲಿ ಪರಿಸರಸ್ನೇಹಿ ಗಣಪನ ಮೂರ್ತಿಗಳನ್ನೇ ಪೂಜಿಸುವಂತೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪರಿಸರ ಬಳಗದ ವತಿಯಿಂದ ಶಾಲಾ ಮಕ್ಕಳಿಗೆ ಮಣ್ಣಿನ ಗಣಪನ ಮೂರ್ತಿ ತಯಾರಿಕಾ ಕಾರ್ಯಾಗಾರ ಹಮ್ಮಿಕೊಂಡು, ಪರಿಸರ ಕಾಳಜಿ ಪ್ರದರ್ಶಿಸಲಾಯಿತು.

ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣ ಹಾಗೂ ಲಲಿತಮಹಲ್ ಪ್ಯಾಲೇಸ್ ಸಮೀಪದ ಮೈದಾನದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಕಾರದಲ್ಲಿ ಪರಿಸರ ಬಳಗ ಆಯೋಜಿಸಿರುವ ಎರಡು ದಿನಗಳ ಈ ಕಾರ್ಯಾಗಾರದಲ್ಲಿ ವಿವಿಧ ಶಾಲೆಗಳ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು ಸ್ಥಳದಲ್ಲೇ ಜೇಡಿಮಣ್ಣಿನಿಂದ ಗಣೇಶನ ವಿಗ್ರಹ ತಯಾರಿಸಿ, ಗಮನ ಸೆಳೆದರು.

ಹಿಂದೂ ಸಂಪ್ರದಾಯದಲ್ಲಿ ಗಣೇಶನ ಹಬ್ಬವೂ ಮಹತ್ವದ್ದಾಗಿದ್ದು, ಪ್ರತಿ ವರ್ಷವೂ ಸಾವಿರಾರು ಕುಟುಂಬಗಳು ತಮ್ಮ ಮನೆಗಳಲ್ಲಿ ಗಣೇಶನ ಮೂರ್ತಿ ಪೂಜಿಸಿ, ವಿಸರ್ಜಿಸುವ ಪದ್ಧತಿ ಅನುಸರಿಸುತ್ತಿವೆ. ಮನೆ ಮಾತ್ರವಲ್ಲದೆ, ಸಾರ್ವಜನಿಕ ಸ್ಥಳಗಳಲ್ಲಿ ಗಣೇಶನ ಮೂರ್ತಿ ಪೂಜಿಸುವ ಸಂಪ್ರದಾಯವೂ ಆಚರಣೆಯಲ್ಲಿದೆ. ಪರಿಸರಕ್ಕೆ ಮಾರಕವಾದ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿರುವ ಹಾಗೂ ಪರಿಸರಕ್ಕೆ ಹಾನಿಯುಂಟು ಮಾಡುವ ರಾಸಾಯನಿಕ ಅಂಶವುಳ್ಳ ಬಣ್ಣದ ಲೇಪನವಿರುವ ಗಣೇಶನ ಮೂರ್ತಿಯನ್ನು ಪೂಜಿಸಲು ಬಹುತೇಕರು ಮುಂದಾಗುವುದರಿಂದ ವಿಸರ್ಜನೆ ವೇಳೆ ಜಲಚರಗಳು ಸೇರಿದಂತೆ ಪರಿಸರಕ್ಕೆ ಹಾನಿಯುಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ವಿವಿಧ ಸಂಸ್ಥೆಗಳು ಪರಿಸರ ಸ್ನೇಹಿ ಮಣ್ಣಿನ ಗಣಪನನ್ನೇ ಪೂಜಿಸುವಂತೆ ಕಳೆದ ಹಲವು ವರ್ಷಗಳಿಂದ ಜಾಗೃತಿ ಮೂಡಿಸುತ್ತಿವೆ.

ಇಂದು ಎರಡು ಸ್ಥಳಗಳಲ್ಲಿ ಏರ್ಪಡಿಸಿರುವ ಮಣ್ಣಿನ ಗಣಪನ ತಯಾರಿಕಾ ಕಾರ್ಯಾಗಾರದಲ್ಲಿ ನೂರಾರು ಶಾಲಾ ಮಕ್ಕಳು ಪಾಲ್ಗೊಂಡು, ಜೇಡಿಮಣ್ಣಿನಿಂದ ತಾವೇ, ತಮಗಿಷ್ಟ ಬಂದ ವಿನ್ಯಾಸದಲ್ಲಿ ಗಣೇಶನ ವಿಗ್ರಹ ತಯಾರಿಸಿ, ಮನೆಗೆ ಕೊಂಡೊಯ್ದರು. ಕಾರ್ಯಾಗಾರದಲ್ಲಿ ಪಾಲ್ಗೊಂಡ ಮಕ್ಕಳಿಗೆ ಜೇಡಿಮಣ್ಣನ್ನು ಒದಗಿಸಲಾಯಿತು. ತಟ್ಟೆಯ ಮೇಲಿದ್ದ ಮಣ್ಣಿನ ಉಂಡೆಗೆ ಗಣೇಶನ ರೂಪ ನೀಡಿದರು. ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 12 ಗಂಟೆ, ಮಧ್ಯಾಹ್ನ 2 ಗಂಟೆಯಿಂದ ಸಂಜೆ 5ಗಂಟೆವರೆಗೆ ಕಾರ್ಯಾಗಾರ ನಡೆಯಿತು.

ಈ ಸಂದರ್ಭದಲ್ಲಿ ಪರಿಸರ ಬಳಗದ ಪದಾಧಿಕಾರಿಗಳಾದ ಪರಶುರಾಮೇಗೌಡ, ಲೀಲಾ ಶಿವಕುಮಾರ್, ಪ್ರಭಾ ನಂದೀಶ್, ಕುಸುಮ ಆಯರಹಳ್ಳಿ ಇನ್ನಿತರರು ಉಪಸ್ಥಿತರಿದ್ದರು.

ಮೊರಾಕ್ಕೊದಲ್ಲಿ ಭೀಕರ ಭೂಕಂಪ: ಸಾವಿರಾರು ಮಂದಿ ಸಾವು



ರಬಾತ್, ಸೆ.9– ಮೊರಾಕ್ಕೊದಲ್ಲಿ ಶುಕ್ರವಾರ ರಾತ್ರಿ 6.8 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ್ದು ಸಾವಿರಾರು ಮಂದಿ ಮೃತಪಟ್ಟಿದ್ದು, ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಲ್ಲಿನ ಅಧಿಕಾರಿಗಳು ಹೇಳಿದ್ದಾರೆ. ಘಟನೆಯಲ್ಲಿ ಸಾವಿರಾರು ಮಂದಿ ಗಾಯಗೊಂಡಿದ್ದಾರೆ. ಮನೆಗಳು, ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಹಲವಾರು ಜನರು ಸಿಲುಕಿಕೊಂಡಿದ್ದು ರಕ್ಷಣಾ ಕಾರ್ಯಗಳು ಭರದಿಂದ ನಡೆಯುತ್ತಿವೆ. ಸಾವು ನೋವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಗಳಿಗೆ ಎಂದು ಮೊರಾಕ್ಕೊ ಪೊಲೀಸರು ಹೇಳಿದ್ದಾರೆ. ಮರ್ರಾಕೆಚ್‌ನ ನೈರುತ್ಯ ಭಾಗ ಭೂಕಂಪನಕ್ಕೆ ಗುರಿ ಯಾಗುವ ಪ್ರದೇಶವಾಗಿದೆ. 2004ರಲ್ಲಿ ಈಶಾನ್ಯ ಮೊರಾಕ್ಕೊದಲ್ಲಿ ಸಂಭವಿಸಿದ ಭೂಕಂಪದಲ್ಲಿ 628 ಮಂದಿ ಮೃತಪಟ್ಟಿದ್ದರು.

ಸುದ್ದಿ ಸಂಸ್ಥೆಗಳ ಪ್ರಕಾರ, ಭೀಕರ ಭೂಕಂಪದಿಂದಾಗಿ ಹಲವು ಹಳೆಯ ಕಟ್ಟಡಗಳು ಕುಸಿದಿವೆ. ನಗರದಲ್ಲಿ ಆಂಬ್ಯುಲೆನ್ಸ್ ಹಾಗೂ ತುರ್ತು ಸೇವೆಗಳ ಕೊರತೆ ಕೂಡ ಕಾಡಿದೆ. ಮತ್ತೆ ಭೂಕಂಪನದ ಭೀತಿಯಿಂದ ಜನರು ಭಯಭೀತರಾಗಿ ಮನೆಯಿಂದ ಹೊರ ಬಂದಿದ್ದಾರೆ ಎಂದು ಹೇಳಲಾಗುತ್ತಿದೆ

ಭೂಕಂಪ ಪೀಡಿತ ಮೊರಾಕ್ಕೊಗೆ ಸಾಧ್ಯವಿರುವ ಎಲ್ಲಾ ನೆರವು ನೀಡಲು ಭಾರತ ಸಿದ್ಧ: ಪ್ರಧಾನಿ ಮೋದಿ



ನವದೆಹಲಿ, ಸೆ.9– ಮೊರಾಕ್ಕೊದಲ್ಲಿ ಸಂಭವಿಸಿದ ಭೂಕಂಪದಲ್ಲಿ ನೂರಾರು ಮಂದಿ ಸಾವನ್ನಪ್ಪಿದ್ದು, ಮೃತರ ಕುಟುಂಬಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸಂತಾಪ ಸೂಚಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಮೊರಾಕ್ಕೊದಲ್ಲಿ ಸಂಭವಿಸಿದ ಭೂಕಂಪದಿಂದ ಹಲವರು ಪ್ರಾಣ ಕಳೆದುಕೊಂಡಿದ್ದು, ಇದರಿಂತ ತೀವ್ರ ನೋವಾಗಿದೆ. ನನ್ನ ಆಲೋಚನೆಗಳು ಮೊರೊಕ್ಕೊ ಜನರೊಂದಿಗೆ ಇವೆ. ಇಂತಹ ಕಷ್ಟದ ಸಂದರ್ಭದಲ್ಲಿ ಮೊರಾಕ್ಕೊಗೆ ಸಾಧ್ಯವಿರುವ ಎಲ್ಲಾ ರೀತಿಯ ನೆರವು ನೀಡಲು ಭಾರತ ಸಿದ್ಧವಿದೆ. ಗಾಯಾಳುಗಳು ಶೀಘ್ರಗತಿಯಲ್ಲಿ ಗುಣಮುಖರಾಗಲಿ ಎಂದು ಹೇಳಿದ್ದಾರೆ. ಮಧ್ಯ ಮೊರಾಕ್ಕೊದಲ್ಲಿ 6.8 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ ಪರಿಣಾಮ 600ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ.

ಟಿಬೆಟಿಯನ್ನರ ಮೇಲಿನ ದಬ್ಬಾಳಿಕೆ ಬಗ್ಗೆಯೂ ಚರ್ಚೆಯಾಗಬೇಕು

ಎಲ್ಲಾ ರಾಷ್ಟ್ರಗಳಲ್ಲಿ ಟಿಬೆಟ್‌ಯನ್ ಯೂತ್ ಕಾಂಗ್ರೆಸ್ ಆಗ್ರಹ



ಮೈಸೂರು, ಸೆ.9(ಜಿಎ)–ಟಿಬೆಟಿಯನ್ನರ ಮೇಲೆ ಚೀನಾ ನಡೆಸುತ್ತಿರುವ ದಬ್ಬಾಳಿಕೆ ಬಗ್ಗೆ ದೆಹಲಿಯಲ್ಲಿ ನಡೆಯುತ್ತಿರುವ ಜಿ–20 ಶೃಂಗಸಭೆಯಲ್ಲಿ ಪಾಲ್ಗೊಂಡಿರುವ ಎಲ್ಲಾ ರಾಷ್ಟ್ರಗಳು ಗಮನ ಸೆಳೆಯಬೇಕು, ಈ ನಿಟ್ಟಿನಲ್ಲಿ ಚೀನಾದ ಮೇಲೆ ಒತ್ತಡ ಹೇರಬೇಕೆಂದು ಈ ಭಾಗದ ಬೈಲಕುಪ್ಪೆ ಮೊದಲಾದ ಕಡೆಗಳಲ್ಲಿನ ಟಿಬೆಟಿಯನ್ ಶಿಬಿರಗಳ ಯೂತ್ ಕಾಂಗ್ರೆಸ್ ಸಂಘಟನೆಗಳು ಆಗ್ರಹಿಸಿವೆ.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಹುಣಸೂರು ವಿಭಾಗದ ಅಧ್ಯಕ್ಷರಾದ ತ್ಸೆರಿಂಗ್ ಗ್ಯೋಟೆಮ್ ಮಾತನಾಡಿ, ಟಿಬೆಟ್‌ನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ. ಟಿಬೆಟಿಯನ್ನರ ಸಾಂಸ್ಕೃತಿಕ ಗುರುತನ್ನು ನಾಶ ಪಡಿಸುವ ಕೆಲಸ ನಡೆದಿದೆ ಎಂದರು.

ಟಿಬೆಟ್‌ನಲ್ಲಿನ ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲೇ ಚೀನಾ ಆಡಳಿತದ ಶಾಲೆಗಳಿಗೆ ಸೇರಿಸಿ ಮೂಲ ಸಂಸ್ಕೃತಿ ಅರಿವು ಇಲ್ಲದಂತೆ ಮಾಡುವ ಕೆಲಸ ನಡೆದಿದೆ. ಹೀಗಾಗಿ ಈ ಕುರಿತು ಜಿ– 20 ಶೃಂಗಸಭೆಯಲ್ಲಿ ಪಾಲ್ಗೊಂಡಿರುವ ರಾಷ್ಟ್ರಗಳ ಗಮನ ಸೆಳೆಯಲೆಂದು ತಮ್ಮ ಸಂಘಟನೆ ಈಗಾಗಲೇ ಪ್ರಧಾನಿಗೆ ಇ–ಮೇಲ್ ಮೂಲಕ ಮನವಿ ಪತ್ರ ಸಲ್ಲಿಸಿದೆ. ಜೊತೆಗೆ ರಾಷ್ಟ್ರದ ಇತರೆಡೆಯೂ ಈ ಕುರಿತು ಪ್ರತಿಭಟನೆ ನಡೆಸುವ ಮೂಲಕ ಗಮನ ಸೆಳೆಯಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸೋನಮ್ ದೋರ್ಜಿ, ರಿಗ್ಜಾಮ್ ಉಪಸ್ಥಿತರಿದ್ದರು.

ಅತ್ಯಾಧುನಿಕ ಶಸ್ತ್ರಚಿಕಿತ್ಸೆ ಮೂಲಕ ಕ್ಯಾನ್ಸರ್ ಗಡ್ಡೆ ನಿವಾರಣೆ

ಮೈಸೂರು, ಸೆ.9(ಎಂಟಿವೈ)– ತೀವ್ರತರ ನಾದ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಮಹಿಳೆಯೊಬ್ಬರ ಹೊಟ್ಟೆಯಲ್ಲಿದ್ದ 1.5 ಸೆಂಟಿಮೀಟರ್ ಉದ್ದದ ಕ್ಯಾನ್ಸರ್ ಗಡ್ಡೆಯನ್ನು ಅತ್ಯಾಧುನಿಕ ವಿಧಾನದ ಶಸ್ತ್ರಕ್ರಿಯೆ ಮೂಲಕ ತೆಗೆಯಲಾಗಿದೆ ಎಂದು ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ತಜ್ಞ ವೈದ್ಯ ಡಾ. ಸತೀಶ್‌ರಾವ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಪದೇಪದೆ ಹೊಟ್ಟೆನೋವಿನಿಂದ ಬಳಲುತ್ತಿದ್ದ ಮಹಿಳೆಯೊಬ್ಬರು ಚಿಕಿತ್ಸೆಗೆ ಬಂದಾಗ ಅನುಮಾನಗೊಂಡು ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಅವರ ಸಣ್ಣ ಕರುಳಿನ ಮೊದಲ ಭಾಗದಲ್ಲಿ ಸುಮಾರು 1.5 ಸೆಂಟಿಮೀಟರ್‌ನಷ್ಟು ದೊಡ್ಡ ಗಡ್ಡೆ ಇರುವುದು ಪತ್ತೆಯಾಗಿತ್ತು. ಹೆಚ್ಚಿನ ಪರೀಕ್ಷೆಗೆ ಒಳಪಡಿಸಿದಾಗ ಅದು ಕ್ಯಾನ್ಸರ್ ಗಡ್ಡೆ ಎಂದು ದೃಢಪಟ್ಟಿತ್ತು. ಇದು ಕಾರ್ಸಿನಾಯ್ಡ್ ಎಂಬ ಅತ್ಯಪರೂಪದ ಕ್ಯಾನ್ಸರ್ ಗಡ್ಡೆ. ಈ ಹಿಂದೆಲ್ಲ ಇದನ್ನು ತೆರೆದ ಶಸ್ತ್ರಚಿಕಿತ್ಸೆ ಮೂಲಕ ತೆಗೆದುಹಾಕಲಾಗಿತ್ತು. ಆದರೆ ತಮ್ಮ ಆಸ್ಪತ್ರೆಯಲ್ಲಿನ ಎಂಡೋ ಸ್ಕೋಪಿಕ್ ಫುಲ್ ಥಿಕ್‌ನೆಸ್ ರಿಸೆಪ್ಷನ್ ಎಂಬ ಇಎಫ್‌ಟಿಆರ್ ವಿಧಾನದ ಮೂಲಕ ಯಶಸ್ವಿಯಾಗಿ ಹೊರತೆಗೆಯಲಾಗಿದೆ ಎಂದು ತಿಳಿಸಿದರು. ಮೈಸೂರಲ್ಲಿ ಇದೇ ಮೊದಲ ಬಾರಿ ಈ ನೂತನ ವಿಧಾನದ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ರೋಗಿಗೆ ಕೇವಲ ಒಂದು ಲಕ್ಷ ವೆಚ್ಚ ತಗುಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಎಂ.ಎಸ್.ರವಿ ಇದ್ದರು.

ಎಸ್.ಪ್ರಕಾಶ್ ಬಾಬು
ಮೊ: 98444-63930
Email: babumay26@gmail.com

ಶ್ರೀ ಲಕ್ಷ್ಮಿಕಾಂತನಿಂದ ಅಭಿವೃದ್ಧಿಯ ಹೆಬ್ಬಾಗಿಲಾಯ್ತು ಹೆಬ್ಬಾಳು








ಮೈಸೂರಿನ ಈಗಿನ ಹೆಬ್ಬಾಳು ಬಡಾವಣೆ ಮತ್ತು ಕೈಗಾರಿಕಾ ಪ್ರದೇಶಗಳೆಲ್ಲ ಒಂದು ಕಾಲದಲ್ಲಿ ರಾಜ ಸಂಸ್ಥಾನವಾಗಿತ್ತು. ಮೈಸೂರಿನ ಒಡೆಯರ್ ಆಳ್ವಿಕೆಗೂ ಮುನ್ನವೋ, ಅಥವಾ ಒಡೆಯರ್ ಸಮಕಾಲೀನದಲ್ಲೋ ಹೆಬ್ಬಾಳು ಒಂದು ಪಾಳೇಪಟ್ಟಿನ ಸಾಮ್ರಾಜ್ಯವಾಗಿದ್ದಿರಬಹುದೆಂಬ ಅಂದಾಜಿದೆ. ಕಾಲಾಂತರದಲ್ಲಿ ಅನ್ಯಾಕ್ರಮಣಕ್ಕೋ ಅಥವ ಕ್ಷಾಮ-ಡಾಮರಗಳಿಗೋ ನಿಶ್ಶೇಷವಾಯಿತು. ಯಾವ ಮಟ್ಟಿಗೆ ಎಂದರೆ, ಅಲ್ಲಿ ನೂರಾರು ವರ್ಷಗಳ ಕಾಲ ಮಾನವರ ಕುರುಹೇ ಇಲ್ಲದಂತೆ ಪಾಳುಬಿದ್ದು ಹೋಯಿತು. ಆದರೆ ಹೆಬ್ಬಾಳು ಎಂಬ ಹೆಸರು ಮಾತ್ರ ಜನರ ಬಾಯಲ್ಲಿ ಉಳಿದುಕೊಂಡಿತ್ತು. ಅಲ್ಲಿ ಊರೂ ಇಲ್ಲ, ಕೇರಿಯೂ ಇರಲಿಲ್ಲ. ಏಕೆಂದರೆ, ಅಲ್ಲಿ ಜನರೇ ವಾಸಿಸುತ್ತಿರಲಿಲ್ಲ. ಯಾವ ಕಾಲದಲ್ಲಿ ಈ ಊರು ಹಾಳು ಬಿದ್ದಿತ್ತೋ, ಯಾಕೆ ಹೀಗೇ ಹೆಬ್ಬಾಳು ಪಾಳು ಬಿದ್ದಿತು ಅಂತ ಯಾರಿಗೂ ಗೊತ್ತಿಲ್ಲ.

ಒಂದು ಅಂದಾಜಿನ ಪ್ರಕಾರ ಕುಂಬಾರಕೊಪ್ಪಲು ಮತ್ತು ಮಂಚೇಗೌಡನ ಕೊಪ್ಪಲಿನ ಈಗಿನ ನಿವಾಸಿಗಳೇ ಹೆಬ್ಬಾಳಿನ ಮೂಲ ನಿವಾಸಿಗಳು. ಶತ್ರುಗಳ ದಾಳಿಗೋ, ಕ್ಷಾಮ, ಡಾಮರ, ರೋಗಗಳ ಹಾವಳಿಗೋ ಹೆಬ್ಬಾಳಿನ ಜನ ಅಕ್ಕಪಕ್ಕದ ಊರುಗಳಾದ ಮಂಚೇಗೌಡನಕೊಪ್ಪಲು, ಕುಂಬಾರಕೊಪ್ಪಲು, ಮೇಟಗಳ್ಳಿ, ಮಾರೇಗೌಡನಹಳ್ಳಿ (ಕೆ.ಆರ್.ಎಸ್.ರಸ್ತೆಯಲ್ಲಿರುವ ಇಂದಿನ ಬೃಂದಾವನ ಬಡಾವಣೆ)ಗಳಿಗೆ ವಲಸೆ ಹೋದರು. ಇದರಿಂದ ಹೆಬ್ಬಾಳು ಅನ್ನೋ ಊರು ಇನ್ನೂರು ವರ್ಷಗಳ ಹಿಂದೆಯೇ ಇತಿಹಾಸದೊಳಗೆ ಊತು ಹೋಯಿತು. 50 ವರ್ಷಗಳ ಹಿಂದಿನವರೆಗೂ ಅಲ್ಲೊಂದು ಮರವೂ ಕಾಣಸಿಗುತ್ತಿರಲಿಲ್ಲ. ಸುಮಾರು ಐದು ಸಾವಿರ ಎಕರೆಗಳಷ್ಟು ಬೃಹತ್ ವಿಸ್ತೀರ್ಣದಲ್ಲಿ ಎತ್ತ ಕಣ್ಣು ಹಾಯಿಸಿದರೂ ಕಲ್ಲು ಮಂಟಿ ಗುಡ್ಡಗಳು, ಮುಳ್ಳಿನ ಕುರುಚಲು ಗಿಡಗಳಷ್ಟೇ ಕಾಣುತ್ತಿದ್ದವು. ಆ ಮಟ್ಟಿಗೆ ಹೆಬ್ಬಾಳು ಪಾಳು ಬಿದ್ದಿತ್ತು.

ಊರಿದೆ ಜನರಿಲ್ಲ ಅನ್ನೋ ಹೆಬ್ಬಾಳು ಪ್ರದೇಶದಲ್ಲಿ ಅಕ್ಕಪಕ್ಕದ ಊರುಗಳಾದ ಮಂಚೇಗೌಡನಕೊಪ್ಪಲು ಮತ್ತು ಕುಂಬಾರಕೊಪ್ಪಲಿನ ಜನ ಓಡಾಡಲೇ ಹೆದರುತ್ತಿದ್ದರು. ಇಲ್ಲಿರುವ ಬೃಹತ್ತಾದ "ಶ್ರೀಲಕ್ಷ್ಮಿಕಾಂತ ಸ್ವಾಮಿ" ದೇವಸ್ಥಾನದ ಒಳಗೆ ಹೋಗುವುದಿರಲಿ, ಇಣುಕಿ ನೋಡುವ ಧೈರ್ಯವನ್ನೂ ಸುತ್ತಮುತ್ತಲ ಊರಿನ ಜನ ಮಾಡುತ್ತಿರಲಿಲ್ಲ. ದನಗಾಹಿಗಳು ಮಳೆ ಬಂದಾಗ ಮತ್ತು ಬಿಸಿಲ ಬೇಗೇ ತಾಳದಾದಾಗ ದೇವಸ್ಥಾನದ ಗೋಪುರ ದಡಿ ನಿಲ್ಲುತ್ತಿದ್ದರು. ಪೂಜೆಗೆಂದು ವಾರಕ್ಕೊಮ್ಮೆ ಶನಿವಾರದಂದು ಪುರೋಹಿತರೊಬ್ಬರು ಒಂಟಿಕೊಪ್ಪಲಿನಿಂದ ದೇವಸ್ಥಾನಕ್ಕೆ ಬರುತ್ತಿದ್ದರು ಎಂಬುದಷ್ಟೇ ಜನರಿಗೆ ಗೊತ್ತಿತ್ತು. ಆದರೆ, ಇಲ್ಲಿರುವ ದೇವಸ್ಥಾನ ಯಾವುದು? ದೇವರು ಯಾವುದು ಎಂಬುದೂ ಗೊತ್ತಿರಲಿಲ್ಲ. ಸಾಮಾನ್ಯ ಜನರಿಗಿರಲಿ, ಪೂಜೆ ಮಾಡೋ ಪುರೋಹಿತರಿಗೂ ಮೂಲ ದೇವರ ಹೆಸರು ಗೊತ್ತಿರಲಿಲ್ಲ. ದೇವರ ಕೈಯ್ಯಲ್ಲಿ ವಿಷ್ಣು ಚಕ್ರ ಇದ್ದದ್ದನ್ನು ನೋಡಿ 'ನಾರಾಯಣ' ಎಂದು ಭಾವಿಸಿ ಪೂಜಿಸುತ್ತಿದ್ದರು.

1970ರಲ್ಲಿ ಕುಂಬಾರಕೊಪ್ಪಲಿನ ಯುವಕರಾದ ಡಿ.ಮಾದೇಗೌಡರು (ಸಿಐಟಿಬಿ ಮಾಜಿ ಅಧ್ಯಕ್ಷರು), ಗುಂಡಪ್ಪಗೌಡರು (ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಅಧ್ಯಕ್ಷರು) ತಮ್ಮ ಸ್ನೇಹಿತರು ಹಾಗೂ ದನಗಾಹಿಗಳೊಂದಿಗೆ ಸೇರಿ ಶ್ರೀಲಕ್ಷ್ಮಿಕಾಂತ ದೇವಾಲಯದೊಳಗೆ ಬೆಳೆದಿದ್ದ ಗಿಡಗಂಟಿಗಳನ್ನು ಮಚ್ಚು ಕುಡುಗೋಲಿನಿಂದ ಕಡಿದು, ಸ್ವಚ್ಛ ಮಾಡಿದರು. 1972ರಲ್ಲಿ ಊರಿನ ಜನ ದೇವಸ್ಥಾನಕ್ಕೆ ಬರಲು ಅನುಕೂಲವಾಗಲೆಂದು ಕಾಲುದಾರಿ ಮಾಡಿದರು. ಮುಂದೆ ಇದು ಓಣಿರಸ್ತೆಯಂತಾಗಿ ದೇವರ ಹೆಸರನ್ನ "ಓಣಿ ನಾರಾಯಣ" ಅಂತಾನೇ ಜನ ಕರೆಯುತ್ತಿದ್ದರು. ಹೀಗಾಗಿ 50 ವರ್ಷಗಳ ಹಿಂದಿನವರೆಗೂ ಪಾಳುಬಿದ್ದ ಹೆಬ್ಬಾಳು ಎಂಬ ಊರಿನ ಪುರಾತನ ದೇಗುಲದ ಪ್ರಧಾನ ದೇವರ ಹೆಸರು "ಶ್ರೀಲಕ್ಷ್ಮಿಕಾಂತ" ಅಂತ ಯಾರಿಗೂ ಗೊತ್ತಿರಲಿಲ್ಲ. ಇದರ ಮೂಲ ಪತ್ತೆ ಮಾಡಲು ಸಂಶೋಧನೆಗಿಳಿದಾಗ ಮೈಸೂರು ಗೆಜೆಟಿಯರ್ ಮತ್ತು ದೇವಸ್ಥಾನದಲ್ಲಿ ಸಿಕ್ಕ ಶಾಸನದ ಮಾಹಿತಿ ಪ್ರಕಾರ ಹೊಯ್ಸಳರ ಸಾಮಂತ ದೊರೆ ಈ ದೇವಸ್ಥಾನ ಕಟ್ಟಿಸಿದ್ದು, ದೇವರ ಹೆಸರು "ಶ್ರೀಲಕ್ಷ್ಮಿಕಾಂತಸ್ವಾಮಿ" ಅನ್ನೋದು ಗೊತ್ತಾಯಿತು.


ಆಗ ಕುಂಬಾರಕೊಪ್ಪಲಿನ ಪುರಸಭಾ ಸದಸ್ಯರಾದ ದೊಡ್ಡತಮ್ಮೇಗೌಡ ಕುಂಬಾರಕೊಪ್ಪಲಿನ ಯಜಮಾನರಾದ ಶ್ರೀನಿವಾಸೇಗೌಡರು, ಕೆಂಪೇಗೌಡರು, ಪಟೇಲ್ ತಿಪ್ಪೇಗೌಡರು, ಸಹ ಯಜಮಾನರುಗಳಾದ ಚನ್ನಯ್ಯ, ಉಗ್ರೇಗೌಡರ ಮಾದೇಗೌಡರು, ಕಡುಬಿಕೆಂಪಿ ಚೆಲುವೇಗೌಡರು ಮತ್ತಿತರ ಮುಖಂಡರು ಪಾಳು ಬಿದ್ದಿದ್ದ "ಶ್ರೀಲಕ್ಷ್ಮಿಕಾಂತಸ್ವಾಮಿ" ದೇಗುಲದ ಜೀರ್ಣೋದ್ಧಾರಕ್ಕೆ ನಿರ್ಧರಿಸಿದರು. ಇವರೆಲ್ಲಾ ಶಾಸಕರಾಗಿದ್ದ ಕೆ.ಪುಟ್ಟಸ್ವಾಮಿ ಮೊರೆ ಹೋದರು. (1978ರಲ್ಲಿ ಚಾಮರಾಜಕ್ಷೇತ್ರವಾಗುವವರೆಗೂ ಕುಂಬಾರಕೊಪ್ಪಲು ಮತ್ತಿತರ ಪ್ರದೇಶಗಳು ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ್ದವು). ಆಗ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದರು. ಅರಸು ಮಂತ್ರಿ ಮಂಡಲದಲ್ಲಿ ಕಂದಾಯ ಮಂತ್ರಿಯಾಗಿದ್ದ ಹುಚ್ಚಮಾಸ್ತಿಗೌಡರ ಬಳಿಗೆ ಮಾಜಿ ಸಚಿವರೂ ಆದ ಕೆ.ಪುಟ್ಟಸ್ವಾಮಿ ಕುಂಬಾರಕೊಪ್ಪಲಿನ ನಿಯೋಗ ಕೊಂಡೊಯ್ದು ಸರ್ಕಾರದಿಂದ ದೇಗುಲ ಜೀರ್ಣೋದ್ಧಾರಕ್ಕೆ ಮನವಿ ಮಾಡಿದರು. ಕೆಲ ದಿನಗಳಲ್ಲೇ ಸಚಿವ ಹುಚ್ಚಮಾಸ್ತಿಗೌಡರು "ಶ್ರೀಲಕ್ಷ್ಮಿಕಾಂತ ಸ್ವಾಮಿ" ದೇಗುಲಕ್ಕೆ ಭೇಟಿ ನೀಡಿ ಆಶ್ಚರ್ಯ ಚಕಿತರಾದರು. ಬೃಹತ್ತಾದ ದೇಗುಲದ ಶಿಲ್ಪಕಲಾ ವೈಭವ ಮತ್ತು "ಶ್ರೀಲಕ್ಷ್ಮಿಕಾಂತಸ್ವಾಮಿ" ಮತ್ತು "ಮಹಾಲಕ್ಷ್ಮಿ" ಮೂರ್ತಿಗಳನ್ನು ನೋಡಿ ಭಾವುಕರಾದರು. ಇಂಥ ಅದ್ಭುತ ದೇವಾಲಯದ ಜೀರ್ಣೋದ್ಧಾರ ತಮ್ಮ ಅಧಿಕಾರಾವಧಿಯಲ್ಲೇ ಆಗಬೇಕೆಂದು ಹೇಳಿ, ದೇವಾಲಯದ ಜೀರ್ಣೋದ್ಧಾರ ಸಮಿತಿ ರಚಿಸಿ, ಮನವಿ ಸಲ್ಲಿಸುವಂತೆ ಸೂಚಿಸಿದರು.





ಡಿ.ಮಾದೇಗೌಡ ಗುಂಡಪ್ಪಗೌಡ

ಆದಿಚುಂಚನಗಿರಿ ಮಠದಿಂದ ಮರುಕಳಿಸುತ್ತಿದೆ ಗತವೈಭವ





ಕಳೆದ 50 ವರ್ಷಗಳ ಹಿಂದೆ "ಶ್ರೀಲಕ್ಷ್ಮಿಕಾಂತಸ್ವಾಮಿ" ದೇಗುಲದ ಜೀರ್ಣೋದ್ಧಾರ ಕಾಲದಿಂದಲೂ ಹೆಬ್ಬಾಳಿನ ಸುತ್ತಮುತ್ತು ಗ್ರಾಮಸ್ಥರ ಕೋರಿಕೆ ಮೇರೆಗೆ ಪೂಜಾ ಕಾರ್ಯಕೈಗೊಂಡು ಬಂದಿದ್ದ ಆದಿಚುಂಚನಗಿರಿ ಮಹಾಸಂಸ್ಥಾನದವರು ಹಿಂದಿನ ಗತವೈಭವ ಮರುಕಳಿಸುವಂತೆ ಮಾಡಲು ಶ್ರಮಿಸುತ್ತಾ ಬಂದಿದ್ದಾರೆ. ಶಿವೈಕ್ಯ ಜಗದ್ಗುರುಗಳಾದ ಶ್ರೀಬಾಲಗಂಗಾಧರನಾಥ ಸ್ವಾಮೀಜಿಗಳ ಆಶಯದಂತೆ ಅಲ್ಲಿ ಈಗ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಆದಿಚುಂಚನಗಿರಿ ಮಹಾಸಂಸ್ಥಾನದ ಈಗಿನ ಜಗದ್ಗುರುಗಳಾದ ಶ್ರೀನಿರ್ಮಲಾನಂದನಾಥಸ್ವಾಮೀಜಿ ಮತ್ತು ಮೈಸೂರು ಶಾಖಾ ಮಠದ ಶ್ರೀಸೋಮನಾಥಸ್ವಾಮೀಜಿ ನೇತೃತ್ವದಲ್ಲಿ "ಶ್ರೀಲಕ್ಷ್ಮಿಕಾಂತಸ್ವಾಮಿ" ದೇಗುಲದಲ್ಲಿ ಆದಿಚುಂಚನ ಗಿರಿ ಮಹಾಸಂಸ್ಥಾನದ ಮೈಸೂರು ಶಾಖಾ ಮಠ, ಉಚಿತ ವಿದ್ಯಾರ್ಥಿ ನಿಲಯ, ಬಿಜಿಎಸ್ ಸಾಂಸ್ಕೃತಿಕ ಭವನ ಮತ್ತು ಬಿಜಿಎಸ್ ಅತಿಥಿ ಗೃಹ ನಿರ್ಮಿಸಲಾಗಿದೆ. ಇವುಗಳ ಲೋಕಾರ್ಪಣಾ ಕಾರ್ಯಕ್ರಮ ಸೆಪ್ಟೆಂಬರ್ 10 ಮತ್ತು 11 ರಂದು ನೆರವೇರುತ್ತಿದೆ. ಸೆ.10ರಂದು ಆದಿಚುಂಚನಗಿರಿ ಮಹಾಸಂಸ್ಥಾನದಿಂದ ಬೆಳಗ್ಗೆ 6 ಗಂಟೆಗೆ "ಭೈರವಜ್ಯೋತಿ" ಹೊರಡಲಿದೆ. ಬೆಳಗ್ಗೆ 10 ಗಂಟೆ ಹೊತ್ತಿಗೆ ಮೈಸೂರಿನ ವರ್ತುಲ ರಸ್ತೆಯಲ್ಲಿರುವ ಕೆಂಪೇಗೌಡವೃತ್ತಕ್ಕೆ ಆಗಮಿಸುವ "ಭೈರವ ಜ್ಯೋತಿ" ನಗರದೆಲ್ಲೆಡೆ ಸಂಚರಿಸಿ, ಸಂಜೆ 5 ಗಂಟೆಗೆ ಹೆಬ್ಬಾಳಿನ ಲಕ್ಷ್ಮಿಕಾಂತಸ್ವಾಮಿ ದೇಗುಲ ತಲುಪಲಿದೆ. ಅಂದು ಸಂಜೆ 7ಗಂಟೆಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಉದ್ಘಾಟನಾ ಕಾರ್ಯಕ್ರಮ ಆರಂಭವಾಗಲಿದೆ. ಈ ಸಂದರ್ಭದಲ್ಲಿ ಮೈಸೂರು ಒಡೆಯರ್ ವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉಪಸ್ಥಿತರಿರುವರು.

ಸೆ.11ರಂದು ಸೋಮವಾರ ಬೆಳಿಗ್ಗೆ ಆದಿಚುಂಚನಗಿರಿ ಮಹಾಸಂಸ್ಥಾನದ ಮೈಸೂರು ಶಾಖಾ ಮಠವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜಿಎಸ್ ಸಾಂಸ್ಕೃತಿಕ ಭವನವನ್ನು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಉಚಿತ ವಿದ್ಯಾರ್ಥಿ ನಿಲಯವನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಬಿಜಿಎಸ್ ಅತಿಥಿ ಗೃಹವನ್ನು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ.



ಸಚಿವ ಹುಚ್ಚಮಾಸ್ತಿಗೌಡರ ಸಲಹೆಯಂತೆ "ಶ್ರೀಲಕ್ಷ್ಮಿಕಾಂತ ಸ್ವಾಮಿ" ದೇಗುಲದ ಜೀರ್ಣೋದ್ಧಾರ ಸಮಿತಿಯನ್ನು ಕುಂಬಾರಕೊಪ್ಪಲಿನ ಮುಖಂಡರು ರಚಿಸಿದರು. ಸಮಿತಿ ಅಧ್ಯಕ್ಷರಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಕೆ.ಪುಟ್ಟಸ್ವಾಮಿ, ಕಾರ್ಯದರ್ಶಿಯಾಗಿ ಕುಂಬಾರಕೊಪ್ಪಲು ಪುರಸಭಾ ಸದಸ್ಯ ದೊಡ್ಡತಮ್ಮೇಗೌಡರು, ಸಹಾಯಕ ಕಾರ್ಯದರ್ಶಿಯಾಗಿ ಜಯರಾಮ್ ನೇಮಕವಾದರು. ಆಗ ದೇಗುಲದ ಜೀರ್ಣೋದ್ಧಾರಕ್ಕೆ ರಾಜ್ಯ ಸರ್ಕಾರದಿಂದ ರೂ.16,000 ಮತ್ತು ಕುಂಬಾರಕೊಪ್ಪಲು ಮತ್ತಿತರ ಊರಿನ ಜನರಿಂದ ರೂ. 16,000 ಹಣ ಸಂಗ್ರಹಿಸಲಾಯಿತು. 1974ರಲ್ಲಿ ನಡೆದ "ಶ್ರೀಲಕ್ಷ್ಮಿಕಾಂತಸ್ವಾಮಿ" ದೇಗುಲದ ಜೀರ್ಣೋದ್ಧಾರ ಕಾರ್ಯಕ್ರಮ ಆದಿಚುಂಚನಗಿರಿ ಮಹಾಸಂಸ್ಥಾನದ ಅಂದಿನ ಜಗದ್ಗುರು ಶ್ರೀಬಾಲಗಂಗಾಧರನಾಥ ಸ್ವಾಮೀಜಿ ಸಮ್ಮುಖದಲ್ಲಿ ಯಶಸ್ವಿಯಾಗಿ ನೆರವೇರಿತು. ಅಂದು ಜೀರ್ಣೋದ್ಧಾರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಕಂದಾಯ ಸಚಿವ ಹುಚ್ಚಮಾಸ್ತಿಗೌಡರು "ಲಕ್ಷ್ಮಿಕಾಂತ ಸ್ವಾಮಿಯ ಜೀರ್ಣೋದ್ಧಾರವಾಗುತ್ತೆ, ಇನ್ನೇನು ನಿಮಗೆ ಲಕ್ಷ್ಮಿಯ ಕೃಪೆ ಧಾರಾಳವಾಗಿ ಸಿಗುತ್ತೆ" ಅಂತ ಜನರನ್ನುದ್ದೇಶಿಸಿ ಹೇಳಿದ ಮಾತು ಅಕ್ಷರಶಃ ಸತ್ಯವಾಯಿತು. ಏಷ್ಯಾದಲ್ಲೇ ಅತಿ ದೊಡ್ಡ ಕೈಗಾರಿಕಾ ಪ್ರದೇಶವಾದ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲೀಗ ಆರ್.ಬಿ.ಐ ನೋಟು ಮುದ್ರಾಲಯ, ಅಂತರಾಷ್ಟ್ರೀಯ ಖ್ಯಾತಿಯ ಇನ್ಫೋಸಿಸ್ ಮತ್ತಿತರ ಐಟಿ ದಿಗ್ಗಜ ಕಂಪೆನಿಗಳು ಸ್ಥಾಪಿತವಾಗಿ, ಸಾವಿರಾರು ಜನರಿಗೆ ಉದ್ಯೋಗ ನೀಡಿವೆ.

1982ರಲ್ಲಿ "ಶ್ರೀಲಕ್ಷ್ಮಿಕಾಂತಸ್ವಾಮಿ" ದೇಗುಲದ ಜೀರ್ಣೋದ್ಧಾರ ಪೂರ್ಣಗೊಂಡ ನಂತರ ಹೆಬ್ಬಾಳು ಜಾತ್ರೋತ್ಸವ ನಡೆಸಲಾಯಿತು. ಆಗ ದನಗಳ ಜಾತ್ರೆಯೂ ದೊಡ್ಡದಾಗಿ ನಡೆಯಿತು. ಸುತ್ತಮುತ್ತಲ ಹಳ್ಳಿಗಳಲ್ಲದೆ, ದೂರದೂರಿನಿಂದ ಬಂದ ಜನ ಮತ್ತು ದನಗಳಿಂದ ಹೆಬ್ಬಾಳಿನ "ಲಕ್ಷ್ಮಿಕಾಂತಸ್ವಾಮಿ" ದೇಗುಲದ ಸುತ್ತಲ ಪ್ರದೇಶ ತುಂಬಿಹೋಗಿತ್ತು. ಏಪ್ರಿಲ್ ತಿಂಗಳು ರಣಬೇಸಿಗೆ ಕಾಲವಾಗಿದ್ದರಿಂದ ನೆತ್ತಿ ಸುಡುವ ಬಿಸಿಲಿನ ತಾಪ ತಡೆಯಲಾರದೆ, ಜನ ಮತ್ತು ಜಾನುವಾರುಗಳು ತತ್ತರಿಸಿ ಹೋಗುವಂತಾಯಿತು. ಏಕೆಂದರೆ ಸುತ್ತಲ ಹತ್ತಾರು ಎಕರೆ ಪ್ರದೇಶಗಳಲ್ಲಿ ಒಂದೇ ಒಂದು ಮರವೂ ಇರಲಿಲ್ಲ. ದನ ಕಟ್ಟಿ ಹಾಕಲು ಒಂದು ಸಣ್ಣ ಗಿಡದ ಗೂಟವೂ ಸಿಗಲಿಲ್ಲ. ಇಲ್ಲಿದ್ದ ಕಲ್ಯಾಣಿ ಕೊಳವನ್ನು ಭೂ ಅತಿಕ್ರಮಿಗಳು ಮಣ್ಣು ಪಾಲು ಮಾಡಿದ್ದರು. ಆಗ ಡಿ.ಮಾದೇಗೌಡರು (ವಿಧಾನಪರಿಷತ್ ಮಾಜಿ ಸದಸ್ಯ) ಸುತ್ತಲ ಪ್ರದೇಶ ಹಸಿರಿನಿಂದ ಕಂಗೊಳಿಸುವಂತೆ ಸಂಕಲ್ಪ ಮಾಡಿದರು.

ಆ ವರ್ಷದ ಮುಂಗಾರು ಮಳೆ ಕಾಲದಲ್ಲಿ ಅರಣ್ಯ ಇಲಾಖೆ ಸಹಯೋಗದಲ್ಲಿ ಹೆಬ್ಬಾಳು ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನದ ಸುತ್ತ ಸಸಿ ನೆಡುವ ಕಾರ್ಯಕ್ರಮ ನಡೆಸಿದರು. ಇಂಥಹ ಕಾರ್ಯಕ್ರಮವನ್ನು ಪ್ರತಿವರ್ಷ ವ್ರತದಂತೆ ಮಾಡಿಕೊಂಡು ಬಂದಿದ್ದರಿಂದ ಹೆಬ್ಬಾಳಿನ ಬಂಜರು ಪ್ರದೇಶದಲ್ಲಿ ಹಸಿರು ವನರಾಶಿ ತಲೆ ಎತ್ತಿತು. ಹೊಯ್ಸಳರ ಕಾಲದ ಹೆಬ್ಬಾಳು ಕೆರೆಯನ್ನು ಭೂ ಅತಿಕ್ರಮಣಕಾರರಿಂದ ತೆರವುಗೊಳಿಸಿದ್ದರಿಂದ ಕೆರೆಯ ಜೀರ್ಣೋದ್ಧಾರವಾಗಿ, ಕೆರೆಯ ಸಂರಕ್ಷಣೆಯೂ ಆಯಿತು. ಲಿಂಗಾಂಬುದಿ ಕೆರೆಯ ವನರಾಶಿ ರೂವಾರಿ ಆರ್‌ಎಫ್ಓ ಅಬ್ದುಲ್ ಜಾಫರ್‌ರಿಂದ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದ ಆವರಣದಲ್ಲಿ ನಕ್ಷತ್ರ ರಾಶಿ ವನಗಳನ್ನು ನಿರ್ಮಿಸಲಾಯಿತು. ಇಲ್ಲಿ ನಿರ್ಮಿಸಿರುವ ಸುಮಾರು ಅರ್ಧ ಎಕರೆಯ ನವಗ್ರಹ ವನ, ಸುಮಾರು ಒಂದು ಎಕರೆಯ ರಾಶಿ ಮತ್ತು ನಕ್ಷತ್ರ ವನಗಳೂ ಮತ್ತು ಅವುಗಳ ರಕ್ಷಣೆಗಾಗಿ ನಿರ್ಮಿಸಿರುವ ಸುತ್ತು ಗೋಡೆಗಳು ಆಕರ್ಷಣೀಯ ಹಾಗೂ ಮನಮೋಹಕವಾಗಿವೆ.



ವಾರಭವಿಷ್ಯ

10.9.2023 ರಿಂದ 16.9.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಚಂದ್ರ-ಮಿಥುನ, ಕಟಕ, ಸಿಂಹ, ಕನ್ಯಾ, ಕುಜ-ಕನ್ಯಾ, ಬುಧ-ಸಿಂಹ, ಗುರು-ಮೇಷ, ಶುಕ್ರ-ಕಟಕ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

'ಸಮಯಕ್ಕಾದವನೇ ನೆಂಟ' ನವಗ್ರಹಗಳ ಪರಿಭ್ರಮಣೆ ಅಷ್ಟೊಂದು ಉತ್ತೇಜನಕಾರಿಯಾಗಿಲ್ಲ. ಆರ್ಥಿಕ ಮುಗ್ಗಟ್ಟಿನಿಂದ ಸಾಲ ಮಾಡಬೇಕಾದ ಪರಿಸ್ಥಿತಿ ಬಂದೀತು. ಸಹಾಯ ಯಾವ ಕಡೆಯಿಂದ ಬಂದರೂ ಸ್ವೀಕರಿಸಿ. ಪುಕ್ಕಟೆ ಸಲಹೆಗಳಿಂದ ಏನೂ ಆಗದು. ವಿವೇಚನಾಪೂರ್ವಕವಾಗಿ ನಿರ್ಧಾರ ಕೈಗೊಳ್ಳಿ. ಸರ್ಕಾರಿ ನೌಕರರು ವಾಮಮಾರ್ಗದ ಹಣಕ್ಕೆ ಆಸೆಪಟ್ಟರೆ ತೊಂದರೆ ಗ್ಯಾರಂಟಿ. ವಾರಾಂತ್ಯಕ್ಕೆ ಗುರುಗಳೊಬ್ಬರ ಸಹಾಯ ದೊರೆಯಲಿದೆ. ಶ್ರೀಕುಲದೇವತಾ ದರ್ಶನ. ಶುಭ ಸಂಖ್ಯೆ-8.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಮಿತ್ರರ ಸಮಾಗಮ. ಸ್ನೇಹಕೂಟಗಳು ನಡೆಯುವುವು. ನೂತನ ವಸ್ತ್ರ, ಆಭರಣ ಖರೀದಿಯ ಯೋಗವಿದೆ. ರಾಹುದೇವ ಶಾರೀರಿಕವಾಗಿಯೂ, ಮಾನಸಿಕವಾಗಿಯೂ ಕಾಡಲಿದ್ದಾನೆ. ಮನೆಯಲ್ಲಿ ಪರಸ್ಪರ ಅರಿವಿನ ಕೊರತೆಯಿಂದ ಕಿರಿಕಿರಿಗಳು. ಪಾಲುದಾರಿಕೆ ವ್ಯವಹಾರಗಳು ನಷ್ಟದಲ್ಲಿ ನಡೆಯುವುದು. ಸ್ತ್ರೀಯರು ಕಳ್ಳಕಾಕರಿಂದ ನಿಮ್ಮ ಮಾಂಗಲ್ಯ ಸರ ರಕ್ಷಿಸಿಕೊಳ್ಳಿ. ವಾರಾಂತ್ಯಕ್ಕೆ ಉತ್ಸವಾದಿಗಳಲ್ಲಿ ಭಾಗಿ. ಶ್ರೀದೇವಿ ಉಪಾಸನೆ. ಶುಭ ಸಂಖ್ಯೆ-1.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ಸಪ್ತಾಹದಲ್ಲಿ ಗುರು-ಚಂದ್ರ ಸಂಚಾರ ಶುಭವಿದ್ದು, ನಿಮ್ಮಿಂದ ನೂತನ ಆವಿಷ್ಕಾರಗಳು ಆಗಲಿವೆ. ಸಮೂಹ ಮಾಧ್ಯಮ ವ್ಯಕ್ತಿಗಳಿಗೆ ಸರ್ಕಾರದ ಪುರಸ್ಕಾರ ದೊರೆಯುವ ಸಂಭವವಿದೆ. ಹಣಕಾಸಿನ ಸ್ಥಿತಿಯಲ್ಲಿ ಸುಧಾರಣೆ ಕಂಡುಬರುವುದು. ಮನೆಯಲ್ಲಿ ದೇವತಾಕಾರ್ಯ, ಮಂಗಳ ಕಾರ್ಯಗಳು ನಡೆಯುವುದು. ಬಾಳ ಸಂಗಾತಿಯ ಅನ್ವೇಷಣೆ ಸಫಲವಾಗಲಿದೆ. ನಂಬಿಸಿ ಮೋಸ ಮಾಡುವವರಿಂದ ಜಾಗ್ರತರಾಗಿರಿ. ಶ್ರೀ ವಿಷ್ಣು ಪ್ರಾರ್ಥನೆ. ಶುಭ ಸಂಖ್ಯೆ-2.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

'ಸಂತೃಪ್ತಿಯೇ ಸ್ವರ್ಗ', ಸದ್ಯದ ಪರಿಸ್ಥಿತಿಯಲ್ಲಿ ಇದನ್ನು ಪಾಲಿಸಿಕೊಂಡು ಹೋಗುವುದು ಜಾಣತನ. ಹಣ ಕೈಗೆ ಬಂದರೂ ಹೆಚ್ಚು ಕಾಲ ನಿಲ್ಲದು. ಅನವಶ್ಯಕ ವಿಚಾರಗಳಿಗೆ ಖರ್ಚಾಗುವ ಸಂಭವವೇ ಹೆಚ್ಚು. ಮನೆ ಮಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಇದರಿಂದ ಮುಂದಾಗಬಹುದಾದ ಅನರ್ಥಗಳು ತಪ್ಪಲಿವೆ. ಸ್ತ್ರೀಯರಿಂದ ಮೋಸ ಹೋಗುವ ಸಾಧ್ಯತೆ ಇದೆ. ಎಚ್ಚರಿಕೆಯಿಂದ ಇರಿ. ಆನ್‌ಲೈನ್ ಸ್ನೇಹ ಮಾರಕವಾಗುವುದು. ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-6.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದಾರಂಭಕ್ಕೆ ಹೊಸ ವ್ಯಾಪಾರ ವ್ಯವಹಾರಗಳು ಹುಡುಕಿಕೊಂಡು ಬರಲಿದೆ. ಪುಣ್ಯಕ್ಷೇತ್ರಗಳಿಗೆ ತೀರ್ಥಯಾತ್ರೆಯನ್ನು ಕೈಗೊಳ್ಳುವಿರಿ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ದೈವಾನುಕೂಲವಿದೆ. ಪ್ರಯತ್ನ ಪುರುಷಾಧೀನ, ಫಲ ದೈವಾಧೀನ. ನಿಮ್ಮ ಆತ್ಮವಿಶ್ವಾಸ ಮಟ್ಟ ಉನ್ನತವಾಗಿರುತ್ತದೆ. ಪರೋಪಕಾರ ಬುದ್ಧಿಯಿಂದ ಸಾಮಾಜಿಕ ಮನ್ನಣೆ, ಸಹೋದರರೊಡನೆ ವಿವಾದಗಳು ಉಂಟಾಗಲಿದೆ. ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ-7.

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

'ಉದರ ನಿಮಿತ್ತಂ ಬಹುಕೃತ ವೇಷಂ' ಎನ್ನುವಂತಹ ವ್ಯಕ್ತಿಗಳಿಂದ ವಂಚನೆಗೆ ಗುರಿಯಾಗುವ ಸಾಧ್ಯತೆ ಇರುತ್ತದೆ. ವ್ಯಾಪಾರ ವ್ಯವಹಾರಗಳು ನಿಧಾನಗತಿಯಲ್ಲಿ ಸಾಗಿದರೂ ಲಾಭಕ್ಕೆ ಕೊರತೆ ಇಲ್ಲ. ಕೈಯ್ಯಲ್ಲಿ ಹಣವಿದ್ದಾಗ ಋಣಮುಕ್ತರಾಗಲು ಪ್ರಯತ್ನಿಸಿ. ಅಪರಿಚಿತ ವ್ಯಕ್ತಿಗಳೊಡನೆ, ಕರೆ ಬಂದಾಗ ಹಣಕಾಸಿನ ವ್ಯವಹಾರ ಮಾಡಿ ಕೈ ಸುಟ್ಟುಕೊಳ್ಳದಿರಿ. ವಾಹನ ನಿಧಾನವಾಗಿ ಚಾಲನೆ ಮಾಡಿ, ಎಲ್ಲರಿಗೂ ಕ್ಷೇಮ. ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ-9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಗುರುವಿನುಗ್ರಹದಿಂದ ಅಂದುಕೊಂಡದ್ದು ನಡೆದು ಮಧುರ ಅನುಭವ ನೀಡುತ್ತದೆ. ಈ ವಾರ ನಿಮ್ಮ ಕ್ರಿಯಾಶೀಲತೆ ಉಚ್ಛ ಸ್ತರದಲ್ಲಿದ್ದು ಮನೋಕಾಮನೆಗಳು ಈಡೇರುವುದು. ಎಲ್ಲಾ ಕಾರ್ಯಗಳನ್ನು ಶ್ರದ್ಧೆ, ನಿಸ್ಪೃಹತೆಯಿಂದ ಮಾಡಿ. ಉತ್ತರ ಸಹವಾಸ ಹಾಗೂ ಸಂತ ಜನರ ಭೇಟಿಯಿಂದ ಮಾನಸಿಕ ದುಗುಡತೆ ನಿವಾರಣೆ ಆಗುವುದು. ರಾಹು-ಕೇತು ಗ್ರಹ ಅಶುಭರಿದ್ದು ಅಸ್ವಸ್ಥತೆ ಹಾಗೂ ಅಪಘಾತ ಸಂಭವಿಸಬಹುದು. ಶ್ರೀ ಚಾಮುಂಡೇಶ್ವರಿ ಆರಾಧನೆ. ಶುಭ ಸಂಖ್ಯೆ-7.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಈ ವಾರದ ಆದಿಭಾಗಕ್ಕೆ ನಿಮ್ಮ ಕೆಲಸವೆಲ್ಲ ಏಕಾಂಗಿ ಹೋರಾಟ ಹಾಗೂ ಅರಣ್ಯರೋದನವೆನಿಸುವುದು. ದುಡುಕಿ ನಡೆಯಲು ಗ್ರಹಗಳು ಪ್ರೇರೇಪಿಸುವರು. ಪರಸ್ಥಳಕ್ಕೆ ತೆರಳುವಾಗ ಹಣ ಹಾಗೂ ಆಭರಣಗಳನ್ನು ಸೂಕ್ತ ರೀತಿಯಲ್ಲಿ ಭದ್ರಪಡಿಸಿ ತೆರಳಿ. ಉದ್ಯೋಗ ಸಂಬಂಧ ಹಿರಿಯ ಅಧಿಕಾರಿಗಳ ಭೇಟಿಯಿಂದ ಸಕಾರಾತ್ಮಕ ಫಲ ದೊರೆಯುವುದು. ರಾಜಕಾರಣಿಗಳಿಗೆ ಸುಯೋಗವಿದೆ. ಆರೋಗ್ಯ ಅಷ್ಟಕ್ಕಷ್ಟೆ. ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಗುರುಕೃಪೆಯಿಂದ ನೀವು ಉನ್ನತ ಸ್ಥಾನವನ್ನು ಅಲಂಕರಿಸುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆತು ಸಂತಸ. ರೆಡಿಮೇಡ್ ವಸ್ತ್ರ, ಫ್ಯಾಷನ್ ಡಿಸೈನ್ ವ್ಯಾಪಾರ ಭರಾಟೆಯಿಂದ ಸಾಗುವುದು. ಹಲವರಿಗೆ ಮಧುಚಂದ್ರಕ್ಕೆ ತೆರಳುವ ಸಾಧ್ಯತೆ ಇದೆ. ಧರ್ಮಕ್ಷೇತ್ರಗಳ ಭೇಟಿಯಿಂದ ಮನಸ್ಸು ಪ್ರಫುಲ್ಲಗೊಳ್ಳುವುದು. ಮಹತ್ವದ ವಿಚಾರಗಳಲ್ಲಿ ಅವಸರ ಮಾಡದೆ ನಿರ್ಧಾರ ಕೈಗೊಳ್ಳಿ. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ನಿಮ್ಮ ಪೂರ್ವಯೋಜಿತ ಕೆಲಸಗಳು ಮುಂದೆ ಸಾಗುತ್ತಿಲ್ಲ. ನಿಮ್ಮ ಹಳೆಯ ಪ್ರಾಮಿಸ್‌ಗಳು ಕಾರ್ಯರೂಪಕ್ಕೆ ತರಲಾಗುತ್ತಿಲ್ಲ. ಈ ವಾರ ನೀವು 'ಬಡವ ನೀ ಮಡಗಿದಂತೆ ಇರು' ಎಂಬ ನಾಣ್ನುಡಿಯಂತೆ ಇದ್ದರೆ ಉತ್ತಮ. ಧೃತಿಗೆಡುವ ಅಗತ್ಯವಿಲ್ಲ. ವಾರ ಮಧ್ಯೆ ಚಂದ್ರನ ಶುಭದೃಷ್ಟಿ ಉತ್ತೇಜನಕಾರಿಯಾಗಿರುತ್ತದೆ. ಹಿರಿಯರೊಬ್ಬರ ಸಹಾಯದಿಂದ ಸಮಸ್ಯೆ ಪರಿಹಾರ. ಜೀವನ ಚೆಸ್ ಆಟದಂತೆ ಬರೀ ಮುಂದೆ ಅಲ್ಲ ಹಿಂದಕ್ಕೂ ಚಲಿಸಬೇಕಾಗುತ್ತದೆ. ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಹಣಕಾಸಿನ ವ್ಯವಹಾರದಲ್ಲಿ ಮುಂಜಾಗ್ರತೆ ಇರಲಿ. ಅನ್ಯಥಾ ಮೋಸಕ್ಕೆ ಒಳಗಾಗುವಿರಿ. ಮಾಡುವ ಮುಖ್ಯ ಕೆಲಸಗಳಿಗೆ ಅಡಚಣೆಗಳು ಉಂಟಾಗಬಹುದು. ನೆರೆಹೊರೆಯವರ ಸಹಾಯಹಸ್ತವನ್ನು ತಿರಸ್ಕರಿಸದಿರಿ. ವಾರಾಂತ್ಯಕ್ಕೆ ಸುಖ ಭೋಜನ, ಹಾಸಿಗೆ ಸುಖ, ಮನೆ ಮಂದಿಯೊಡಗೂಡಿ ಧರ್ಮಕ್ಷೇತ್ರ ಸಂದರ್ಶನ, ಮನೆಗೆ ನೆಂಟರಿಷ್ಟರ ಆಗಮನ. ಅವರ ಉಪಚಾರಕ್ಕೆ ಹೇರಳ ಹಣ ಖರ್ಚು. ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನಿಮ್ಮ ಸುತ್ತಮುತ್ತ ಹರ್ಷಪೂರ್ಣ ಘಟನೆಗಳು ಜರುಗುವುದರಿಂದ ನಿಮ್ಮ ಮನೋಸ್ಥೈರ್ಯವೂ ವೃದ್ಧಿಸಲಿದೆ. ಬುದ್ಧಿ ಕುಶಲತೆಯಿಂದ ನಿಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. 'ಸಜ್ಜನರ ಸಂಘವದು ಹೆಜ್ಜೇನು ಸವಿದಂತೆ' ಎಂಬ ಗಾದೆಯಂತೆ ಉತ್ತಮ ಸಹವಾಸದಿಂದ ಕಾರ್ಯ ಸಾಧನೆ ಆಗುತ್ತದೆ. ರಾಹು-ಕೇತುಗಳ ಸುಳಿಯಲ್ಲಿ ಸಿಲುಕಿದ್ದೀರಿ. ಕುಟುಂಬ ಸಮಸ್ಯೆಗಳನ್ನು ಮನೆ ಒಳಗೇ ಪರಿಹರಿಸಿಕೊಂಡರೆ ಒಳಿತು. ಶ್ರೀಸಾಯಿಬಾಬಾ ದರ್ಶನ. ಶುಭ ಸಂಖ್ಯೆ-8.

ಮೈಮುಲ್‌ನಿಂದ 120 ಕೋಟಿ ರೂ. ವೆಚ್ಚದಲ್ಲಿ ಯುಹೆಚ್‌ಟಿ ಪ್ಲಾಂಟ್

ಅಂಕನಹಳ್ಳಿ ಸಮಾಲೋಚನಾ ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಪ್ರಸನ್ನ ಪ್ರಕಟ

ಚುಂಚನಕಟ್ಟೆ, ಸೆ.9– ಮೈಮುಲ್ ವತಿಯಿಂದ 120 ಕೋಟಿ ರೂ. ವೆಚ್ಚದಲ್ಲಿ ಯುಹೆಚ್‌ಟಿ ಪ್ಲಾಂಟ (ಹಾಲಿನ ಶೇಖರಣಾ ಕೇಂದ್ರ–ಅಲ್ಟ್ರಾ ಹೈ ಟೆಂಪರೇಚರ್)ನ್ನು ನಿರ್ಮಾಣ ಮಾಡಲಾಗುವುದು ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ತಿಳಿಸಿದ್ದಾರೆ.

ಸಾಲಿಗ್ರಾಮ ತಾಲೂಕಿನ ಅಂಕನಹಳ್ಳಿ ಗ್ರಾಮದಲ್ಲಿ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಹಾಗೂ ಅಂಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಭಾರತದ ಕ್ಷೀರಕ್ರಾಂತಿಯ ಪಿತಾಮಹ ಡಾ.ವರ್ಗಿಸ್ ಕುರಿಯನ್ ಅವರ 11ನೇ ಪುಣ್ಯಸ್ಮರಣೆ ಕಾರ್ಯಕ್ರಮ ಹಾಗೂ ತಾಲೂಕು ಮಟ್ಟದ ಅಧಿಕೃತ ನಂದಿನಿ ಹಾಲು ಮಾರಾಟಗಾರರ ಸಮಾಲೋಚನಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.




ಹಾಲು ಉತ್ಪಾದಕರ ಮಕ್ಕಳು ನಗರ ಪ್ರದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ಸುಮಾರು 250ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯವನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಮತ್ತೊಮ್ಮೆ ಪುನರುಚ್ಚರಿಸಿದರು.

ಹಾಲು ಉತ್ಪಾದಕರುಗಳಿಗೆ ನೇರವಾಗಿ ಅದರ ಲಾಭವು ದೊರೆಯಬೇಕು ಎಂಬ ಉದ್ದೇಶದಿಂದ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ರೈತರುಗಳು ಹೈನುಗಾರಿಕಾ ಚಟುವಟಿಕೆಯಲ್ಲಿ ಆಧುನಿಕ ಮತ್ತು ವೈಜ್ಞಾನಿಕ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದ ಅವರು, ಭಾರತದ ಕ್ಷೀರಕ್ರಾಂತಿಯ ಪಿತಾಮಹ ಡಾ.ವರ್ಗೀಸ್ ಕುರಿಯನ್ ಅವರು ಹಾಕಿಕೊಟ್ಟಿರುವ ಸನ್ಮಾರ್ಗದಲ್ಲಿ ಎಲ್ಲರೂ ನಡೆಯಬೇಕು ಎಂದು ಕರೆ ನೀಡಿದರು.

ಮೈಮುಲ್‌ನ ಹಾಲಿ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರಾದ ಎ.ಟಿ.ಸೋಮಶೇಖರ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಪಶುಗಳ ಆರೋಗ್ಯ ತಪಾಸಣಾ ಶಿಬಿರ, ರೈತರುಗಳಿಗೆ ಹೈನುಗಾರಿಕೆಯ ಬಗ್ಗೆ ತರಬೇತಿ ಶಿಬಿರ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕರುಗಳಾದ ಎ.ಟಿ.ಸೋಮಶೇಖರ್, ಕೆ.ಈರೇಗೌಡ, ಕೆ.ಎಸ್.ಕುಮಾರ್, ಚೆಲುವರಾಜ್, ಓಂ ಪ್ರಕಾಶ್, ರಾಜೇಂದ್ರಪ್ಪ, ದಾಕ್ಷಾಯಿಣಿ, ನೀಲಾಂಬಿಕೆ, ಮಾಜಿ ನಿರ್ದೇಶಕಿ ವಿಜಯಲಕ್ಷ್ಮಮ್ಮ, ವ್ಯವಸ್ಥಾಪಕ ನಿರ್ದೇಶಕ ವಿಜಯ್ ಕುಮಾರ್, ಡಾ.ಕೃಷ್ಣಾರೆಡ್ಡಿ, ಡಾ.ಸಣ್ಣತಮ್ಮೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಹಳ್ಳಿ ಸೋಮಶೇಖರ್, ಹಿರಿಯ ಸಹಕಾರಿ ಬಸವರಾಜಪ್ಪ, ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘದ ಅಧ್ಯಕ್ಷ ಜಿ.ಕೆ.ಮಹದೇವ್, ಎ.ಟಿ.ಸತೀಶ್, ರಂಗಪ್ಪ, ವಿರಲೆ ಹೊಸಟಿ ರಘು, ಮೃತ್ಯುಂಜಯ, ಪ್ರಕಾಶ್, ದುಶ್ಯಂತ್, ಮೈಮುಲ್‌ನ ಅಧಿಕಾರಿಗಳು, ಆಡಳಿತ ಮಂಡಳಿಯವರು, ಹಾಲಿನ ಡೇರಿಗಳ ಅಧ್ಯಕ್ಷರು, ಆಡಳಿತ ಮಂಡಳಿಯವರು, ಕಾರ್ಯದರ್ಶಿಗಳು, ಹಾಲು ಉತ್ಪಾದಕರುಗಳು, ರೈತರುಗಳು ಸೇರಿದಂತೆ ಹಲವರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಕಿಕ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಥಾ ಚಿತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜವಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜವಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.20ಕ್ಕೆ, ಮ.1.10ಕ್ಕೆ, ರಾ.7.15ಕ್ಕೆ, ರಾ.10.05ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ಲೂಸಿಯಾ (ಕ): ಬೆ.10.05ಕ್ಕೆ, ಜೈಲರ್ (ಕ): ಮ.12.45ಕ್ಕೆ, ಜೈಲರ್ (ತ): ಮ.3.55ಕ್ಕೆ, ಖುಷಿ (ತೆ): ರಾ.7.10ಕ್ಕೆ, ಜವಾನ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಬೆ.10.55ಕ್ಕೆ, ರಾ.10.10ಕ್ಕೆ, ಟೋಬಿ (ಕ): ಮ.1.10ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಸಂ.4.05ಕ್ಕೆ, ಜವಾನ್ (ಹಿಂ): ರಾ.7ಕ್ಕೆ
ಸ್ಕ್ರೀನ್ 4	ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ಸಂ.6.55ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಬಿನಿ ಹಿನ್ನೀರಿನ ಬಳಿ ವಿದ್ಯುತ್ ಸ್ಪರ್ಶದಿಂದ ಕಾರ್ಮಿಕ ಸಾವು

ಹೆಚ್.ಡಿ.ಕೋಟೆ, ಸೆ.9– ತಾಲೂಕಿನ ಕಬಿನಿ ಹಿನ್ನಿರಿನ ಬಳಿ ನಿರ್ಮಾಣ ಹಂತದಲ್ಲಿದ್ದ ರೆಸಾರ್ಟ್ ಒಂದರಲ್ಲಿ ಕಾರ್ಮಿಕನೊಬ್ಬ ವಿದ್ಯುತ್ ಪ್ರವಹಿಸಿ ಮೃತಪಟ್ಟಿರುವ ಘಟನೆ ನಡೆದಿದೆ.



ಪಶ್ಚಿಮಬಂಗಾಳದ ಕೊಲ್ಕತ್ತಾ ನಿವಾಸಿ ಪ್ರಕಾಶ್ (21) ಮೃತಪಟ್ಟ ಯುವಕ. ತಾಲೂಕಿನ ಬಿದರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ತೆರಣಿಮಂಟಿ ಗ್ರಾಮದ ಕಬಿನಿ ಹಿನ್ನೀರಿನ ಬಳಿ ನಿರ್ಮಾಣ ಹಂತದ ರೆಸಾರ್ಟ್‌ನಲ್ಲಿ ಯುವಕ ಮೃತಪಟ್ಟಿರುವುದಾಗಿ ಸರಗೂರು ಪೊಲೀಸ್ ಠಾಣೆಗೆ ಮೃತನ ಸಂಬಂಧಿ ದೂರು ನೀಡಿದ್ದಾರೆ.

ಶುಕ್ರವಾರ ಪ್ರಕಾಶ್ ಎಂಬ ಯುವಕನಿಗೆ ವಿದ್ಯುತ್ ಪ್ರವಹಿಸಿ ಮೃತಪಟ್ಟ ಹಿನ್ನೆಲೆಯಲ್ಲಿ ಆತನನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ತರಲಾಗಿತ್ತು. ಈ ಸಂಬಂಧ ರೆಸಾರ್ಟ್ ಮಾಲೀಕ ಸುನೀಲಮ್ಮ ಅವರೊಂದಿಗೆ ಮಾತುಕತೆ ನಡೆಸಿ ಮೃತ ವ್ಯಕ್ತಿಗೆ ನಾಲ್ಕು ಲಕ್ಷ ಪರಿಹಾರ ಹಾಗೂ ಶವವನ್ನು ಪಶ್ಚಿಮಬಂಗಾಳಕ್ಕೆ ತಲುಪಿಸುವ ಜವಾಬ್ದಾರಿಯನ್ನು ಸ್ಥಳೀಯ ಮುಖಂಡರ ನೇತೃತ್ವದಲ್ಲಿ ವಹಿಸಲಾಯಿತು. ಆನಂತರ ಸರಗೂರು ಪೊಲೀಸ್ ಠಾಣೆಗೆ ಮೃತನ ಸಂಬಂಧಿ ಮೂಲಕ ವಿದ್ಯುತ್ ಪ್ರವಹಿಸಿ ಮೃತಪಟ್ಟಿರುವ ಬಗ್ಗೆ ದೂರು ದಾಖಲಿಸಲಾಯಿತು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಸ್ಥಳಕ್ಕೆ ಚೆಸ್ಕಾಂ ಇಲಾಖೆಯ ಅಧಿಕಾರಿಗಳು ಬಾರದೆ ಇರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಸಾಲಿಗ್ರಾಮ: ಕಾಳಗದಲ್ಲಿ ಗಂಡು ಚಿರತೆ ಸಾವು

ಭೇರ್ಯ, ಸೆ.9– ಎರಡು ಚಿರತೆಗಳ ನಡುವಿನ ಕಾಳಗದಿಂದ ಗಂಡು ಚಿರತೆಯೊಂದು ಸಾವನ್ನಪ್ಪಿರುವ ಘಟನೆ ಸಾಲಿಗ್ರಾಮ ತಾಲೂಕಿನ ಬೆಟ್ಟಹಳ್ಳಿ ಗ್ರಾಮದಲ್ಲಿ ನಡೆದಿದೆ ಎಂದು ಕೆ.ಆರ್.ನಗರ ತಾಲೂಕು ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಎಂ.ಆರ್.ರಶ್ಮಿ ತಿಳಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಳೆದೆರೆಡು ದಿನದ ಹಿಂದೆ ಚಿರತೆಗಳು ಕಾಳಗ ಮಾಡಿಕೊಂಡಿರುವ ಕಾರಣ ಚಿರತೆ ಮೃತಪಟ್ಟಿದೆ ಎಂದು ಗ್ರಾಮಸ್ಥರೊಬ್ಬರು ತಿಳಿಸಲಾಗಿ ಸ್ಥಳಕ್ಕೆ ಸಿಬ್ಬಂದಿಯೊಡನೆ ಭೇಟಿ ಪರಿಶೀಲಿಸಿ ನಂತರ ಇಲಾಖೆಯ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಲಾಯಿತು. ಕೂಡಲೇ ಹುಣಸೂರು ಉಪವಿಭಾಗದ ಸಹಾಯಕ ಉಪ ಸಂರಕ್ಷಣಾಧಿಕಾರಿಗಳ ತಂಡ ಪರಿಶೀಲಿಸಲಾಗಿ ಕಾಳಗದಿಂದ ಚಿರತೆ ಮೃತಪಟ್ಟಿರುವುದು ದೃಢವಾಗಿದ್ದು, ಸ್ಥಳಕ್ಕೆ ಪಶು ಸಂಗೋಪನೆ ಇಲಾಖೆಯ ವೈದ್ಯರಾದ ಡಾ.ಸುರೇಂದ್ರ ಅವರನ್ನು ಕರೆಯಿಸಿ ಸ್ಥಳದಲ್ಲಿಯೇ ಚಿರತೆಯ ಪಂಚನಾಮೆ ನಡೆಸಿ ನಂತರ ಮರಣೋತ್ತರ ಪರೀಕ್ಷೆ ಮಾಡಿಸಿ ಅಂತ್ಯಸಂಸ್ಕಾರ ಮಾಡಲಾಯಿತು ಎಂದು ತಿಳಿಸಿದ್ದಾರೆ. ಈ ಸಂಬಂಧ ಉಪವಲಯ ಅರಣ್ಯಾಧಿಕಾರಿ ಕುಮಾರ್, ಗಸ್ತು ಅರಣ್ಯಪಾಲಕರಾದ ಕುಮಾರ ನಾಯಕ್, ಸ್ವಾಮಿ, ಚಿರತೆ ಕಾರ್ಯಪಡೆ ಸದಸ್ಯರು, ಬೆಟ್ಟಹಳ್ಳಿ ಗ್ರಾಮದ ಅರುಣ್ ಇದ್ದರು.



ಕರ್ನಾಟಕ ಛಾಯಾಚಿತ್ರಗಳ ಸಂಘದ ವತಿಯಿಂದ ಬೆಂಗಳೂರು ಅರಮನೆ ಆವರಣದಲ್ಲಿ ಆಯೋಜಿಸಿದ್ದ ವಸ್ತು ಪ್ರದರ್ಶನದಲ್ಲಿ ಹೆಗ್ಗಡದೇವನಕೋಟೆ ಮತ್ತು ಸರಗೂರು ತಾಲೂಕಿನ ಛಾಯಾಗ್ರಾಹಕರ ಸಂಘದ ಸದಸ್ಯ ಪ್ರಕಾಶ್ ಎಚ್.ಕೆ. ಅವರಿಗೆ ಜಿಲ್ಲಾ ಸಾಧಕರ ಪ್ರಶಸ್ತಿ, ನಂದಕುಮಾರ್ ಶೈಲಿ ಮತ್ತು ಮನೋಜ್ ಕೋಟೆಯವರಿಗೆ ಗುರುವಂದನಾ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು. ಈ ವೇಳೆ ಕರ್ನಾಟಕ ರಾಜ್ಯ ಛಾಯಾಚಿತ್ರ ಸಂಘದ ಅಧ್ಯಕ್ಷ ಪರಮೇಶ್ ಸುಬ್ಬಯ್ಯ, ಹೊಮ್ಮರಗಳ್ಳಿ ವಾದಿರಾಜು, ವೆಂಕಿ ಕೋಟೆ, ರವಿಕುಮಾರ್, ಆರಾಧ್ಯ, ಸ್ವಾಮಿ ನಾಯಕ, ರಘುರಾಮ್, ಮೋಹನ್ ಕುಮಾರ್, ಗುರು ಆಚಾರ್, ಹರೀಶ್ ಗೌಡ, ನಂಜುಂಡ ಕೋಡ್ಸಿ ಹಾಗೂ ಸಂಘದ ಸದಸ್ಯರು ಹಾಜರಿದ್ದರು.

ಮುಂಬರುವ ನಾಲ್ಕು ವರ್ಷಗಳಲ್ಲಿ ಐಟಿ, ಇಂಜಿನಿಯರ್‌ಗಳಿಗೆ ದುಪ್ಪಟ್ಟು ಉದ್ಯೋಗಾವಕಾಶ

ಪುನಶ್ಚೇತನ ಶಿಬಿರದಲ್ಲಿ ಡೆಸಾಲ್ಟ್, ಸಿಸ್ಟಂ ಸೆಲ್ಯೂಷನ್ ಲ್ಯಾಬ್ ಸಿಇಒ ಭರವಸೆ

ನಂಜನಗೂಡು, ಸೆ.9– ದೇಶದಲ್ಲಿ ಕೈಗಾರಿಕಾ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಾಣವಾಗಿದೆ, ಮುಂದಿನ 4 ವರ್ಷಗಳಲ್ಲಿ ಐಟಿ, ಇಂಜಿನಿಯರ್‌ಗಳಿಗೆ ದುಪ್ಪಟ್ಟು ಉದ್ಯೋಗಾವಕಾಶಗಳು ಲಭ್ಯವಾಗಲಿವೆ ಎಂದು ಡೆಸಾಲ್ಟ್ ಸಿಸ್ಟಂ ಸಲ್ಯೂಷನ್ ಲ್ಯಾಬ್‌ನ ಸಿಇಒ ಸುದರ್ಶನ ಮೊಗಸಾಲೆ ತಿಳಿಸಿದರು. ತಾಲೂಕಿನ ತಾಂಡವಪುರ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಪ್ರಥಮ ವರ್ಷದ ಇಂಜಿನಿಯರ್ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಪುನಶ್ಚೇತನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಎಲೆಕ್ಟ್ರಾನಿಕ್ಸ್ ಉದ್ಯಮದಲ್ಲಿ ಚಿಪ್ ಹಾಗೂ ಸರ್ಕ್ಯೂಟ್ ಬೋರ್ಡ್ ತಯಾರಿಕೆ ಹೆಚ್ಚಲಿದೆ, ದೇಶ ಸೈನ್ಯಕ್ಕೆ ಅಗತ್ಯವಾದ ಪರಿಕರಗಳ ತಯಾರಿಕೆಯಲ್ಲಿ ಸಾಯತ್ತತೆ ಸಾಧಿಸಲಿರುವುದರಿಂದ ಮೆಕಾನಿಕ್ ವಿಭಾಗಕ್ಕೆ ಹೆಚ್ಚಿನ ಬೇಡಿಕೆ ಉಂಟಾಗಲಿದೆ, ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗಲಿವೆ, ಸ್ಟಾರ್ಟಫ್ ತಯಾರಿಕೆಯಲ್ಲಿ ದೇಶ ಪ್ರಪಂಚದಲ್ಲಿ 3ನೇ ಸ್ಥಾನ ಹೊಂದಿದೆ, ವಿದ್ಯಾರ್ಥಿಗಳು ಕಂಪನಿಗಳ ಉದ್ಯೋಗಗಳನ್ನು ಮಾತ್ರ ಗುರಿಯಾಗಿಟ್ಟುಕೊಳ್ಳದೆ ಸ್ವತಃ ಸ್ಟಾರ್ಟಫ್ ತಯಾರಿಕೆಯಲ್ಲಿ ತೊಡಗಬೇಕು ಎಂದು ಕರೆ ನೀಡಿದರು.

ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ವೈ.ಟಿ.ಕೃಷ್ಣೇಗೌಡ ಮಾತನಾಡಿ, ನಮ್ಮ ಕಾಲೇಜು ರಾಜ್ಯದಲ್ಲೇ ಉತ್ತಮ ಫಲಿತಾಂಶ ಹೊಂದಿದೆ, ನಮ್ಮ ವಿದ್ಯಾರ್ಥಿಗಳಿಗೆ ದೇಶ,ವಿದೇಶದ ಉತ್ತಮ ಕಂಪನಿಗಳಲ್ಲಿ ಉದ್ಯೋಗವಕಾಶ ದೊರೆತಿದೆ, ನಮ್ಮ 11 ವಿದ್ಯಾರ್ಥಿಗಳು ಈ ವರ್ಷ ಯೂರೋಪ್‌ನಲ್ಲಿ ಇಂಟರ್ನ್‌ಷಿಪ್ ತರಬೇತಿ ಪಡೆಯಲು ಆಯ್ಕೆಯಾಗಿದ್ದಾರೆ, ಸಂಸ್ಥೆ ಹೆಚ್ಚಿನ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳನ್ನು ಇಂಜಿನಿಯರ್‌ಗಳಾಗಿ ತಯಾರು ಮಾಡುವ ಗುರಿ ಹೊಂದಿದೆ. ಪ್ರಥಮ ವರ್ಷದ ಇಂಜಿನಿಯರಿಂಗ್‌ನಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಈ ವರ್ಷದಿಂದ ಶೇ. 15 ರಷ್ಟು ಶುಲ್ಕದಲ್ಲಿ ರಿಯಾಯಿತಿ ನೀಡಿ ಪ್ರೋತ್ಸಾಹಿಸಲು ಸಂಸ್ಥೆ ನಿರ್ಧರಿಸಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಿ.ಎಚ್.ಡಿ ಪದವಿ ಪಡೆದ ಕಾಲೇಜಿನ ಪ್ರೊ ಶಂಕರ ಉಪಾಧ್ಯಾಯ, ಪ್ರೊ.ಸ್ವರ್ಣಲತಾ, ಪ್ರೊ.ಅಜೇಯ್ ಕುಮಾರ್, ಪ್ರೊ. ವೇಣುಗೋಪಾಲ್ ಅವರನ್ನು ನೆನಪಿನ ಕಾಣಿಕೆ ನೀಡಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ ಟ್ರಸ್ಟ್ ಅಧ್ಯಕ್ಷ ಡಾ. ಎಸ್.ಮುರುಳಿ, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಹಾಗೂ ಟ್ರಸ್ಟ್ ಉಪಾಧ್ಯಕ್ಷ ಡಾ.ಜಿ.ಹೇಮಂತ್ ಕುಮಾರ್, ಡಾ.ಟಿ.ವಾಸುದೇವ್, ಡಾ.ಡಿ.ಎಸ್.ಗುರು, ಡಾ.ಬಿ.ಜಿ.ನಾಗೇಶ್ ಕುಮಾರ್, ಡಾ.ಎಚ್.ಕೆ.ಚೇತನ್, ಪ್ರೊ ಸಲಾಮತ್, ರಂಜಿತ, ನಾಗೇಂದ್ರ ಪ್ರಸಾದ್, ಸ್ವರ್ಣ ಲತಾ, ವೆಂಕಟೇಗೌಡ ನಾಗೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

ನಂಜನಗೂಡು ತಾಲೂಕಿನ ತಾಂಡವಪುರ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಪ್ರಥಮ ವರ್ಷದ ಇಂಜಿನಿಯರ್ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಪುನಶ್ಚೇತನ ಕಾರ್ಯಕ್ರಮವನ್ನು ಡೆಸಾಲ್ಟ್ ಸಿಸ್ಟಂ ಸಲ್ಯೂಷನ್ ಲ್ಯಾಬ್‌ನ ಸಿ.ಇ.ಒ ಸುದರ್ಶನ ಮೊಗಸಾಲೆ ಉದ್ಘಾಟಿಸಿದರು. ಡಾ.ಎಸ್. ಮುರುಳಿ, ವೈ.ಟಿ.ಕೃಷ್ಣೇಗೌಡ ಇದ್ದಾರೆ.

ಡ್ರಮ್ ಸೀಡರ್ ವಿಧಾನ ಭತ್ತದ ನಾಟಿಯಿಂದ ರೈತರಿಗೆ ಅನುಕೂಲ

ಹುಣಸೂರು, ಸೆ.9– ಡ್ರಮ್ ಸೀಡರ್ ವಿಧಾನದಲ್ಲಿ ಭತ್ತದ ನಾಟಿಯನ್ನು ಮಾಡುವುದರಿಂದ ಶೇ. 20 ರಿಂದ 30 ರಷ್ಟು ಭತ್ತದ ಇಳುವರಿ ಹಾಗೂ ಶೇ.20 ರಿಂದ 25 ರಷ್ಟು ನೀರು ನಿರ್ವಹಣೆಯನ್ನು ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಐಟಿಸಿ/ಎಂಎಸ್‌ಕೆ ಮತ್ತು ಔಟ್‌ರೀಚ್ ಸಂಸ್ಥೆಯ ಕೃಷಿ ಬೇಸಾಯ ತಜ್ಞರಾದ ವಿಕಾಸ ಆರ್ ಗಸ್ತಿ ರೈತರಿಗೆ ಸಲಹೆ ನೀಡಿದರು.



ಇಂದು ತಾಲೂಕಿನ ಕಣಗಾಲು ಮತ್ತು ಹೀಕ್ಯಾತನಹಳ್ಳಿ, ತೋಂಡಳು ಗ್ರಾಮದಲ್ಲಿ ಐಟಿಸಿ/ಎಂಎಸ್‌ಕೆ ಮತ್ತು ಔಟ್‌ರೀಚ್ ಏರ್ಪಡಿಸಿದ್ದ ಡ್ರಮ್ ಸೀಡರ್ ವಿಧಾನದಲ್ಲಿ ಭತ್ತದ ನಾಟಿಯನ್ನು ಉದ್ಘಾಟಿಸಿ ಸಾಮಾನ್ಯವಾಗಿ ನಾಟಿ ಪದ್ಧತಿಯಲ್ಲಿ ಸಸಿಮಡಿಯಿಂದ ಪೈರು ಕೀಳುವುದರಿಂದ ಬೇರುಗಳಿಗೆ ಸ್ವಲ್ಪ ಹಾನಿ ಉಂಟಾಗುತ್ತದೆ. ಪೈರನ್ನು ಮುಖ್ಯಭೂಮಿಗೆ ನಾಟಿ ಮಾಡಿದಾಗ ಬೆಳೆಯು ಭೂಮಿಗೆ ಹೊಂದಿಕೊಳ್ಳಲು 10 ರಿಂದ 15 ದಿನಗಳ ಕಾಲ ಬೇಕಾಗುತ್ತದೆ ಹಾಗೂ ಬೆಳವಣಿಗೆಯು ಕುಂಠಿತವಾಗುತ್ತದೆ. ಆದರೆ ಡ್ರಮ್ ಸೀಡರ್ ಬಳಸಿ ಭತ್ತವನ್ನು ನೇರವಾಗಿ ಮುಖ್ಯಭೂಮಿಗೆ ಬಿತ್ತನೆ ಮಾಡುವುದರಿಂದ ಬೆಳವಣಿಗೆ ಕುಂಠಿತವಾಗುವುದನ್ನು ತಡೆಗಟ್ಟಬಹುದು ಎಂದರು.

ಔಟ್‌ರೀಚ್ ಸಂಸ್ಥೆಯ ಎನ್.ಆರ್.ಎಂ ಯೋಜನಸಮನ್ವಯಾಧಿಕಾರಿ ನಂಜುಂಡಸ್ವಾಮಿ ಮಾತನಾಡಿ, ಡ್ರಮ್ ಸೀಡರ್ ಬಳಕೆಯಿಂದ ಭತ್ತದ ನೇರ ಬಿತ್ತನೆ ಸರಿಯಾದ ಸಮಯಕ್ಕೆ ಆಗುತ್ತದೆ. ಭತ್ತದ ಸಸಿ ಮಾಡಿ ಹಾಗೂ ನಾಟಿ ಆಳುಗಳ ಅವಶ್ಯಕತೆ ಇರುವುದಿಲ್ಲ. ಈ ವಿಧಾನದಲ್ಲಿ ಒಬ್ಬ ವ್ಯಕ್ತಿ 4 ಗಂಟೆಯಲ್ಲಿ 1 ಎಕರೆಗೆ ನಾಟಿ ಮಾಡುವುದರಿಂದ ಖರ್ಚು ಕಡಿಮೆ ಮಾಡುವುದರ ಜೊತೆಗೆ ಶೇಕಡ 60 ರಷ್ಟು ಬೀಜವನ್ನು ಉಳಿತಾಯ ಮಾಡಬಹುದು ಎಂದರು.

ಔಟ್‌ರೀಚ್ ಸಂಸ್ಥೆಯ ಹಿರಿಯ ಸಮುದಾಯ ಸಂಘಟಕರಾದ ಪ್ರಕಾಶ.ಎಂ, ಹಿರಿಯ ಸಮುದಾಯ ಸಂಘಟಕರಾದ ರಂಗಸ್ವಾಮಿ ಮಾತನಾಡಿದರು. ಈ ಸಂದರ್ಭದಲ್ಲಿ ಕಣಗಾಲಮ್ಮ ಸಮಿತಿ ಅಧ್ಯಕ್ಷ ರಾಘವೇಂದ್ರಕೆ.ಪಿ, ಸದಸ್ಯರಾದ ಮಹೇಶಕುಮಾರ್, ವೆಂಕಟೇಶ, ಹರೀಶ, ಪ್ರಗತಿಪರ ರೈತರಾದ ಪ್ರಭು ಸ್ವಾಮಿ, ಅರ್ದಶಕುಮಾರ, ಔಟ್‌ರೀಚ್ ಸಂಸ್ಥೆಯ ಕಿರಿಯ ಸಮುದಾಯ ಸಂಘಟಕ ರಾಜು, ಸೇರಿದಂತೆ 20 ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ಚುಂಚನಕಟ್ಟೆಯಲ್ಲಿ ವೈಭವದ ಚಿಕ್ಕಜಾತ್ರೆ

ಲಕ್ಷ್ಮಣ ಸಹಿತ ಸೀತಾರಾಮರ ಭವ್ಯ ಮೆರವಣಿಗೆ

ಚುಂಚನಕಟ್ಟೆ, ಸೆ.9– ಪುರಾಣ ಪ್ರಸಿದ್ಧ ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಕಡೇ ಶ್ರಾವಣ ಶನಿವಾರದ ಪ್ರಯುಕ್ತ ಇಂದು ಚಿಕ್ಕಜಾತ್ರೆ ಅದ್ದೂರಿಯಾಗಿ ಜರುಗಿತು. ಜಾತ್ರಾ ಪ್ರಯುಕ್ತ ದೇವಾಲಯದ ಹೊರಆವರಣದಲ್ಲಿ ಚಿಕ್ಕ ತೇರಿನಲ್ಲಿ ಲಕ್ಷ್ಮಣ ಸಮೇತ ಸೀತಾ ರಾಮ ಮೂರ್ತಿಗಳ ಭವ್ಯ ಮೆರವಣಿಗೆ ಮಾಡಿ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿ ಜೈಶ್ರೀರಾಮ್, ಗೋವಿಂದ ಘೋಷವಾಕ್ಯದೊಂದಿಗೆ ಆರಂಭ ಮಾಡಲಾಯಿತು.




ಇದಕ್ಕೂ ಮುಂಚೆ ದೇವರ ಮೂರ್ತಿಗಳನ್ನು ಸ್ವಚ್ಛಗೊಳಿಸಿ ಬೆಳಗಿನಿಂದಲೇ ವಿವಿಧ ಪೂಜಾ ಕೈಂಕರ್ಯಗಳನ್ನು ಏರ್ಪಡಿಸಲಾಗಿತ್ತು. ಶ್ರಾವಣ ಮಾಸದಲ್ಲಿ ಮದುವೆಯಾಗುವ ನವ ವಧು–ವರರು ಬಂದು ದೇವರ ಆಶೀರ್ವಾದ ಬೇಡುವುದು ಇಲ್ಲಿ ಪ್ರತೀತಿ ಆಗಿದ್ದು, ಅಲ್ಲದೇ ಮದುವೆ ಭಾಗ್ಯ, ಸಂತಾನ ಭಾಗ್ಯವನ್ನು ಅರಸಿ ವಿಶೇಷ ಪೂಜಾ ಕೈಂಕರ್ಯಗಳನ್ನು ಭಕ್ತಾದಿಗಳು ನೆರವೇರಿಸಿದರು.

ಇಂದು ದೇವಾಲಯದ ಮೂರ್ತಿಗಳಿಗೆ ವಿಶೇಷ ಹೂವಿನ ಅಲಂಕಾರ, ತೋಮಾಲೆ ಪೂಜೆ ನೆರವೇರಿಸಿ ಜನವರಿಯಲ್ಲಿ ಜರುಗುವ ರಥೋತ್ಸವದ ಮಾದರಿಯಲ್ಲೇ ಚಿಕ್ಕಜಾತ್ರೆಯೂ ಭಕ್ತಾದಿಗಳಿಂದ ವಿಜೃಂಭಣೆಯಿಂದ ನೆರವೇರಿತು ಹಾಗೂ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗುತ್ತದೆ.

ಬೆಟ್ಟದಪುರ: ಕೊನೆ ಶ್ರಾವಣ ಶನಿವಾರದ ಪೂಜೆ

ಬೆಟ್ಟದಪುರದ, ಸೆ.9– ಪ್ರಸಿದ್ಧ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಇಂದು ಶ್ರಾವಣ ಮಾಸದ ಕೊನೆಯ ಶನಿವಾರದ ಅಂಗವಾಗಿ ವಿಶೇಷ ಪೂಜೆ ಹೂವಿನ ಅಲಂಕಾರ ಕಾರ್ಯಕ್ರಮ ನೆರವೇರಿತು.



ಈ ದಿನದ ಹೂವಿನ ಅಲಂಕಾರವನ್ನು ರಾಜೇಶ್ವರಿ ನಾಗರಾಜ್, ಶ್ವೇತಾ ರಜನಿಕಾಂತ್ ಅವರು ನೆರವೇರಿಸಿದರು. ಪ್ರಧಾನ ಅರ್ಚಕ ಮೋಹನರವರು ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ ಹಾಗೂ ವಿವಿಧ ಪೂಜೆ, ಅಭಿಷೇಕಗಳ ಪೂಜೆ ನೆರವೇರಿಸಿದರು. ಪೂಜೆಗೆ ಬಂದ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಶ್ರೀ ಆಂಜನೇಯ ವಿಶೇಷ ಪೂಜೆಯನ್ನು ನೆರವೇರಿಸಿ, ಗ್ರಾಮದ ಮಹಿಳೆಯರು ಸ್ವಾಮಿಯ ಕೃಪೆಗೆ ಪಾತ್ರರಾದರು.

ಯಾಚೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 22 ಕೋ. ರೂ. ವಹಿವಾಟು

ತಿ.ನರಸೀಪುರ, ಸೆ.9– ಸಹಕಾರಿ ಕ್ಷೇತ್ರ ಬಲಗೊಳ್ಳಬೇಕಾದರೆ ಸಹಕಾರಿ ಸಂಸ್ಥೆಗಳ ಸೇವಾ ಸೌಲಭ್ಯಗಳು ಪ್ರಾಮಾಣಿಕವಾಗಿ ಜನರಿಗೆ ತಲುಪಬೇಕು. ಅದರಲ್ಲೂ ವಾರ್ಷಿಕವಾಗಿ 22 ಕೋಟಿ ವಹಿವಾಟು ನಡೆಸಿ, 55 ಲಕ್ಷ ವ್ಯಾಪಾರ ಲಾಭವನ್ನು ಗಳಿಸುತ್ತಿರುವ ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕೇಂದ್ರ ಸರಕಾರ ಈಗಷ್ಟೇ ಸೂಚಿಸಿರುವ ವಿವಿಧೋದ್ದೇಶ ಚಟುವಟಿಕೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಕ್ಕೆ ತಂದಿರುವ ಏಕೈಕ ಸಹಕಾರಿ ಸಂಸ್ಥೆಯಾಗಿದೆ ಎಂದು ಅಧ್ಯಕ್ಷ ವೈ.ಎನ್.ಶಂಕರೇಗೌಡ ಹೇಳಿದರು.



ತಾಲೂಕಿನ ಯಾಚೇನಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕಳೆದ ಒಂದೂವರೆ ದಶಕದಿಂದಲೂ ಸಾಲ ಮರುಪಾವತಿಯಲ್ಲಿ ಶೇ.100 ರಷ್ಟು ಪ್ರಗತಿಯನ್ನು ಹೊಂದಿರುವ ನಮ್ಮ ಸಂಘ ಎ ಗ್ರೇಡ್‌ನಲ್ಲಿದೆ. ಸಹಕಾರಿ ಸಂಘಗಳಿಗೆ ಲಾಭವಷ್ಟೇ ಮುಖ್ಯವಲ್ಲ. ಹಳ್ಳಿಗಾಡಿನ ಜನರಿಗೆ ಮತ್ತು ರೈತರಿಗೆ ಸೌಲಭ್ಯವನ್ನು ಕಲ್ಪಿಸಿ ಕೊಡುವುದು ಮುಖ್ಯವಾಗಿದೆ. ಷೇರುದಾರ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ 5000 ರೂಗಳ ಪ್ರೋತ್ಸಾಹ ಧನ ಜೊತೆಗೆ ಪ್ರತಿಭಾ ಪುರಸ್ಕಾರ, ಅಕಾಲಿಕ ಮರಣ ಹೊಂದಿದವರಿಗೆ 5000 ರೂ. ಸಾಂತ್ವನದ ನೆರವು, ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ನಂದಿನಿ ಹಾಲಿನ ಉತ್ಪನ್ನಗಳ ಮಾರಾಟ ಕೇಂದ್ರ, ಸೂಪರ್ ಮಾರ್ಕೆಟ್ ಹಾಗೂ ಪ್ರಧಾನ ಮಂತ್ರಿಗಳ ಜನೌಷಧ ಕೇಂದ್ರವನ್ನು ತೆರೆದಿರುವ ಏಕೈಕ ಸಹಕಾರಿ ಸಂಸ್ಥೆ ಎಂಬ ಹೆಗ್ಗಳಿಕೆ ನಮ್ಮದಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ನಿರ್ದೇಶಕ ವೈ.ಹೆಚ್. ಹನುಮಂತೇಗೌಡ ಮಾತನಾಡಿ, ಮಾರುಕಟ್ಟೆ ಫೆಡರೇಷನ್ ನಿರ್ದೇಶಕರಾಗಿದ್ದ ವೈ.ಎನ್.ಶಂಕರೇಗೌಡ ಅವರು, ಸಂಘಕ್ಕೆ 20 ಲಕ್ಷ ರೂಗಳ ದೇಣಿಗೆಯನ್ನು ನೀಡಿದ್ದು, ಆ ಹಣದಲ್ಲಿ ಪರ್ಯಾಯ ನಿವೇಶನವನ್ನು ಖರೀದಿಸುವ ಬಗ್ಗೆ ನಿರ್ಧರಿಸಲಾಗಿದೆ. ಅಧ್ಯಕ್ಷರ ಕುಟುಂಬ ವೈಯಕ್ತಿಕವಾಗಿ 8 ರಿಂದ 9 ಲಕ್ಷ ರೂಗಳ ವೆಚ್ಚದಲ್ಲಿ ಶವ ಸಾಗಿಸುವ ವಾಹನವನ್ನು ಸಂಘಕ್ಕೆ ನೀಡಿದ್ದರಿಂದ ಅದರ ಬಾಡಿಗೆ ಹಣವು ಸಂಘದ ಲಾಭವಾಗಿ ಸಂದಾಯವಾಗುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವೈ.ಕೆ.ಕ್ಯಾತೀಗೌಡ ಮಾತನಾಡಿದರು. ಕಳೆದ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವೈ.ಎನ್.ಶಂಕರೇಗೌಡ ಅವರು ವೈಯಕ್ತಿಕವಾಗಿ ನೀಡುವ 5000 ರೂ.ಗಳ ಪ್ರೋತ್ಸಾಹ ಧನದೊಂದಿಗೆ ಪುರಸ್ಕಾರ ನೀಡಲಾಯಿತು.

ಸಂಘದ ಉಪಾಧ್ಯಕ್ಷ ವೈ.ಎಂ.ಚಂದ್ರು ನಿರ್ದೇಶಕರಾದ ವೈ.ಕೆ.ಬೋರೇಗೌಡ, ವೈ.ಹೆಚ್.ಹನುಮಂತೇಗೌಡ, ವೈ.ಜಿ.ಮಹೇಂದ್ರ ಲಕ್ಷ್ಮಮ್ಮ ಸಿದ್ದೇಗೌಡ, ಹೆಚ್.ಪಿ.ಪ್ರತಿಭಾ ಮಲ್ಲೇಶ್, ಸೋಮಶೇಖರ್, ವೈ.ಎಂ.ಕೃಷ್ಣ(ಕಿಟ್ಟಿ), ನಾಗರಾಜು, ಬಿ.ಎಂ.ಶಿವಕುಮಾರ್, ಸಿದ್ದರಾಮು, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಮಲ್ಲೇಶ್, ಗ್ರಾ.ಪಂ ಸದಸ್ಯ ವೈ.ಎಸ್.ಶೇಖರ್, ಮಾಜಿ ಅಧ್ಯಕ್ಷೆ ಸರೋಜಮ್ಮ, ಗುಮಾಸ್ತ ವೈ.ಎನ್. ಮಹದೇವ್, ಮಾರಾಟಗಾರರಾದ ವೈ.ಎಂ.ದಿಲೀಪ್, ಎಸ್.ಎಸ್.ರಕ್ಷಿತ್, ಎನ್.ಎಂ.ನವೀನ್ ಕುಮಾರ್, ಬಿ.ಎಸ್.ರಶ್ಮಿ, ವೈ.ಆರ್.ನಂದಿನಿ, ಸಹಾಯಕರಾದ ನಂಜೇಗೌಡ, ಗೀತಾ ಹಾಗೂ ಷೇರುದಾರ ಸದಸ್ಯರು ಹಾಜರಿದ್ದರು.

ಮೋದಿ–ಸುನಕ್ ದ್ವಿಪಕ್ಷೀಯ ಮಾತುಕತೆ



ನವದೆಹಲಿ, ಸೆ. 9– ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರೊಂದಿಗೆ ಭಾರತ ಪ್ರಧಾನಿ ನರೇಂದ್ರ ಮೋದಿ ಶನಿವಾರ ಮಾತುಕತೆ ನಡೆಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಬರೆದುಕೊಂಡಿರುವ ಪ್ರಧಾನಿ ಮೋದಿ, ವ್ಯಾಪಾರ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಲು ಮತ್ತು ಹೂಡಿಕೆಯನ್ನು ಉತ್ತೇಜಿಸುವ ಕುರಿತು ಚರ್ಚೆ ನಡೆಸಿದ್ದೇವೆ. ಭಾರತ ಹಾಗೂ ಬ್ರಿಟನ್ ಸಮೃದ್ಧ ಮತ್ತು ಜಾಗತಿಕ ಸುಸ್ಥಿರ ಅಭಿವೃದ್ಧಿವಾಗಿ ಕೆಲಸ ಮಾಡಲಿವೆ ಎಂದು ಹೇಳಿದ್ದಾರೆ. ಈ ಮೊದಲು ಭಾರತಕ್ಕೆ ಆಗಮಿಸಲು ಖುಷಿಯಾಗುತ್ತಿದೆ ಎಂದು ರಿಷಿ ಸುನಕ್ ಹೇಳಿದ್ದರು. ನನ್ನ ಮೂಲ ಭಾರತವಾಗಿದ್ದು, ಈ ಬಗ್ಗೆ ಹೆಮ್ಮೆ ಇದೆ ಎಂದು ತಿಳಿಸಿದ್ದರು.

ಜಪಾನ್ ಪ್ರಧಾನಿ ಜೊತೆ ಪ್ರಧಾನಿ ಮೋದಿ ಮಾತುಕತೆ



ನವದೆಹಲಿ, ಸೆ. 9– ಜಿ–20 ಶೃಂಗಸಭೆಯ ಪಾರ್ಶ್ವದಲ್ಲಿ ಪ್ರಧಾನಿ ನರೇಂದ್ರ ಮೋದಿ ಜಪಾನ್ ಪ್ರಧಾನಿ ಫುಮಿಯೋ ಕಿಶಿದಾ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಜಪಾನ್ ಹಾಗೂ ಭಾರತ ಉಭಯ ದೇಶಗಳು ವಾಣಿಜ್ಯ, ಸಂಪರ್ಕ, ಇತರ ಕ್ಷೇತ್ರಗಳಲ್ಲಿ ಸಂಬಂಧ ವಿಸ್ತರಣೆಗೆ ಉತ್ಸುಕವಾಗಿವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಪ್ರಧಾನಿ ಕಿಶಿಡಾ ಅವರೊಂದಿಗೆ ರಚನಾತ್ಮಕ ಮಾತುಕತೆಗಳು ನಡೆದಿದ್ದು, ಸಂಪರ್ಕ, ವಾಣಿಜ್ಯ ಮತ್ತು ಇತರ ವಲಯಗಳಲ್ಲಿ ಸಹಕಾರವನ್ನು ಹೆಚ್ಚಿಸಲು ನಾವು ಉತ್ಸುಕರಾಗಿದ್ದೇವೆ" ಎಂದು ಮೋದಿ ಎಕ್ಸ್‌ನಲ್ಲಿ ಹೇಳಿದರು. ಜಿ–20 ಶೃಂಗಸಭೆಯ ಅಂಗವಾಗಿ ಭಾರತಕ್ಕೆ ವಿದೇಶಗಳ ನಾಯಕರು ಆಗಮಿಸಿದ್ದು ಪ್ರಧಾನಿ ಮೋದಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಗಮನ ಸೆಳೆಯುತ್ತಿದೆ ಒಡಿಶಾ ಸೂರ್ಯ ದೇಗುಲದ ಕೋನಾರ್ಕ್ ಚಕ್ರ



ನವದೆಹಲಿ, ಸೆ. 9– ರಾಷ್ಟ್ರ ರಾಜಧಾನಿ ನವದೆಹಲಿಯ ಜಿ20 ಶೃಂಗಸಭೆ ಶನಿವಾರ ಆರಂಭಗೊಂಡಿದ್ದು, ಪ್ರಗತಿ ಮೈದಾನದಲ್ಲಿರುವ ಭಾರತ ಮಂಟಪದಲ್ಲಿ ಜಿ20 ನಾಯಕರನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಬರಮಾಡಿಕೊಂಡರು. ಹಸ್ತಲಾಘವ ನೀಡುವ ಮೂಲಕ ಜಿ20 ನಾಯಕರನ್ನು ಪ್ರಧಾನಿ ಮೋದಿಯವರು ಸ್ವಾಗತಿಸಿದರು. ಈ ವೇಳೆ ಸ್ಥಳದ ಹಿಂಬದಿಯಲ್ಲಿ ಒಡಿಶಾದ ಸೂರ್ಯ ದೇಗುಲದ ಕೋನಾರ್ಕ್ ಚಕ್ರವನ್ನು ಪ್ರದರ್ಶಿಸಲಾಗಿದ್ದು, ಇದು ಎಲ್ಲರ ಗಮನ ಸೆಳೆಯುತ್ತಿದೆ.

ಶೃಂಗಸಭೆಯ ಹಿನ್ನೆಲೆಯಲ್ಲಿ ರಾಷ್ಟ್ರದ ರಾಜಧಾನಿಯಾದ್ಯಂತ ಸರ್ಕಾರವು ಅನೇಕ ಸಾಂಸ್ಕೃತಿಕ ಸಂಕೇತಗಳನ್ನು ಸ್ಥಾಪನೆ ಮಾಡಿದ್ದು, ಇದರಲ್ಲಿ ಕೋನಾರ್ಕ್ ಚಕ್ರವೂ ಒಂದಾಗಿದೆ. 'ಒಂದು ಭೂಮಿ' ಶೀರ್ಷಿಕೆಯ ಮೊದಲ ಅಧಿವೇಶನ ಇಂದು ಬೆಳಗ್ಗೆ 10.30ಕ್ಕೆ ಆರಂಭಗೊಂಡಿದೆ. ಇದು ಭಾರತದ ಅಧ್ಯಕ್ಷತೆಯಲ್ಲಿನ ಈ ವರ್ಷದ ಶೃಂಗಸಭೆಯ ಥೀಮ್ "ವಸುಧೈವ ಕುಟುಂಬಕಂ"ಗೆ ಅನುಗುಣವಾಗಿದೆ.

ಕೋನಾರ್ಕ್ ಚಕ್ರವನ್ನು 13 ನೇ ಶತಮಾನದಲ್ಲಿ ರಾಜ ನರಸಿಂಹದೇವ–I ರ ಆಳ್ವಿಕೆಯಲ್ಲಿ ನಿರ್ಮಿಸಲಾಯಿತು. 24 ಕಡ್ಡಿಗಳ ಚಕ್ರವನ್ನು ಭಾರತದ ರಾಷ್ಟ್ರೀಯ ಧ್ವಜಕ್ಕೆ ಅಳವಡಿಸಲಾಗಿದೆ ಮತ್ತು ಭಾರತದ ಪ್ರಾಚೀನ ಬುದ್ಧಿವಂತಿಕೆ, ಮುಂದುವರಿದ ನಾಗರಿಕತೆ ಮತ್ತು ಕೃಷಿ ಶ್ರೇಷ್ಠತೆಯನ್ನು ಸಾರುತ್ತದೆ.

ಕೋನಾರ್ಕ್ ಚಕ್ರದ ತಿರುಗುವ ಚಲನೆಯು ಸಮಯ ಮತ್ತು ಪ್ರಗತಿ ಮತ್ತು ನಿರಂತರ ಬದಲಾವಣೆಯನ್ನು ಸಂಕೇತಿಸುತ್ತದೆ. ಇದು ಪ್ರಜಾಪ್ರಭುತ್ವದ ಚಕ್ರದ ಸಂಕೇತವಾಗಿ ಕಾರ್ಯನಿರ್ವಹಿಸುತ್ತದೆ, ಇದು ಪ್ರಜಾಪ್ರಭುತ್ವದ ಆದರ್ಶಗಳ ಸ್ಥಿತಿಸ್ಥಾಪಕತ್ವ ಮತ್ತು ಸಮಾಜದಲ್ಲಿ ಪ್ರಗತಿಗೆ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಇಂದು ಅಕ್ಷರಧಾಮಕ್ಕೆ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಭೇಟಿ



ನವದೆಹಲಿ, ಸೆ 9– ಜಿ20 ಶೃಂಗಸಭೆಗಾಗಿ ದೆಹಲಿಗೆ ಆಗಮಿಸಿರುವ ಯುನೈಟೆಡ್ ಕಿಂಗ್‌ಡಮ್ ಪ್ರಧಾನಿ ರಿಷಿ ಸುನಕ್ ಅವರು ಭಾನುವಾರ ದೆಹಲಿಯ ಅಕ್ಷರಧಾಮ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ.

ಇಂದು ಎಎನ್‌ಐ ಜೊತೆ ಮಾತನಾಡಿದ ಬ್ರಿಟನ್ ಪ್ರಧಾನಿ ರಿಷಿ, ನಾಳೆ ದೆಹಲಿಯ ಅಕ್ಷರಧಾಮ ದೇವಸ್ಥಾನಕ್ಕೆ ಭೇಟಿ ನೀಡುವುದಾಗಿ ತಿಳಿಸಿದ್ದಾರೆ.

ತಮ್ಮ 'ಹಿಂದೂ' ಬೇರುಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ ರಿಷಿ ಸುನಕ್, ಜಿ20 ಶೃಂಗಸಭೆಯ ಸಮಯದಲ್ಲಿ ಬಿಡುವು ಮಾಡಿಕೊಂಡು ಭಾರತದಲ್ಲಿನ ದೇವಾಲಯಗಳಿಗೆ ಭೇಟಿ ನೀಡುವುದಾಗಿ ಹೇಳಿದ್ದಾರೆ. ಪ್ರಧಾನಿ ಮೋದಿಯವರ ಬಗ್ಗೆ ಅಗಾಧವಾದ ಗೌರವ' ಇದೆ ಮತ್ತು ಜಿ20 ಶೃಂಗಸಭೆ ದೊಡ್ಡ ಯಶಸ್ಸು ಕಾಣಲು ತಾವು ಅವರನ್ನು ಬೆಂಬಲಿಸಲು ಉತ್ಸುಕರಾಗಿರುವುದಾಗಿ ಬ್ರಿಟನ್ ಪ್ರಧಾನಿ ತಿಳಿಸಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು